# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಗುರುವಾರ, ಆಗಸ್ಟ್ 18, 2022

ಸಂಪುಟ : 49 ಸಂಚಿಕೆ : 96 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಪವಿತ್ರ ಸ್ನೇಹ ಪರಸ್ಪರರಲ್ಲಿ ಇರಬೇಕು

## ಬ್ರಹ್ಮಾಕುಮಾರಿ ಲೀಲಾಜಿ ನೇತೃತ್ವದಲ್ಲಿ ಪೌರಕಾರ್ಮಿಕರಿಗೆ ರಕ್ಷಾ ಬಂಧನ

ದಾವಣಗೆರೆ, ಆ.17- ಸಹೋದರ-ಸಹೋದರಿಯರ ಪ್ರೀತಿ ಪವಿತ್ರವಾಗಿದ್ದು, ಇಂತಹ ಪವಿತ್ರ ಸ್ನೇಹ ಪರಸ್ಪರರಲ್ಲಿ ಇರಬೇಕು. ಈ ಸ್ನೇಹದ ಸಂಕೇತವೇ ರಕ್ಷಾ ಬಂಧನ ಎಂದು ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ತಿಳಿಸಿದರು.

ಅವರು, ಇಂದು ನಗರದ ನಗರ ಪಾಲಿಕೆ ಸಭಾಂಗಣದಲ್ಲಿ ಇಲ್ಲಿನ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದಿಂದ ಹಮ್ಮಿಕೊಂಡಿದ್ದ ರಕ್ಷಾ ಬಂಧನ, ಶ್ರೀಕೃಷ್ಣ ಜನ್ಮಾಷ್ಟಮಿ ಮತ್ತು ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ರಕ್ಷಾ ಬಂಧನ ಹಬ್ಬವು ಸ್ನೇಹದ ಹಬ್ಬ. ಒಡಹುಟ್ಟಿದ ಸಹೋದರ-ಸಹೋದರಿಯರಷ್ಟೇ ರಾಖಿ ಕಟ್ಟಬೇಕು ಎಂಬುದಲ್ಲ. ಎಲ್ಲರಿಗೂ ರಕ್ಷಣೆ ಬೇಕು. ಒಡಹುಟ್ಟಿದ ಸಹೋದರರು ದೂರದಲ್ಲಿದ್ದಾಗ ರಕ್ಷಣೆ ಮಾಡಲು ಬರಲು ಸಾಧ್ಯವಿರುವುದಿಲ್ಲ. ಸಹೋದರತ್ವದ ಭಾವನೆಯಿಂದ ಕಂಡವರೇ ನಮಗೆ ಕಷ್ಟ ಬಂದಾಗ ರಕ್ಷಣೆಗೆ ಬರುತ್ತಾರೆ ಎಂದು ಹೇಳಿದರು.

ಭಾರತೀಯರು ಆಚರಿಸುವ ಹಬ್ಬಗಳಲ್ಲಿ ರಕ್ಷಾ ಬಂಧನ ಮುಖ್ಯವಾದ ಹಬ್ಬ. ರಕ್ಷಾ ಬಂಧನ ಶಬ್ದಗಳಲ್ಲಿ ಎರಡು ಪದಗಳಿವೆ. ರಕ್ಷಾ ಅಂದರೆ ರಕ್ಷಣೆ ನಮ್ಮ ರಕ್ಷಣೆಯ ಜೊತೆಗೆ ಬೇರೆಯವರ ರಕ್ಷಿಸುವುದಾಗಿದೆ. ಅಂತೆಯೇ ಬಂಧನ ಅಂದರೆ ನಾವು ಕಟ್ಟಿಕೊಂಡು ಬೇರೆಯವರಿಗೂ ಕಟ್ಟುವುದು. ರಕ್ಷಾ ಬಂಧನವೆಂಬುದು ಎಲ್ಲರೂ ಇಷ್ಟಪಟ್ಟು ಕಟ್ಟಿಕೊಳ್ಳುವ ಬಂಧನವಾಗಿದೆ ಎಂದು ವಿಶ್ಲೇಷಿಸಿದರು.

ರಕ್ಷಾ ಬಂಧನವೂ ಸಹ ಪ್ರತಿಜ್ಞೆ ಪಾಲನೆಯ ಕಂಕಣವಾಗಿದೆ. ಮದ್ಯ ವ್ಯಸನ ಸೇರಿದಂತೆ ದುಶ್ಚಟಗಳು, (2ನೇ ಪುಟಕ್ಕೆ)

# ಬಿಜೆಪಿ ಉನ್ನತ ಮಂಡಳಿಗೆ ಬಿಎಸ್‌ವೈ

## ಕೇಂದ್ರ ಸಚಿವ ಗಡ್ಕರಿ, ಚೌಹಾಣ್ ಹೊರಕ್ಕೆ

ನವದೆಹಲಿ, ಆ. 17 – ಬಿಜೆಪಿ ಸಂಸದೀಯ ಮಂಡಳಿಯಿಂದ ಕೇಂದ್ರ ಸಚಿವ ನಿತಿನ್ ಗಡ್ಕರಿ ಹಾಗೂ ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಕೈ ಬಿಡಲಾಗಿದ್ದು, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸೇರ್ಪಡೆ ಮಾಡಿಕೊಳ್ಳಲಾಗಿದೆ.



ಕೇಂದ್ರ ಸಚಿವ ಸದಾನಂದ ಸೋನಾವಲ್, ಕೆ. ಲಕ್ಷ್ಮಣ, ಸುಧಾ ಯಾದವ್, ಇಕ್ಬಾಲ್ ಸಿಂಗ್ ಲಾಲ್‌ಪುರ ಹಾಗೂ ಸತ್ಯನಾರಾಯಣ್ ಜಟಿಯ ಅವರು ಮಂಡಳಿಗೆ ಹೊಸದಾಗಿ ಸೇರಿದ್ದಾರೆ. ಸಂಸದೀಯ ಮಂಡಳಿಯಲ್ಲಿ ಸಾಮಾಜಿಕ ಹಾಗೂ ಪ್ರಾಂತೀಯ ಪ್ರಾತಿನಿಧ್ಯ ಹೆಚ್ಚಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಲಾಲ್‌ಪುರ ಅವರು ಬಿಜೆಪಿ ಸಂಸದೀಯ ಮಂಡಳಿಯಲ್ಲಿ ಸ್ಥಾನ ಪಡೆದ ಮೊದಲ ಸಿಖ್ ಆಗಿದ್ದಾರೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಷಾ ಹಾಗೂ ರಾಜನಾಥ್ ಸಿಂಗ್ ಮತ್ತು ಜೆ.ಪಿ. ನಡ್ಡಾ ಮತ್ತಿತರರು ಮಂಡಳಿ ಸದಸ್ಯರಾಗಿದ್ದಾರೆ.

ಕೇಂದ್ರ ಚುನಾವಣಾ ಸಮಿತಿಯಲ್ಲೂ ಬದಲಾವಣೆ ತರಲಾಗಿದ್ದು, ಮಹಾರಾಷ್ಟ್ರದ ಮಾಜಿ ಸಚಿವ ದೇವೇಂದ್ರ ಫಡ್ನವೀಸ್, ಕೇಂದ್ರ ಸಚಿವ ಭೂಪೇಂದ್ರ ಯಾದವ್, ಓಂ ಮಾಥುರ್ ಹಾಗೂ ಮಹಿಳಾ ವಿಭಾಗದ ಮುಖ್ಯಸ್ಥೆ ವಾನತಿ ಶ್ರೀನಿವಾಸನ್ ಅವರನ್ನು ಸೇರ್ಪಡೆ ಮಾಡಿಕೊಳ್ಳಲಾಗಿದೆ.

ಮಾಜಿ ಕೇಂದ್ರ ಸಚಿವ ಶಾನವಾಜ್ ಹುಸೇನ್ ಹಾಗೂ ಜುವಾಲ್ ಒರಂ ಅವರನ್ನು ಚುನಾವಣಾ ಸಮಿತಿಯಿಂದ ಕೈ ಬಿಡಲಾಗಿದೆ.

## ಚುನಾವಣೆ ಮೇಲೆ ಕಣ್ಣು, ಬಿಎಸ್‌ವೈ ನಿರ್ಲಕ್ಷಿಸುವುದಿಲ್ಲ ಎಂಬ ಸಂದೇಶ

ಬೆಂಗಳೂರು, ಆ. 17 - ಮುಂಬರುವ ವಿಧಾನಸಭಾ ಚುನಾವಣೆ ಗಮನದಲ್ಲಿಟ್ಟುಕೊಂಡು ಮಾಜಿ ಮುಖ್ಯಮಂತ್ರಿ ಬಿ. ಎಸ್. ಯಡಿಯೂರಪ್ಪ ಅವರನ್ನು ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರಾಗಿ ಬಿಜೆಪಿ ನೇಮಕ ಮಾಡಿದೆ.

**ಸಂಸದೀಯ ಮಂಡಳಿಯಲ್ಲಿ ಉನ್ನತ ಸ್ಥಾನದ ಹಿಂದೆ ರಾಜಕೀಯ ಲೆಕ್ಕಾಚಾರ**

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಅಧ್ಯಕ್ಷತೆಯ ಮಂಡಳಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಕೇಂದ್ರ ಗೃಹ ಸಚಿವ ಅಮಿತ್ ಷಾ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಸೇರಿದಂತೆ ಹನ್ನೊಂದು ಮಂದಿ ಇದ್ದಾರೆ.

ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರಾಗಿ ನೇಮಕಗೊಂಡಿರುವ ಯಡಿಯೂರಪ್ಪ, ಇದೇ ಸಂದರ್ಭದಲ್ಲಿ ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿಯ ಸದಸ್ಯರಾಗಿಯೂ ನೇಮಕಗೊಂಡಿದ್ದಾರೆ.

ಚುನಾವಣಾ ರಾಜಕೀಯ ನಿವೃತ್ತಿ ಘೋಷಣೆ ಮಾಡಿದ ನಂತರ ಬಿಜೆಪಿ ಯಡಿಯೂರಪ್ಪ ಅವರಿಗೆ ಉನ್ನತ ಹುದ್ದೆ ನೀಡಿ, (2ನೇ ಪುಟಕ್ಕೆ)

# ಭದ್ರಾ ಸೇರಿದಂತೆ 12 ಜಲಾಶಯಗಳಲ್ಲಿ ಗರಿಷ್ಠ ಮೀನು ಉತ್ಪಾದನೆಗೆ ನಿರ್ಧಾರ

ಬೆಂಗಳೂರು, ಆ. 17 - ಕೊರೊನಾ ಸೋಂಕಿನ ನಂತರ ಜನರಲ್ಲಿ ಪೌಷ್ಠಿಕ ಆಹಾರ ಕೊರತೆ ನೀಗಿಸಲು ಯಥೇಚ್ಚ ಮೀನು ಸರಬರಾಜು ಮಾಡಲು ಸರ್ಕಾರ ನಿರ್ಧರಿಸಿದೆ.

ಪ್ರತಿ ಗ್ರಾಮ ಮತ್ತು ನಗರ, ಪಟ್ಟಣಗಳಲ್ಲೂ ವಿವಿಧ ಬಗೆಯ ಮೀನುಗಳು ಸುಲಭವಾಗಿ ದಕ್ಕುವಂತೆ ಮಾಡಲಾಗುವುದು ಎಂದು ಮೀನುಗಾರಿಕೆ ಮತ್ತು ಬಂದರು ಖಾತೆ ಸಚಿವ ಎಸ್. ಅಂಗಾರ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀನು ಮತ್ತು ಅದರ ಖಾದ್ಯಗಳನ್ನು ಸುಲಭವಾಗಿ ದೊರಕಿಸಬೇಕೆಂಬ ಉದ್ದೇಶದಿಂದ ಖಾಸಗಿ ಸಹಭಾಗಿತ್ವದಲ್ಲಿ ರಾಜ್ಯಾದ್ಯಂತ ಮೀನು ಊಟದ ಹೋಟೆಲ್‌ಗಳನ್ನು ಪ್ರಾರಂಭಿಸಲಾಗುವುದು ಎಂದರು.

ಕೆ.ಆರ್.ಎಸ್., ಆಲಮಟ್ಟಿ, ಲಿಂಗನಮಕ್ಕಿ, ಭದ್ರಾ ಸೇರಿದಂತೆ ರಾಜ್ಯದ ಹನ್ನೆರಡು ಪ್ರಮುಖ ಜಲಾಶಯಗಳಲ್ಲಿ ಗರಿಷ್ಠ ಪ್ರಮಾಣದ ಮೀನು ಉತ್ಪಾದನೆ ಮಾಡಲು ತೀರ್ಮಾನಿಸಿದೆ. (3ನೇ ಪುಟಕ್ಕೆ)

## ತುರ್ತು ಸಾಲ ಗ್ಯಾರಂಟಿಗೆ 50 ಸಾವಿರ ಕೋಟಿ ರೂ.

ನವದೆಹಲಿ, ಆ. 17 – ತುರ್ತು ಸಾಲ ಗ್ಯಾರಂಟಿ ಯೋಜನೆ (ಇ.ಸಿ.ಎಲ್.ಜಿ.ಎಸ್.) ಮೂಲಕ ಹೋಟೆಲ್ ವಲಯಕ್ಕೆ ನೀಡಲಾಗುವ ಸಾಲವನ್ನು 50 ಸಾವಿರ ಕೋಟಿ ರೂ.ಗಳಷ್ಟು ಹೆಚ್ಚಿಸಲು ಕೇಂದ್ರ ಸಂಪುಟ ನಿರ್ಧರಿಸಿದೆ.

ಕೊರೊನಾದಿಂದ ಹೊಡೆತ ತಿಂದಿರುವ ಹೋಟೆಲ್ ವಲಯಕ್ಕೆ ನೆರವಾಗಲು ಕೇಂದ್ರ ಸರ್ಕಾರ 4.5 ಲಕ್ಷ ಕೋಟಿ (3ನೇ ಪುಟಕ್ಕೆ)

# ಖಾತ್ರಿ ಯೋಜನೆ ಪ್ರಗತಿ ಕುಂಠಿತ

## ಜಗಳೂರು: ಸಭೆಯಲ್ಲಿ ಜಿಪಂ ಸಿಇಒ ಅಸಮಾಧಾನ

ಜಗಳೂರು, ಆ.17- ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ನೀಡಿದ ಮಾನವ ದಿನಗಳ ಗುರಿಯನ್ನು ನಿಗದಿತ ದಿನಗಳಲ್ಲಿ ಪೂರ್ಣಗೊಳಿಸಬೇಕು. ಕೂಲಿ ಕಾರ್ಮಿಕರಿಗೆ ವಿಳಂಬ ಮಾಡದೇ ಕೆಲಸ ನೀಡಬೇಕು ಎಂದು ಜಿ.ಪಂ ಸಿಇಓ ಡಾ.ಸಿ.ಚನ್ನಪ್ಪ ಖಡಕ್ ಎಚ್ಚರಿಕೆ ನೀಡಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಗ್ರಾಮ ಪಂಚಾಯಿತಿ ಪಿಡಿಓ ಗಳ ಮತ್ತು ತಾಂತ್ರಿಕ ಸಿಬ್ಬಂದಿಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕಿನ ವಿವಿಧ ಗ್ರಾ.ಪಂ ಗಳ ಪಿಡಿಓ ಗಳಾದ ಮರುಳಸಿದ್ದಪ್ಪ, ಶಿವಕುಮಾರ್, ಓಬಯ್ಯ, ಲೋಹಿತ್, ಶಶಿಧರ ಪಟೇಲ್, ವಾಸುದೇವ ಅವರಿಂದ ಉದ್ಯೋಗ ಖಾತ್ರಿ ಯೋಜನೆಯಡಿ ನೀಡಿದ ಅಂದಾಜು ಮಾನವ ದಿನಗಳ ಗುರಿಯನ್ನು 4 ತಿಂಗಳು ಕಳೆದರೂ ಪೂರ್ಣಗೊಳಿಸಿಲ್ಲ. ಪ್ರಗತಿ ಕುಂಠಿತವಾಗಿದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕೆಲಸ ಅಸಮಾಧಾನ ತಂದಿದೆ ಎಂದು ತರಾಟೆಗೆ ತೆಗೆದುಕೊಂಡರು.

**ತಾಲ್ಲೂನಲ್ಲಿ ಖಾತ್ರಿ ಯೋಜನೆ ಕಾಮಗಾರಿ ಸಮರ್ಪಕ ಜಾರಿಗೊಳಿಸುವಲ್ಲಿ ಪಿಡಿಓ ಗಳು ನಿರ್ಲಕ್ಷ್ಯವಹಿಸಿದ್ದಾರೆ. ಪಿಡಿಓ ಗಳು ಮನಸ್ಥಿತಿ ಬದಲಾಯಿಸಿಕೊಂಡು ಜನರ ಮಧ್ಯೆ ಹೋಗಿ ಕೆಲಸಮಾಡಬೇಕು. ಜನರ ಮಧ್ಯೆ ಯಾರೂ ಹೋಗುತ್ತಿಲ್ಲ ಜಿಡ್ಡುಗಟ್ಟಿದ ವಾತಾವರಣ ಸೃಷ್ಟಿಯಾಗಿದೆ.**

**- ಡಾ.ಸಿ.ಚನ್ನಪ್ಪ, ಸಿಇಓ, ಜಿ.ಪಂ.**

ಕಾಮಗಾರಿಗಳ ಪ್ರಗತಿಗೆ ಶ್ರಮಿಸಬೇಕು. ಸುಳ್ಳು ನೆಪಗಳನ್ನು ಹೇಳಬಾರದು. ನೀವು ಮಾಡುವ ಕೆಲಸದಲ್ಲಿ ನಿಮಗೆ ತೃಪ್ತಿ (3ನೇ ಪುಟಕ್ಕೆ)

## ಸಿಯುಇಟಿ ಪರೀಕ್ಷೆಯಲ್ಲಿ ಮುಂದುವರೆದ ದೋಷ

ನವದೆಹಲಿ, ಆ. 17 ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಪ್ರವೇಶಕ್ಕೆ ನಡೆಸಲಾಗುತ್ತಿರುವ ಸಿ.ಯು.ಇ.ಟಿ. ಪರೀಕ್ಷೆಯ ನಾಲ್ಕನೇ ಹಂತದಲ್ಲೂ ತಾಂತ್ರಿಕ ದೋಷಗಳು ಕಂಡು ಬಂದಿವೆ. ಹಲವಾರು ಕೇಂದ್ರಗಳಲ್ಲಿ ಪರೀಕ್ಷೆ ರದ್ದುಗೊಳಿಸಲಾಗಿದೆ ಎಂದು ವಿದ್ಯಾರ್ಥಿಗಳು ತಿಳಿಸಿದ್ದಾರೆ.

ಬುಧವಾರ ಪರೀಕ್ಷೆ ಬರೆಯಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಮತ್ತೊಂದು ಅವಕಾಶ ನೀಡಲಾಗುವುದು ಎಂದು ಯು.ಜಿ.ಸಿ. ತಿಳಿಸಿದೆ. ನಿಗದಿತ ಸಮಯಕ್ಕಿಂತ ಎರಡು ಗಂಟೆ ತಡವಾಗಿ ಪರೀಕ್ಷೆ ಆರಂಭವಾಯಿತು ಎಂದೂ ಕೆಲ ವಿದ್ಯಾರ್ಥಿಗಳು ದೂರಿದ್ದಾರೆ.

ನಾಲ್ಕನೇ ಹಂತದ ಪರೀಕ್ಷೆಯಲ್ಲಿ 3.6 ಲಕ್ಷ ವಿದ್ಯಾರ್ಥಿಗಳು ಭಾಗವಹಿಸಬೇಕಿತ್ತು.

ಆಗಸ್ಟ್ 20ರಂದು ಸಿಯುಇಟಿ ಪರೀಕ್ಷೆ ಮುಗಿಸಲು ಮೊದಲು ಯೋಜಿಸಲಾಗಿತ್ತು. ಆದರೆ, ತಾಂತ್ರಿಕ ತೊಡಕುಗಳ ಕಾರಣದಿಂದಾಗಿ ಪರೀಕ್ಷೆ ಆಗಸ್ಟ್ 28ರವರೆಗೆ ನಡೆಯಲಿದೆ. ಈಗ ಮತ್ತಷ್ಟು ತೊಡಕುಗಳು ಎದುರಾದ ಕಾರಣ, ಪರೀಕ್ಷೆ ಅವಧಿಯನ್ನು ಆರು ಹಂತಗಳಿಗೆ ವಿಸ್ತರಿಸಲಾಗಿದೆ.

# ಶಾಲೆಗೆ ಹಾಜರಾಗದ ಶಿಕ್ಷಕರು, ಸಿಬ್ಬಂದಿ ಸಮಯ ಪಾಲಿಸದಿದ್ದರೆ ಕ್ರಮ : ಸಚಿವ ನಾಗೇಶ್ ಎಚ್ಚರಿಕೆ

ಬೆಂಗಳೂರು, ಆ.17 - ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ನಿಗದಿತ ಸಮಯಕ್ಕೆ ಶಿಕ್ಷಕರು ಮತ್ತು ಸಿಬ್ಬಂದಿ ಹಾಜರಾಗದಿದ್ದರೆ ಅಂತಹವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.


ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಇತ್ತೀಚೆಗೆ ನಾನು ಕೆಲವು ಶಾಲೆಗಳಿಗೆ ಹಠಾತ್ ಆಗಿ ಭೇಟಿ ನೀಡಿದ ಸಂದರ್ಭದಲ್ಲಿ ಸಮಯ ಮೀರಿದರೂ, ವಿದ್ಯಾರ್ಥಿಗಳು ಶಿಕ್ಷಕರಿಗಾಗಿ ಕಾಯುತ್ತಿದ್ದರು ಎಂದು ಹೇಳಿದರು.

ಮಕ್ಕಳನ್ನು ಬೋಧನೆಯಿಂದ ವಂಚಿತರಾಗಿಸಿ, ಅವರ ಸುರಕ್ಷತೆಗೆ ಧಕ್ಕೆ ತರಬಹುದಾದ ಶಿಕ್ಷಕರ ಗೈರು ಹಾಜರಿಯನ್ನು ಗಂಭೀರವಾಗಿ ಪರಿಗಣಿಸಿ, ಇದನ್ನು ತುರ್ತಾಗಿ ಪಾಲಿಸಿ ಎಂದು ಹಿರಿಯ (2ನೇ ಪುಟಕ್ಕೆ)

# ಪಿಎಂ2.5 ಮಾಲಿನ್ಯ: 20ರಲ್ಲಿ 18 ನಗರಗಳು ಭಾರತದಲ್ಲಿ

ನವದೆಹಲಿ, ಆ. 17 – ಪಿಎಂ2.5 ಮಾಲಿನ್ಯ ಕಣದ ಮಾಲಿನ್ಯ ಅತಿ ಹೆಚ್ಚಾಗಿರುವ ವಿಶ್ವದ 20 ನಗರಗಳಲ್ಲಿ 18 ಭಾರತದಲ್ಲಿ ಇವೆ ಎಂದು ಅಧ್ಯಯನವೊಂದು ತಿಳಿಸಿದೆ. 2010ರಿಂದ 2019ರ ನಡುವೆ 7 ಸಾವಿರಕ್ಕೂ ಹೆಚ್ಚು ನಗರಗಳ ಅಧ್ಯಯನ ನಡೆಸಿ ಈ ವರದಿ ರೂಪಿಸಲಾಗಿದೆ. ಅಮೆರಿಕದ ಸಂಶೋಧನಾ ಸಂಘಟನೆಯಾದ ಹೆಲ್ತ್ ಎಫೆಕ್ಟ್ಸ್ ಇನ್‌ಸ್ಟಿಟ್ಯೂಟ್ (ಹೆಚ್.ಇ.ಐ.) ರೂಪಿಸಿರುವ ಈ ವರದಿಯ ಪ್ರಕಾರ, ವಿಶ್ವದ ಜನನಿಬಿಡ ನಗರಗಳಲ್ಲಿ ರಾಜಧಾನಿ ದೆಹಲಿಯಲ್ಲಿ ಅತಿ ಹೆಚ್ಚು ಪಿಎಂ2.5 ಕಣಗಳಿವೆ.

ಆರೋಗ್ಯಕ್ಕೆ ಅತ್ಯಂತ ಹಾನಿಕರವಾದ ಪಿಎಂ2.5 ಕಣಗಳು ಹಾಗೂ ನೈಟ್ರೋಜನ್ ಡೈಆಕ್ಸೈಡ್ ಅನ್ನು ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡು ಅಧ್ಯಯನ ನಡೆಸಲಾಗಿತ್ತು. 7,239 ನಗರಗಳಲ್ಲಿ ಪಿಎಂ2.5 ಕಣಗಳ ಪರಿಣಾಮದ ಕುರಿತು ಅಧ್ಯಯನ ನಡೆಸಲಾಗಿತ್ತು. ಈ ಮಾಲಿನ್ಯ (3ನೇ ಪುಟಕ್ಕೆ)



# ಭದ್ರಾ ಕಾಡಾ ಕಾಮಗಾರಿಗಳಿಗೆ ಅನುದಾನ ಕೊಡಿಸಿ, ಋಣ ತೀರಿಸಿ

## ಶಾಸಕರಿಗೆ ಭದ್ರಾ ಕಾಡಾ ಅಧ್ಯಕ್ಷೆ ಪವಿತ್ರಾ ರಾಮಯ್ಯ ಮನವಿ



ಮಲೇಬೆನ್ನೂರು, ಆ. 17 - ವಿಧಾನಸಭೆ ಚುನಾವಣೆ ಹತ್ತಿರ ಬರುತ್ತಿದೆ. ಭದ್ರಾ ಅಚ್ಚುಕಟ್ಟಿನ ಶಾಸಕರು, ಸಂಸದರು ಸರ್ಕಾರದ ಮೇಲೆ ಒತ್ತಡ ಹಾಕಿ ಭದ್ರಾ ಕಾಡಾ ವ್ಯಾಪ್ತಿಯಲ್ಲಿ ರಸ್ತೆ, ಬಸಿಗಾಲುವೆ ಕಾಮಗಾರಿಗಳಿಗೆ ಕೂಡಲೇ ಅನುದಾನ ಬಿಡುಗಡೆ ಮಾಡಿಸುವ ಮೂಲಕ ರೈತರ ಋಣ ತೀರಿಸಿ ಎಂದು ಭದ್ರಾ ಕಾಡಾ ಅಧ್ಯಕ್ಷೆ ಶ್ರೀಮತಿ ಪವಿತ್ರ ರಾಮಯ್ಯ ಮನವಿ ಮಾಡಿದರು.

ಅವರು ಬುಧವಾರ ಪಟ್ಟಣದಲ್ಲಿರುವ ಭದ್ರಾ ನಾಲಾ ನಂ.3 ವಿಭಾಗದ ಇಂಜಿನಿಯರ್ ಕಚೇರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ರೈತರ ಸಮ್ಮುಖದಲ್ಲಿ ಪರ್ತಕರ್ತರೊಂದಿಗೆ ಮಾತನಾಡಿದರು.

ಸರ್ಕಾರ ಇದುವರೆಗೂ ಕಾಡಾಗಳಿಗೆ ಕನಿಷ್ಠ ಅನುದಾನ ನೀಡಿಲ್ಲ. ರೈತರ ಸಮಸ್ಯೆ ಮತ್ತು ನಿರೀಕ್ಷೆಗಳಿಗೆ ಸ್ಪಂದಿಸಲು ಸಾಧ್ಯವಾಗುತ್ತಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕಾಡಾ ಕಚೇರಿ ನಿರ್ವಹಣೆಗೂ ಅನುದಾನ ಇಲ್ಲ. ಅಚ್ಚುಕಟ್ಟಿನ ರೈತರು ಸುಮಾರು ಅರ್ಜಿ ನೀಡಿ ರಸ್ತೆ ಮತ್ತು ಬಸಿಗಾಲುವೆ ನಿರ್ಮಿಸುವಂತೆ ಮನವಿ ಮಾಡಿದ್ದಾರೆ. ಫೋನ್ ಮೂಲಕವೂ ಒತ್ತಾಯಿಸುತ್ತಿದ್ದಾರೆ. ರೈತರ ಮನವಿಗೆ ಸ್ಪಂದಿಸಿ ಕಳೆದ ವಾರ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿ, ನೀರಾವರಿ ಸಚಿವರು ಮತ್ತು ನೀರಾವರಿ ನಿಗಮದ ಎಂಡಿ ಅವರನ್ನು ಭೇಟಿ (3ನೇ ಪುಟಕ್ಕೆ)


**ದಾವಣಗೆರೆ ಜಿಲ್ಲಾ ನಿರ್ವಹಣೆ ಮತ್ತು ಸಾಗಾಣಿಕೆ ಗುತ್ತಿಗೆದಾರರ ಸಂಘ, ದಾವಣಗೆರೆ**

**ದಾವಣಗೆರೆ ಜಿಲ್ಲೆಯ ಎಲ್ಲಾ ಲಾರಿ ಮಾಲೀಕರ ಗಮನಕ್ಕೆ**

ದಿನಾಂಕ 20.8.2022ರಿಂದ ದೊಡ್ಡಬಾತಿ ರೈಲ್ವೇ ಗೂಡ್ಸ್‌ಶೆಡ್‌ನಲ್ಲಿ ಬಂದಂತಹ ಸರಕನ್ನು ವಿವಿಧ ಕಡೆ ಸಾಗಾಣಿಕೆ ಮಾಡಲು ದಾವಣಗೆರೆ ಜಿಲ್ಲೆಯ ಯಾವುದೇ ಲಾರಿಗಳು ಸಹ ಬಂದು ದೊಡ್ಡಬಾತಿ ರೈಲ್ವೆ ಗೂಡ್ಸ್‌ಶೆಡ್‌ನಲ್ಲಿ ವ್ಯಾಗನ್ ಬಂದ ದಿನಮಾತ್ರ ಹರಿಹರದ ಕಡೆಯಿಂದ ಸಮಯ ಬೆಳಿಗ್ಗೆ 6 ಗಂಟೆಯಿಂದ ಕ್ಯೂ ನ ಮುಖಾಂತರ ಬಂದು ಸರಕು ಸಾಗಾಣಿಕೆ ಮಾಡಬಹುದು ಎಂದು ತಿಳಿಸುತ್ತಿದ್ದೇವೆ.

**ಮಾಗನೂರು ಸಂಗಮೇಶ್ವರ ಗೌಡರು**
ಅಧ್ಯಕ್ಷರು
ದಾವಣಗೆರೆ ಜಿಲ್ಲಾ ನಿರ್ವಹಣೆ ಮತ್ತು ಸಾಗಾಣಿಕೆ ಗುತ್ತಿಗೆದಾರರ ಸಂಘ



|| ಶ್ರೀ ವೀರಭದ್ರೇಶ್ವರ ಪ್ರಸನ್ನ ||

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ನಗರ, ಯರಗುಂಟೆ ಗ್ರಾಮದ ವಾಸಿ
**ಬೂದಿಹಾಳ್ ಶ್ರೀ ರುದ್ರೇಶ್ ಮತ್ತು ಬೂದಿಹಾಳ್ ಕುಟುಂಬಸ್ಥರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 08.08.2022ನೇ ಸೋಮವಾರ ಬೆಳಿಗ್ಗೆ 06.00ಕ್ಕೆ ನಮ್ಮ ದೊಡ್ಡಪ್ಪನವರಾದ
**ಶ್ರೀ ಬೂದಿಹಾಳ್ ಮಲ್ಲೇಶಪ್ಪನವರು**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 18.08.2022ನೇ ಗುರುವಾರ ಬೆಳಿಗ್ಗೆ 10.30ಕ್ಕೆ ದಾವಣಗೆರೆ ನಗರ, ಯರಗುಂಟೆ ಗ್ರಾಮದ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಬೂದಿಹಾಳ್ ಶ್ರೀ ರುದ್ರೇಶ್ ಮತ್ತು ಸಹೋದರರು ಮೃತರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಬೂದಿಹಾಳ್ ವಂಶಸ್ಥರು ಹಾಗೂ ಬಂಧು-ಮಿತ್ರರು.**
ಫೋ. : 94488 40348, 94813 60787

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ

## ಬಿಎಸ್‌ವೈ ನೇಮಕಕ್ಕೆ ಹರೀಶ್ ಹರ್ಷ



ಮಲೇಬೆನ್ನೂರು, ಆ.17- ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯರಾಗಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ನೇಮಕ ಮಾಡಿರುವುದರಿಂದ ರಾಜ್ಯದಲ್ಲಿ ಬಿಜೆಪಿ ಶಕ್ತಿ ಮತ್ತಷ್ಟು ಹೆಚ್ಚಾಗಲಿದೆ ಎಂದು ಮಾಜಿ ಶಾಸಕ ಬಿ.ಪಿ.ಹರೀಶ್ ಸಂತಸ ವ್ಯಕ್ತಪಡಿಸಿದ್ದಾರೆ.

ಅವರು ಬುಧವಾರ ಸಂಜೆ ಮಾಜಿ ಸಿಎಂ ಯಡಿಯೂರಪ್ಪ ಅವರನ್ನು ಶಾಸಕ ಎಂ.ಪಿ.ರೇಣುಕಾಚಾರ್ಯ ಅವರೊಂದಿಗೆ ಭೇಟಿ ಮಾಡಿ, ಅಭಿನಂದನೆ ಸಲ್ಲಿಸಿದ ನಂತರ 'ಜನತಾವಾಣಿ'ಯೊಂದಿಗೆ ಮಾತನಾಡಿದರು.

ರಾಜ್ಯದಲ್ಲಿ ಇಂದಿನಿಂದ ಬಿಜೆಪಿಗೆ ಹೊಸ ಚೈತನ್ಯ ಬಂದಿದ್ದು, ಬಿಎಸ್‌ವೈ ನೇಮಕದಿಂದ ಕಾರ್ಯಕರ್ತರು ತುಂಬಾ ಖುಷಿಯಾಗಿದ್ದಾರೆ. ಅಷ್ಟೇ ಅಲ್ಲ ಯಡಿಯೂರಪ್ಪ ಅವರೂ ರಾಜ್ಯದಲ್ಲಿ ಮತ್ತೆ ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರಲು ಸಂಕಲ್ಪ ಮಾಡಿದ್ದಾರೆಂದು ಹರೀಶ್ ಹೇಳಿದರು.

## ನಿರ್ಲಕ್ಷಿಸುವುದಿಲ್ಲ ಎಂಬ ಸಂದೇಶ

**(1ನೇ ಪುಟದಿಂದ)** ರಾಜ್ಯದಲ್ಲಿ ಲಿಂಗಾಯತ ಮತಗಳನ್ನು ಹಿಡಿದಿಟ್ಟುಕೊಳ್ಳುವ ಕೆಲಸ ಮಾಡಿದೆ. ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ, ಪಕ್ಷದ ಸರ್ಕಾರ ರಚನೆ ಸೇರಿದಂತೆ ಪ್ರಮುಖ ನಿರ್ಧಾರಗಳನ್ನು ಈ ಮಂಡಳಿಯೇ ತೆಗೆದುಕೊಳ್ಳುತ್ತಿದೆ. ಅಂತಹ ಮಂಡಳಿಯಲ್ಲಿ ಕರ್ನಾಟಕಕ್ಕೆ ಎರಡು ಸ್ಥಾನಗಳು ದೊರೆತಿವೆ.

ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಕೂಡಾ ಸಂಸದೀಯ ಮತ್ತು ಚುನಾವಣಾ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ.

ದಿವಂಗತ ಅನಂತಕುಮಾರ್ ಈ ಮೊದಲು ಎರಡು ಉನ್ನತ ಮಟ್ಟದ ಸಮಿತಿಯಲ್ಲೂ ಸದಸ್ಯರಾಗಿದ್ದರು. ಆನಂತರ ಯಡಿಯೂರಪ್ಪ ಮತ್ತು ಸಂತೋಷ್ ಅವರಿಗೆ ಈ ಸ್ಥಾನ ದೊರೆತಿದೆ.

ಇತ್ತೀಚೆಗೆ ಕರ್ನಾಟಕಕ್ಕೆ ಬಂದಿದ್ದ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಯಡಿಯೂರಪ್ಪ ಅವರ ಜತೆ ಸುದೀರ್ಘ ಚರ್ಚೆ ನಡೆಸಿ ಹಿಂತಿರುಗಿದ ನಂತರ ಈ ನೇಮಕಾತಿ ನಡೆದಿದ್ದು ಇದು ಯಡಿಯೂರಪ್ಪ ಅವರನ್ನು ಪಕ್ಷ ನಿರ್ಲಕ್ಷಿಸುವುದಿಲ್ಲ ಎಂಬ ವರಿಷ್ಠರ ಸಂದೇಶದಂತಿದೆ.

ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿದ ನಂತರ ಯಡಿಯೂರಪ್ಪ ಅವರು ಬೇರೆ ಯಾವ ಸ್ಥಾನಗಳನ್ನೂ ಪಡೆಯಲು ನಿರಾಸಕ್ತಿ ತೋರಿಸಿದ್ದರಿಂದ ಅವರಿಗೆ ರಾಜ್ಯಪಾಲ ಹುದ್ದೆ ನೀಡುವ ವರಿಷ್ಠರ ಯೋಚನೆ ಹಾಗೇ ಕರಗಿತ್ತು.

ಆದರೆ, ಇದೀಗ ಯಡಿಯೂರಪ್ಪ ಅವರ ಬಲ ಕರ್ನಾಟಕದಲ್ಲಿ ಪಕ್ಷಕ್ಕೆ ಅಗತ್ಯ ಎಂಬುದನ್ನು ಮನಗಂಡಿರುವ ವರಿಷ್ಠರು ಯಡಿಯೂರಪ್ಪ ಅವರನ್ನು ಕೇಂದ್ರ ಸಂಸದೀಯ ಮಂಡಳಿಗೆ ನೇಮಕ ಮಾಡುವ ಮೂಲಕ ಸಮಾಧಾನ ಪಟ್ಟು ಕೊಂಡಿದ್ದಾರೆ.

ಉನ್ನತ ಮೂಲಗಳ ಪ್ರಕಾರ, ಕರ್ನಾಟಕದಲ್ಲಿ ಪಕ್ಷವನ್ನು ಬಲಿಷ್ಠಗೊಳಿಸಲು ಪಕ್ಷ ಮತ್ತು ಸರ್ಕಾರಕ್ಕೆ ತುರ್ತು ಸರ್ಜರಿಯ ಅಗತ್ಯವಿದೆ ಎಂದು ಯಡಿಯೂರಪ್ಪ ಅವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರಿಗೆ ವಿವರಿಸಿದ್ದರು.

ಯಡಿಯೂರಪ್ಪ ಅವರಿಗೆ ಗೌರವದ ಸ್ಥಾನ ನೀಡಿರುವ ವರಿಷ್ಠರು ಕರ್ನಾಟಕದಲ್ಲಿ ಪಕ್ಷ ಮತ್ತು ಸರ್ಕಾರಕ್ಕೆ ಸರ್ಜರಿ ಮಾಡಲು ತಯಾರಿ ನಡೆಸಿದ್ದಾರೆ ಎಂಬುದು ಇದೇ ಮೂಲಗಳ ಹೇಳಿಕೆ. ಕೇಂದ್ರ ಬಿಜೆಪಿಯಲ್ಲಿ ಯಡಿಯೂರಪ್ಪ ಅವರಿಗೆ ಉನ್ನತ ಸ್ಥಾನ ದೊರೆತ ನಂತರ ರಾಜ್ಯ ಬಿಜೆಪಿ ಮತ್ತು ಸರ್ಕಾರದಲ್ಲೂ ಬದಲಾವಣೆಯಾಗುವ ಸಾಧ್ಯತೆ ಇದೆ.

## ಆಲೂರಿನಿಂದ ಮಾಗಾನಹಳ್ಳಿಯ ಸಂಪರ್ಕ ರಸ್ತೆ ದುರಸ್ತಿಗೆ ಒತ್ತಾಯ



ದಾವಣಗೆರೆ, ಆ. 17- ತಾಲ್ಲೂಕಿನ ಆಲೂರು ಗ್ರಾಮದಿಂದ ಮಾಗಾನ ಹಳ್ಳಿಯ ಸಂಪರ್ಕ ರಸ್ತೆ ಪ್ರಕೃತಿ ವಿಕೋಪಕ್ಕೆ ಸಂಪೂರ್ಣ ಹಾಳಾಗಿದ್ದು, ಕೂಡಲೇ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕೆಂದು ಗ್ರಾಮಸ್ಥರು ಕೋರಿದ್ದಾರೆ.

ರಸ್ತೆಯು ಅಧಿಕ ಮಳೆಯ ಕಾರಣ ಕೊಚ್ಚಿಹೋಗಿದ್ದು, ಇದರಿಂದ ರೈತರು ತಮ್ಮ ಜಮೀನುಗಳಿಗೆ ಹೋಗಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಈ ಬಗ್ಗೆ ಜಿಲ್ಲಾಧಿಕಾರಿಗೆ, ಜಿಲ್ಲಾ ಮಂತ್ರಿಗಳ ಗಮನಕ್ಕೆ ತಂದರೂ ಸಹ ಯಾವೊಬ್ಬ ಅಧಿಕಾರಿ ಅಥವಾ ಜನಪ್ರತಿನಿಧಿಗಳು ರೈತರುಗಳ ನೋವನ್ನು ಆಲಿಸುತ್ತಿಲ್ಲ ಎಂದು ರೈತ ಹೋರಾಟಗಾರ ಕೆ.ಎಂ. ಹೇಮಂತರಾಜ್ ಪತ್ರಿಕಾ ಹೇಳಿಕೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೂಡಲೇ ಸಂಬಂಧಿಸಿದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಇಲ್ಲಿಗೆ ಖುದ್ದು ಭೇಟಿ ನೀಡಿ, ರೈತರ ನೆರವಿಗೆ ಧಾವಿಸಬೇಕೆಂದು ಒತ್ತಾಯಿಸಿದ್ದಾರೆ.

## ಹೊನ್ನಾಳಿ: ರೈತರ ಇ-ಕೆವೈಸಿಗೆ 31 ಕಡೇ ದಿನ

ಹೊನ್ನಾಳಿ,ಆ.17- ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅಡಿ ವಾರ್ಷಿಕ ಆರು ಸಾವಿರ ಆರ್ಥಿಕ ನೆರವನ್ನು ಅರ್ಹ ರೈತರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮಾಡಲು ಇ-ಕೆವೈಸಿ ಮಾಡಿಸುವುದು ಅಗತ್ಯವಾಗಿದ್ದು, ಇಲ್ಲಿಯವರೆಗೆ ಇ-ಕೆವೈಸಿ ಮಾಡಿಸದ ರೈತರು ಇದೇ ತಿಂಗಳ 31ರವರೆಗೂ ಮಾಡಬಹುದು. ಹತ್ತಿರದ ಸೇವಾಕೇಂದ್ರಗಳಿಗೆ ಭೇಟಿ ನೀಡಿ ಬಯೋಮೆಟ್ರಿಕ್ ಆಧಾರಿತ ಇ-ಕೆವೈಸಿ ಮಾಡಿಸುವಂತೆ ಹೊನ್ನಾಳಿ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.




**ಶ್ರೀಮತಿ ಮತ್ತಿಹಳ್ಳಿ ಶಂಕ್ರಮ್ಮ ನಿಧನ**

ಶಾಮನೂರು ಡಾಲರ್ಸ್ ಕಾಲೋನಿ ವಾಸಿ ಸ್ವಾತಂತ್ರ್ಯ ಹೋರಾಟಗಾರರಾದ ದಿವಂಗತ ಶ್ರೀ ಮತ್ತಿಹಳ್ಳಿ ರೇವಣಪ್ಪನವರ ಧರ್ಮಪತ್ನಿ ಶ್ರೀಮತಿ ಮತ್ತಿಹಳ್ಳಿ ಶಂಕ್ರಮ್ಮ(81) ಅವರು, ದಿನಾಂಕ 17.8.22ರಂದು ಮಧ್ಯಾಹ್ನ 2.15ಕ್ಕೆ ನಿಧನರಾಗಿರುತ್ತಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. **ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಡಾಲರ್ಸ್ ಕಾಲೋನಿ ಶಾಮನೂರು ಬಳಿ ಇರಿಸಲಾಗುವುದು.** ನಂತರ ಅಂತ್ಯಕ್ರಿಯಯು ದಿನಾಂಕ 18.8.22 ರಂದು ಬೆಳಗ್ಗೆ 11 ಗಂಟೆಗೆ ಗ್ಲಾಸ್ ಹೌಸ್ ಹತ್ತಿರ ಶಾಮನೂರು ಬಳಿ ಇರುವ ಹಿಂದೂ ರುದ್ರ ಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖ ತಪ್ತ ಕುಟುಂಬಸ್ಥರು - ನಾಗಾನಂದ ಸ್ವಾಮಿ 97312-83019**





**ಸಂತಾಪ ಸೂಚನೆ**

ದಿನಾಂಕ 17.8.2022ರಂದು ನಿಧನರಾದ ನಿವೃತ್ತ ASI ಹಾಗೂ ಆತ್ಮೀಯರೂ ಆಗಿದ್ದ

**ಶ್ರೀ ಅಮಾನುಲ್ಲಾ ಸಾಬ್**

ಅವರಿಗೆ ತೀವ್ರ ಸಂತಾಪವನ್ನು ಸೂಚಿಸುತ್ತಾ ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ, ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಪ್ರಾರ್ಥಿಸುತ್ತೇವೆ.

**ದೀಪ್ತಿ ಪ್ರಿಂಟರ್ಸ್, ನಿಟ್ಟುವಳ್ಳಿ ರಸ್ತೆ, ದಾವಣಗೆರೆ.**


# ದಕ್ಷ ಜೀವನ, ಪ್ರಾಮಾಣಿಕತೆಯಿಂದ ಗೌರವ



ಹರಿಹರ, ಆ. 17- ಮನುಷ್ಯನ ಜನನಕ್ಕೆ ಮತ್ತು ಮರಣಕ್ಕೆ ಗೌರವ ಬರುವುದು ದಿನ ನಿತ್ಯದ ಜೀವನದ ದಕ್ಷತೆಯಿಂದ. ಪ್ರಾಮಾಣಿಕತೆಯಿಂದ ಸಹಕಾರ ಭಾವನೆಗಳನ್ನು ಇಟ್ಟುಕೊಂಡು, ಜವಾಬ್ದಾರಿಯುತವಾಗಿ ಜೀವನ ನಿರ್ವಹಣೆ ಮಾಡಿದಾಗ ಗೌರವ ಹೆಚ್ಚಾಗುತ್ತದೆ ಎಂದು ಶ್ರೀ ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ನಗರದ ಹೈಸ್ಕೂಲ್ ಬಡಾವಣೆಯ ಕಂಚಿಕೇರಿ ಗಣೇಶಪ್ಪನವರ ಕೈಲಾಸ ಸಮಾರಾಧನೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಜನನ ಆಕಸ್ಮಿಕವಲ್ಲ. ತಂದೆ - ತಾಯಿ ಹುಟ್ಟಿದ ಮಗನಿಗೆ ವಧುವನ್ನು ನೋಡಿ ಒಳ್ಳೆಯ ಸಮಯದಲ್ಲಿ ಮದುವೆ ಮಾಡುತ್ತಾರೆ. ಮುಂದೆ ಮಗು ಜನನ ಆಗುತ್ತದೆ. ಹಾಗಾಗಿ ಮನುಷ್ಯರ ಜನನ ಸ್ವಾಭಾವಿಕ. ಜನನದ ನಂತರ ಒಂದಲ್ಲಾ ಒಂದು ದಿನ ಮಾನವ ಶರೀರಕ್ಕೆ ಸಾವು ಬರುತ್ತದೆ ಎಂದವರು ಹೇಳಿದರು.

ದೇಶವು ತಾಂತ್ರಿಕವಾಗಿ ಮತ್ತು ವೈಜ್ಞಾನಿಕ ವಾಗಿ ಪ್ರಗತಿಯನ್ನು ಸಾಧಿಸಿದರೂ ಸಹ, ಇದು ವರೆಗೆ ಸಾವಿನ ದಿನಾಂಕ ತಿಳಿಯಲಾಗಿಲ್ಲ. ಶೇ. 90 ರಷ್ಟು ಮನುಷ್ಯರು ನಾವು ಮರಣವನ್ನು ಹೊಂದು ವುದಿಲ್ಲ ಎಂಬ ಭ್ರಮೆ ಹೊಂದಿದ್ದಾರೆ. ನಾವು ಅಜರಾಮರರು, ಚಿರಂಜೀವಿಗಳು, ಅಮರರು ಎಂದು ಭಾವಿಸಿಕೊಂಡಿದ್ದಾರೆ. ಅಂಥವರು ನಮಗೂ ಒಂದು ದಿನ ಸಾವು ಇದೆ ಎಂದು ಅರಿತುಕೊಂಡು ಜೀವನ ಮಾಡಿದರೆ ದುರಾಸೆ ಗಳಿಗೆ ಕಡಿವಾಣ ಹಾಕಿಕೊಳ್ಳಬಹುದು ಎಂದರು.

**ಶ್ರೀ ಶಿವಮೂರ್ತಿ ಮುರುಘಾ ಶರಣರು**

ದಾವಣಗೆರೆ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಮಾತನಾಡಿ, ಪರಮಾತ್ಮನ ಒಲುಮೆ ಆಗಬೇಕಾದರೆ ದೇವರ ಸ್ಮರಣೆ ಮಾಡಬೇಕು. ಮುಪ್ಪಿಗೆ ಮುಂಚೆ ದೇವರ ಸ್ಮರಣೆ ಮಾಡುವುದು ಮುಖ್ಯ. ದೇವರನ್ನು ಸ್ಮರಣೆ ಮಾಡದೇ ಇದ್ದಾಗ ದೇವರು ಒಂದೊಂದಾಗಿ ಕಷ್ಟಗಳ ನೋಟಿಸ್ ನೀಡುತ್ತಾ ಇರುತ್ತಾನೆ ಎಂದರು.

ಈ ಸಂದರ್ಭದಲ್ಲಿ ಕಂಚಿಕೇರಿ ಬಸವರಾಜಪ್ಪ, ದಾವಣಗೆರೆಯ ಜಯಕುಮಾರ್, ಕೊಟ್ರಮ್ಮ ದಿ. ಮರಳಸಿದ್ದಪ್ಪ ಕಂಚಿಕೇರಿ, ಕಂಚಿಕೇರಿ ಕೊಟ್ರೇಶಪ್ಪ, ಕಂಚಿಕೇರಿ ಮಹೇಶ್ವರಪ್ಪ, ಕಂಚಿಕೇರಿ ಸಿದ್ದೇಶ್, ಕಂಚಿಕೇರಿ ಕರಿಬಸಪ್ಪ, ಕಂಚಿಕೇರಿ ಶಿವಯೋಗಿ, ಕಂಚಿಕೇರಿ ಚಿದಾನಂದ, ಕಂಚಿಕೇರಿ ಅರುಣ್ ಕುಮಾರ್, ಶಂಕರ್, ಕಿರಣ್ ಕುಮಾರ್, ಸಂತೋಷ, ಶಿವಕುಮಾರ, ಬಸವರಾಜಪ್ಪ ದೇವರಬೆಳಕೆರೆ, ಜಯದೇವ ಪೂಜಾರ್, ಮೇಗಳಗೇರಿ ರಾಮಪ್ಪ , ಹಾಲೇಶಪ್ಪ, ಎಂ.ಎಂ.ಪಿ ಹಾಲಮ್ಮ, ಎಂ.ಹೆಚ್. ಪಿ. ಗಂಗಮ್ಮ, ಗಂಗಮ್ಮ ಕೊಟ್ರಪ್ಪ, ಹಾಲಮ್ಮ ಮಹಾಂತೇಶಪ್ಪ ಆನ್ವೇರಿ, ಹಾಲೇಶಪ್ಪ ಕಂಚಿಕೇರಿ, ಹನುಮಂತಪ್ಪ ಪೂಜಾರ್, ಅಣ್ಣಪ್ಪ ಪೂಜಾರ್, ಬಸವರಾಜ್ ಪೂಜಾರ್, ಸ್ವಾಮಿ ಪೂಜಾರ್, ನೀಲಗುಂದ ಜಗದೀಶ್, ಹಾಲಸ್ವಾಮಿ ಗುತ್ತೂರು, ಬಸವರಾಜ್ ಗುತ್ತೂರು, ಚೇತನಕುಮಾರ್, ನಂದನಕುಮಾರ್, ಎ.ಬಿ. ಅಭಿಷೇಕ, ಗುರುಪ್ರಸಾದ್ ಸಿ.ಕೆ., ನಿಖಿಲ್ ಎಸ್. ಕೆ. ಮತ್ತಿತರರು ಉಪಸ್ಥಿತರಿದ್ದರು.

## ಬಿಹಾರ : ಶೇ.70 ಸಚಿವರ ವಿರುದ್ಧ ಕ್ರಿಮಿನಲ್ ಪ್ರಕರಣ

ನವದೆಹಲಿ, ಆ. 17 – ಇತ್ತೀಚೆಗೆ ರಚನೆಯಾದ ಬಿಹಾರ ಸಂಪುಟದ ಶೇ.70ರಷ್ಟು ಸಚಿವರು ಅಪರಾಧಿಕ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ ಎಂದು ಚುನಾವಣಾ ಹಕ್ಕುಗಳ ಸಂಸ್ಥೆಯಾದ ಎ.ಡಿ.ಆರ್. ತಿಳಿಸಿದೆ.

ಮುಖ್ಯಮಂತ್ರಿ ನಿತೀಶ್ ಕುಮಾರ್ ಹಾಗೂ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಸಹ ಅಪರಾಧಿಕ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ ಎಂದು ಎ.ಡಿ.ಆರ್. ಹೇಳಿದೆ.

ಮಂಗಳವಾರದಂದು 31 ಸಚಿವರು ಸಂಪುಟಕ್ಕೆ ಸೇರ್ಪಡೆಯಾಗಿದ್ದರು. ಇದಕ್ಕೂ ಮುಂಚೆ ಆಗಸ್ಟ್ 10ರಂದು ಕುಮಾರ ಹಾಗೂ ಯಾದವ್ ಪ್ರಮಾಣ ವಚನ ಸ್ವೀಕರಿಸಿದ್ದರು. ಸಂಪುಟದಲ್ಲಿ ಈಗ 33 ಸಚಿವರಿದ್ದಾರೆ.

23 ಸಚಿವರ ವಿರುದ್ಧ ಗಂಭೀರ ಅಪರಾಧಿಕ ಪ್ರಕರಣಗಳಿವೆ. 17 ಸಚಿವರ ವಿರುದ್ಧದ ಪ್ರಕರಣಗಳು ತೀವ್ರ ಗಂಭೀರವಾಗಿವೆ. ಚುನಾವಣೆ ಸಂದರ್ಭದಲ್ಲಿ ಸದಸ್ಯರು ಸಲ್ಲಿಸಿದ್ದ ಮಾಹಿತಿಯನ್ನು ಆಧರಿಸಿ, ಈ ವರದಿ ರೂಪಿಸಲಾಗಿದೆ.

## ಎಲೆಬೇತೂರು ಸೊಸೈಟಿಯಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ

ದಾವಣಗೆರೆ, ಆ. 17- ತಾಲ್ಲೂಕಿನ ಎಲೆಬೇತೂರು ಗ್ರಾಮದ ಎಲೆಬೇತೂರು ವ್ಯವಸಾಯ ಸೇವಾ ಸಹಕಾರ ಸಂಘ ನಿಯಮಿತ (ಸೊಸೈಟಿ) ದಲ್ಲಿ 75ನೇ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಧ್ವಜಾರೋಹಣವನ್ನು ಸಂಘದ ಅಧ್ಯಕ್ಷ ಮರಕುಂಟಿ ಚಂದ್ರಶೇಖರ್ ನೆರವೇರಿಸಿದರು. ಈ ಸಂದರ್ಭದಲ್ಲಿ ಸೊಸೈಟಿಯ ಉಪಾಧ್ಯಕ್ಷರು, ನಿರ್ದೇಶಕರು, ಸಿಬ್ಬಂದಿ ವರ್ಗ ಹಾಗೂ ಗ್ರಾಮದ ಹಿರಿಯರು, ಜನಪ್ರತಿನಿಧಿಗಳು, ಗ್ರಾಮಸ್ಥರು ಉಪಸ್ಥಿತರಿದ್ದರು.

## ಮಳೆಹಾನಿ: ಹೊನ್ನಾಳಿ-ನ್ಯಾಮತಿ ತಾಲ್ಲೂಕು ಗ್ರಾಮಗಳಲ್ಲಿ ರೇಣುಕಾಚಾರ್ಯ ಪರಿಶೀಲನೆ



ನ್ಯಾಮತಿ, ಆ.17- ಜನರು ಕಷ್ಟದಲ್ಲಿರುವಾಗ ಅವರ ಸಂಕಷ್ಟಕ್ಕೆ ಸ್ಪಂದಿಸಬೇಕಾದದ್ದು ನನ್ನ ಕರ್ತವ್ಯ. ಈ ನಿಟ್ಟಿನಲ್ಲಿ ನಾನು ಅವಳಿ ತಾಲ್ಲೂಕಿನಾದ್ಯಂತ ಸಂಚರಿಸಿ ಮಳೆಹಾನಿ ವೀಕ್ಷಿಸಿ, ಜನರ ಕಷ್ಟ ಆಲಿಸುವ ಕೆಲಸ ಮಾಡುತ್ತಿದ್ದೇನೆಂದು ಸಿಎಂ ರಾಜಕೀಯ ಕಾರ್ಯದರ್ಶಿ ಹಾಗೂ ಹೊನ್ನಾಳಿ, ನ್ಯಾಮತಿ ಅವಳಿ ತಾಲ್ಲೂಕಿನ ಶಾಸಕ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಮಳೆಹಾನಿ ಪೀಡಿತ ಗ್ರಾಮಗಳಿಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅವರು ಮಾತನಾಡಿದರು.

**ಗ್ರಾಮಗಳಿಗೆ ಭೇಟಿ :** ತಾಲ್ಲೂಕಿನ ಮಾಚಗೊಂಡನಹಳ್ಳಿ, ಮಾಚಗೊಂಡನಹಳ್ಳಿ ತಾಂಡಾ, ಚಿನ್ನಿಕಟ್ಟೆ, ಸೂರಗೊಂಡನಕೊಪ್ಪ, ಹೊಸಜೋಗ, ಹಳೆಜೋಗ, ಜಯನಗರ, ಸಿದ್ದಾಪುರ, ಬಿದರಹಳ್ಳಿ, ಬಿದರಹಳ್ಳಿ ತಾಂಡಾಗಳಿಗೆ ಭೇಟಿ ನೀಡಿದ ಶಾಸಕರು, ಮಳೆಯಿಂದ ಹಾನಿಯಾದ ಮನೆ ಹಾಗೂ ಬೆಳೆ ವೀಕ್ಷಿಸಿ, ಹಾನಿಗೊಳಗಾದವರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಈ ಸಂದರ್ಭ ತಹಶೀಲ್ದಾರ್ ರೇಣುಕಾ, ಇಓ ರಾಮಬೋವಿ, ಕೃಷಿ ಅಧಿಕಾರಿ ಪ್ರತಿಮಾ, ತೋಟಗಾರಿಕೆ ಇಲಾಖೆ ಅಧಿಕಾರಿ ವೀರಭದ್ರಪ್ಪ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಗ್ರಾಮದ ಮುಖಂಡರಿದ್ದರು.

## ಹರಿಹರ : ಕುಸ್ತಿ ಆಯ್ಕೆ ಕಾರ್ಯಕ್ರಮ ಉದ್ಘಾಟನೆ



ಹರಿಹರ, ಆ.17- 75 ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ತಾಲ್ಲೂಕಿನ ಬೆಳ್ಳೂಡಿ ಶ್ರೀ ಕಾಗಿನೆಲೆ ಮಹಾಸಂಸ್ಥಾನ ಮಠದ ಸಭಾಂಗಣದಲ್ಲಿ ರಾಜ್ಯ ಒಲಿಂಪಿಕ್ ಅಸೋಸಿಯೇಷನ್ ಕುಸ್ತಿ ಕಮಿಟಿ ಆಯೋಜಿಸಿದ್ದ 3 ದಿನಗಳ ಕರ್ನಾಟಕ ರಾಜ್ಯ ಕುಸ್ತಿ ತಂಡದ ಆಯ್ಕೆ ಕಾರ್ಯಕ್ರಮವನ್ನು ಕಾಗಿನೆಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಶಾಸಕ ಎಸ್.ರಾಮಪ್ಪ, ಐ ಕೇರ್ ಬ್ರಿಗೇಡ್ ಮತ್ತು ಜಯ ಕರ್ನಾಟಕ ಜನಪರ ವೇದಿಕೆಯ ಯುವ ಸಂಸ್ಥಾಪಕ ಅಧ್ಯಕ್ಷ ಬಿ. ಗುಣರಂಜನ್ ಶೆಟ್ಟಿ, ಭಾರತೀಯ ಕುಸ್ತಿ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯ ದರ್ಶಿ ವಿ.ಎನ್.ಪ್ರಸೂದ್, ಜಯ ಕರ್ನಾಟಕ ಜನಪರ ವೇದಿಕೆ ಸದಸ್ಯ ಪ್ರಸಾದ್ ಶೆಟ್ಟಿ, ರಾಜ್ಯ ಮುಖ್ಯ ಕಾರ್ಯ ನಿರ್ವಾಹಕ ಜೆ.ಶ್ರೀನಿವಾಸ್, ಆಂಧ್ರ ಪ್ರದೇಶದ ಕುಸ್ತಿ ಒಲಿಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಪಿ.ಪುರುಷೋತ್ತಮನ್, ತಮಿಳುನಾಡು ರಾಜ್ಯದ ಕುಸ್ತಿ ಒಲಿಂಪಿಕ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಎಂ.ಲೋಕನಾಥನ್, ರಾಷ್ಟ್ರೀಯ ಕುಸ್ತಿ ತರಬೇತುದಾರ ವಿನೋದ್ ಕುಮಾರ್, ಚೂರಿ ಜಗದೀಶ್, ಮೂರ್ತಿ ಗಿರಿನಗರ ಮತ್ತಿತರರು ಉಪಸ್ಥಿತರಿದ್ದರು.

## ಐದು ವರ್ಷಗಳಲ್ಲಿ 16 ವೈದ್ಯಕೀಯ ಕಾಲೇಜು ಸ್ಥಾಪನೆ

ಚಂಡೀಘಡ, ಆ. 17 – ಮುಂದಿನ ಐದು ವರ್ಷಗಳಲ್ಲಿ ಪಂಜಾಬ್ ಸರ್ಕಾರ 16 ವೈದ್ಯ ಕೀಯ ಕಾಲೇಜುಗಳನ್ನು ಸ್ಥಾಪಿಸ ಲಿದೆ. ಇದರಿಂದಾಗಿ ವೈದ್ಯಕೀಯ ಶಿಕ್ಷಣದ ಆಕಾಂಕ್ಷಿಗಳು ಉಕ್ರೇನ್ ರೀತಿ ದೇಶಕ್ಕೆ ಹೋಗುವುದು ತಪ್ಪಲಿದೆ ಎಂದು ಮುಖ್ಯಮಂತ್ರಿ ಭಗವಂತ್ ಮಾನ್ ಹೇಳಿದ್ದಾರೆ. ಸರ್ಕಾರದ ಕ್ರಮದಿಂದ ರಾಜ್ಯದ ಲ್ಲಿರುವ ವೈದ್ಯಕೀಯ ಕಾಲೇಜು ಗಳ ಸಂಖ್ಯೆ 25ಕ್ಕೆ ಏರಲಿದೆ. ಪಂಜಾಬ್ ವೈದ್ಯಕೀಯ ಶಿಕ್ಷಣದ ತಾಣವಾಗಲಿದೆ ಎಂದವರು ಹೇಳಿದ್ದಾರೆ.

## ಸವಿತಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯಿಂದ ಪ್ರತಿಭಾ ಪುರಸ್ಕಾರ

ದಾವಣಗೆರೆ, ಆ. 17- ನಗರದ ಸವಿತಾ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ವತಿಯಿಂದ ದಾವಣಗೆರೆ ನಗರ ಪಾಲಿಕೆ ವ್ಯಾಪ್ತಿಯ ಸವಿತಾ ಸ ಮಾ ಜ ದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪ್ರಸಕ್ತ ವರ್ಷದಲ್ಲಿ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿಯಲ್ಲಿ ಶೇ. 60ಕ್ಕೆ ಮೇಲ್ಪಟ್ಟು ಅಂಕ ಪಡೆದು ಉತ್ತೀರ್ಣರಾದವರಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

ಈಗಾಗಲೇ ಅರ್ಜಿ ಸಲ್ಲಿಸಿದವರನ್ನು ಬಿಟ್ಟು ಅರ್ಜಿ ಸಲ್ಲಿಸದೇ ಇರುವ ವಿದ್ಯಾರ್ಥಿಗಳು ತಕ್ಷಣವೇ ಸವಿತಾ ಸೊಸೈಟಿಯ ಕಛೇರಿಯಲ್ಲಿ ಅರ್ಜಿ ಸಲ್ಲಿಸಲು ಸೊಸೈಟಿ ಅಧ್ಯಕ್ಷ ಎನ್. ರಂಗಸ್ವಾಮಿ ಕೋರಿದ್ದಾರೆ.

## ಹರಿಹರ : ಅಕ್ಷರ ದಾಸೋಹ ಸಿಬ್ಬಂದಿಗೆ 3 ತಿಂಗಳಿಂದ ವೇತನವಿಲ್ಲ



ಹರಿಹರ, ಆ. 17 - ನಗರದ ಅಕ್ಷರ ದಾಸೋಹ ಅಡುಗೆ ಮಾಡುವ ಕಾರ್ಮಿಕರಿಗೆ ಕಳೆದ ಮೂರು ತಿಂಗಳಿಂದ ವೇತನ ನೀಡದೇ ಸಮಸ್ಯೆಯಾಗಿದೆ.

ನಗರದ ಬಿಇಓ ಕಚೇರಿಯ ಬಳಿ ಇರುವ ಸರ್ಕಾರಿ ಪ್ರೌಢಶಾಲೆ ಅಕ್ಷರ ದಾಸೋಹ ಅಡುಗೆ ಮಾಡುವ ಕಾರ್ಮಿಕರಿಗೆ ಕಳೆದ ಮೂರು ತಿಂಗಳಿಂದ ಅಕ್ಷರ ದಾಸೋಹ ಇಲಾಖೆ ವೇತನ ನೀಡಿಲ್ಲ.

ವಿದ್ಯುತ್ ಬಿಲ್ ಪಾವತಿ ಮಾಡಲಿಕ್ಕೂ ಹಣ ಇಲ್ಲದೇ ಬೆಸ್ಕಾಂ ಮನೆಯ ವಿದ್ಯುತ್ ಕಡಿತ ಮಾಡಿದೆ ಎಂದು ಅಕ್ಷರ ದಾಸೋಹ ಕಾರ್ಮಿಕರು ದೂರಿದ್ದಾರೆ. ವೇತನ ಬಾಕಿ ನೀಡುವಂತೆ ಅಕ್ಷರ ದಾಸೋಹ ಇಲಾಖೆಯ ಅಧಿಕಾರಿ ರಾಮಕೃಷ್ಣಪ್ಪ ನವರಿಗೆ ಅಕ್ಷರ ದಾಸೋಹ ಸಿಬ್ಬಂದಿ ಮನವಿ ಮಾಡಿಕೊಂಡಿದ್ದಾರೆ. ಆದರೆ, ಇದುವರೆಗೂ ವೇತನ ಬಿಡುಗಡೆ ಆಗಿಲ್ಲ ಎಂದು ಸಿಬ್ಬಂದಿ ಹೇಳಿದ್ದಾರೆ.

## ಹಳೇಬಾತಿಯಲ್ಲಿ ವಿಶ್ವನಾಥ್ ಧ್ವಜ ವಿತರಣೆ

ದಾವಣಗೆರೆ,ಆ.17- 75ನೇ ವರ್ಷದ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಸಂದರ್ಭದಲ್ಲಿ ಹಳೇಬಾತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಮೂರು ಊರುಗಳ ಎಲ್ಲಾ ಮನೆಗಳಿಗೆ ತರಳಬಾಳು ಕೇಂದ್ರದ ಕಾರ್ಯದರ್ಶಿ ಹೆಚ್.ಎಂ. ವಿಶ್ವನಾಥ್ ಅವರು ಉಚಿತವಾಗಿ 1 ಸಾವಿರ ರಾಷ್ಟ್ರ ಧ್ವಜಗಳನ್ನು ವಿತರಿಸಿದ್ದಾರೆ.

## ಹ್ಯುಂಡೈ ಟೂಸಾನ್ ಮಾರುಕಟ್ಟೆಗೆ




ದಾವಣಗೆರೆ, ಆ. 17- ದೇಶದ ಮೊದಲ ಸ್ಮಾರ್ಟ್ ಮೊಬಿಲಿಟಿ ಸಲ್ಯೂಷನ್ಸ್ ಪ್ರೊವೈಡರ್ ಹಾಗೂ ಅತಿದೊಡ್ಡ ರಫ್ತುದಾರ ಎನಿಸಿರುವ ಹ್ಯುಂಡೈ ಮೋಟಾರ್ ಇಂಡಿಯಾ ಲಿಮಿಟೆಡ್ ಬುಧವಾರ ವಿನೂತನ ಹ್ಯುಂಡೈ ಟೂಸಾನ್ ಅನ್ನು ಕೆ.ಜೆ. ಹ್ಯುಂಡೈ ಶೋರೂಂನಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಸದೃಢ ಹಾಗೂ ಐಷಾರಾಮಿ ವಾಹನ ಇದಾಗಿದ್ದು, ಹ್ಯುಂಡೈನ ಸ್ಪೋರ್ಟ್ ಯುಟಿಲಿಟಿ ವಾಹನ ಟೂಸಾನ್‌ನ ಅತ್ಯಂತ ಮುಂದುವರೆದ ತಂತ್ರಜ್ಞಾನ ಹಾಗೂ ಆಧುನಿಕ ವಿನ್ಯಾಸವನ್ನು ಹೊಂದಿದೆ. ಭಾರತ ಭವಿಷ್ಯದ ಅಗತ್ಯಗಳನ್ನು ಒಳಗೊಂಡ ಸೌಲಭ್ಯ ಹೊಂದಿದೆ.

ಹ್ಯುಂಡೈ ಟೂಸಾನ್ ಬಿಡುಗಡೆ ಕುರಿತು ಅಭಿಪ್ರಾಯ ಹಂಚಿಕೊಂಡ ಕೆ.ಜೆ. ಹ್ಯುಂಡೈ ವ್ಯವಸ್ಥಾಪಕ ನಿರ್ದೇಶಕ ಕೆ.ಜೆ.ಅಫಕ್ ರಜ್ವಿ ನಾಲ್ಕನೇ ತಲೆಮಾರಿನ ವಾಹನವನ್ನು ಭಾರತದ ಅಚ್ಚುಮೆಚ್ಚಿನ ಗ್ರಾಹಕರಿಗೆ ಪರಿಚಯಿಸಲು ಅತ್ಯಂತ ಸಂತೋಷವಾಗುತ್ತಿದೆ. 2021ರಲ್ಲಿ ಅತ್ಯುತ್ತಮ ಸೆಲ್ಲರ್ ಆಗಿರುವ ಹ್ಯುಂಡೈ ಇದೀಗ ಟೂಸಾನ್ ಮುಖಾಂತರ ಮತ್ತೊಮ್ಮೆ ಗ್ರಾಹಕರ ನೆಚ್ಚಿನ ಕೊಡುಗೆ ನೀಡಿದೆ ಎಂದು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ.ರಿಷ್ಯಂತ್, ಜಿಲ್ಲಾ ಕೈಗಾರಿಕಾ ಜಂಟಿ ನಿರ್ದೇಶಕ ಆನಂದ್, ಕೆ.ಜೆ. ಹ್ಯುಂಡೈ ಸಂಸ್ಥೆಯ ಅಧ್ಯಕ್ಷ ಕೆ.ಜಾವೀದ್ ಸಾಬ್, ವ್ಯವಸ್ಥಾಪಕ ನಿರ್ದೇಶಕ ಕೆ.ಜೆ.ಅಫಕ್ ರಜ್ವಿ, ಸಂಸ್ಥೆಯ ನಿರ್ದೇಶಕ ಕೆ.ಜೆ.ಅಬ್ರಾರ್, ಮುಖ್ಯ ವ್ಯವಸ್ಥಾಪಕ ಕಮಲ್ ಪಾಶಾ ಮತ್ತು ಇತರರು ಉಪಸ್ಥಿತರಿದ್ದರು.

## ಎಲ್ಲ ಉಪಕರಣಗಳಿಗೆ ಒಂದೇ ಚಾರ್ಜರ್ ಕೇಂದ್ರ ಸರ್ಕಾರದಿಂದ ಸಮಿತಿ ರಚನೆ

ನವದೆಹಲಿ, ಆ. 17 – ಮೊಬೈಲ್ ಸೇರಿದಂತೆ ಎಲ್ಲಾ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳಿಗೆ ಒಂದೇ ರೀತಿಯ ಚಾರ್ಜರ್ ಅಳವಡಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಪರಿಣಿತರ ಸಮಿತಿಯೊಂದನ್ನು ರಚಿಸಲಿದೆ. ಎಲೆಕ್ಟ್ರಾನಿಕ್ ತ್ಯಾಜ್ಯ ಕಡಿಮೆ ಮಾಡಲು ಹಾಗೂ ಗ್ರಾಹಕರಿಗೆ ನೆರವಾಗಲು ಈ ಕ್ರಮ ನೆರವಾಗಲಿದೆ. ಕೇಂದ್ರ ಗ್ರಾಹಕರ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಸಿಂಗ್ ಅವರ ನೇತೃತ್ವದಲ್ಲಿ ನಡೆಸಲಾದ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.


ಸಭೆಯ ನಂತರ ಮಾತನಾಡಿರುವ ಸಿಂಗ್, ಇದು ಸಂಕೀರ್ಣ ವಿಷಯವಾಗಿದೆ. ಭಾರತ ಚಾರ್ಜರ್ ಉತ್ಪಾದಿಸಲು ಸನ್ನದ್ಧವಾಗಿದೆ. ನಾವು ಉದ್ಯಮ, ಬಳಕೆದಾರರು, ಉತ್ಪಾದಕರು ಹಾಗೂ ಪರಿಸರವಾದಿಗಳೂ ಸೇರಿದಂತೆ ಎಲ್ಲರ ಅಭಿಪ್ರಾಯ ಪಡೆದು ಅಂತಿಮ ನಿರ್ಧಾರಕ್ಕೆ ಬರುತ್ತೇವೆ ಎಂದವರು ಹೇಳಿದ್ದಾರೆ.

## ಚೆಕ್ ಬೌನ್ಸ್ ಪ್ರಕರಣ : ಬಂಧನ

ದಾವಣಗೆರೆ,ಆ.17 -ಚೆಕ್ ಬೌನ್ಸ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿ.ಎಸ್. ಕುಮಾರ್ ಅವರನ್ನು 3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಕಿವಿ) ನ್ಯಾಯಾಂಗ ಬಂಧನಕ್ಕೊಪ್ಪಿಸಿದೆ.

ಪಿ.ಓ.ರೇವಣಸಿದ್ದಪ್ಪ ನ್ಯಾಯಾಲಯದಲ್ಲಿ ದಾಖಲಿಸಿದ್ದ ಪ್ರಕರಣದ ಹಿನ್ನೆಲೆಯಲ್ಲಿ ಜಾಮೀನು ಪಡೆದಿದ್ದ ಕುಮಾರ್, ಮುದ್ದತ್ತುಗಳಿಗೆ ಹಾಜರಾಗದ ಕಾರಣ, ಕೋರ್ಟ್ ದಸ್ತಗಿರಿ ವಾರೆಂಟ್ ಜಾರಿ ಮಾಡಿತ್ತು.



**ವೈ. ಶಿವಕುಮಾರ್ ನಿಧನ**



ದಾವಣಗೆರೆ ತಾಲ್ಲೂಕು ಪುಟಗನಾಳು ಗ್ರಾಮದ ನಿವಾಸಿಯಾದ ವೈ. ಶಿವಕುಮಾರ್ (34) ಅವರು ದಿನಾಂಕ 17.08.2022ರ ಬುಧವಾರ ಬೆಳಿಗ್ಗೆ 10.30ಕ್ಕೆ ನಿಧನರಾದರು. ಇಬ್ಬರು ಪುತ್ರರು, ತಾಯಿ, ಪತ್ನಿ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 18.08.2022ರ ಗುರುವಾರ ಬೆಳಿಗ್ಗೆ 10.30ಕ್ಕೆ ಪುಟಗನಾಳ್ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.



**ಅಜ್ಜಪ್ಪ ಮಟ್ಟಿಯವರ ನಿಧನ**



ಹರಪನಹಳ್ಳಿ ವಾಸಿ, ಎಪಿಎಂಸಿ ಹಿರಿಯ ದಲ್ಲಾಲರಾದ ಅಜ್ಜಪ್ಪ ಮಟ್ಟಿಯವರ (85 ) ಅವರು, ದಿನಾಂಕ 17.8.2022 ರ ಬುಧವಾರ ಮಧ್ಯಾಹ್ನ 1 ಗಂಟೆಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯನ್ನು ದಿನಾಂಕ 18.8.2022ರ ಗುರುವಾರ ಮಧ್ಯಾಹ್ನ 12 ಗಂಟೆಗೆ ಹರಪನಹಳ್ಳಿಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.


# ಪವಿತ್ರ ಸ್ನೇಹ ಪರಸ್ಪರರಲ್ಲಿ ಇರಬೇಕು

**(1ನೇ ಪುಟದಿಂದ)** ಕೋಪ, ದುರಾಸೆ, ಅನಾವಶ್ಯಕ ಮೊಬೈಲ್ ಬಳಕೆ ಮಾಡದಿರುವ ಬಗ್ಗೆ ಹಾಗೂ ನಮ್ಮ ಉದ್ಯೋಗ, ಕರ್ತವ್ಯದಲ್ಲಿ ಪ್ರಾಮಾಣಿಕ, ಸತ್ಯತೆ ತೋರುವ ಪ್ರತಿಜ್ಞೆ ಮಾಡಬೇಕು ಎಂದರು.

ಕೊರೊನಾ ಕಾಲದಲ್ಲಿ ಪೌರ ಕಾರ್ಮಿಕರ ಸೇವೆ ಅನನ್ಯವಾದದ್ದು. ಈ ಸೇವೆಯಿಂದ ಭಗವಂತನು ನಿಮಗೆ ಉತ್ತಮ ಆರೋಗ್ಯ ನೀಡಿದ್ದಾನೆ. ನಿಮ್ಮ ಸೇವೆ ಮೆಚ್ಚಿ ಆರೋಗ್ಯ ಮತ್ತಷ್ಟು ವೃದ್ಧಿಸಲೆಂದು ಹಾರೈಸಿ, ನಮ್ಮ ಸಂಸ್ಥೆಯಿಂದ ಈ ಸಹೋದರ-ಸಹೋದರಿಯರಿಗೆ ಭಗವಂತನ ರಕ್ಷಾ ಕವಚ ಇರಲೆಂದು ರಾಖಿ ಕಟ್ಟಿ ರಕ್ಷಾ ಬಂಧನ ಸಂಭ್ರಮಿಸಲು ಬಂದಿದ್ದೇವೆ ಎಂದರು.

ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್ ಮಾತನಾಡಿ, ಪ್ರಾಮಾಣಿಕ ಸೇವೆ ಮಾಡುವವರಿಗೆ ಹಣ ಕಾಯುವುದಿಲ್ಲ, ದೇವರು ಕಾಪಾಡುತ್ತಾನೆಂ ಬುದಕ್ಕೆ ಕೊರೊನಾದಂತಹ ಕಠಿಣ ಸಂದರ್ಭ ದಲ್ಲೂ ಪೌರ ಕಾರ್ಮಿಕರು ಧೈರ್ಯದಿಂದ ಪ್ರಾಮಾಣಿಕ ಸೇವೆ ಮಾಡಿರುವುದೇ ಸಾಕ್ಷಿಯಾ ಗಿದೆ. ಕಷ್ಟಕ್ಕೆ ಸ್ಪಂದಿಸಲು ಬರುವವರೇ ನಮ್ಮ ಅಣ್ಣ-ತಮ್ಮಂದಿರು ಎಂಬ ಭಾವನೆಯಲ್ಲಿ ಬಾಳಬೇಕು ಎಂದರು. ಇದೇ ವೇಳೆ ನಗರ ಪಾಲಿಕೆ ನೌಕರರ ಸಂಘದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಮಂಜುನಾಥ ಏಕಬೋಟೆ, ನಗರದ ಸ್ವಚ್ಛತೆ ಕಾಪಾಡಿ ಸುಂದರವನ್ನಾಗಿಸುವ ಜೊತೆಗೆ ಜನರ ಆರೋಗ್ಯ ಕಾಪಾಡುವಲ್ಲಿ ಪೌರ ಕಾರ್ಮಿಕರ ಸೇವೆ ಮತ್ತು ಶ್ರಮ ಮಹತ್ವದ್ದಾಗಿದೆ ಎಂದರು.

### ನನ್ನ ಹೆತ್ತವರೂ ಪೌರ ಕಾರ್ಮಿಕರೆಂಬ ಖುಷಿ ನನ್ನದು

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜು ಮಾತನಾಡಿ, ಪೌರ ಕಾರ್ಮಿಕರ ಬಗ್ಗೆ ನನಗೆ ಅಪಾರ ಅಭಿಮಾನ, ಗೌರವವಿದೆ. ಅಲ್ಲದೇ, ನನ್ನ ಹೆತ್ತವರೂ ಪೌರ ಕಾರ್ಮಿಕರೆಂಬ ಖುಷಿ ನನ್ನದು. ಬಾಲ್ಯದಲ್ಲಿ ತಂದೆ, ತಾಯಿ ಕೆಲಸಕ್ಕೆ ಕೈ ಜೋಡಿಸಿ, ಕಸ ಹೊಡೆಯುವುದು, ಚರಂಡಿ ಸ್ವಚ್ಛಗೊಳಿಸುವ ಕೆಲಸ ಮಾಡಿದ್ದೇನೆ. ಜನರ ಸೇವೆ, ಊರಿನ ಸೇವೆಯನ್ನು ಪೌರ ಕಾರ್ಮಿಕನಾಗಿ ಮಾಡಬೇಕೆಂಬ ಆಸೆ ನನ್ನದು ಎಂದು ಹೇಳಿದರು.

ಕೊರೊನಾ ಸಂಕಷ್ಟದ ಪರಿಸ್ಥಿತಿಯಲ್ಲಿ ಊರ ಸ್ವಚ್ಛತೆ, ಜನರ ಆರೋಗ್ಯ, ಪ್ರಾಣ ರಕ್ಷಣೆಗೆ ತಮ್ಮ ಜೀವವನ್ನೇ ಮುಡುಪಾಗಿಟ್ಟು ಕೆಲಸ ಮಾಡಿದ್ದ ಅದೇ ಪೌರ ಕಾರ್ಮಿಕರಿಗೆ ಕುಡಿಯಲು ನೀರು ಕೇಳಿದರೂ ಇಲ್ಲವೆಂದು ಜನತೆ ಮಾನವೀಯತೆಯನ್ನೇ ಮರೆತು ದೂರ ಕಳಿಸಿದ್ದು ಇಂದಿಗೂ ನನ್ನ ಕಣ್ಣಲ್ಲಿ ನೀರು ತರಿಸುತ್ತದೆ. ಇನ್ನಾದರೂ ಮಾನವೀಯ ದೃಷ್ಟಿಯಿಂದಲಾದರೂ ನೀರು ಕೊಟ್ಟು ಉಪಕರಿಸಿ ಎಂದರು.

ಈ ಸಂದರ್ಭದಲ್ಲಿ ಸುಮಾರು 200ಕ್ಕೂ ಹೆಚ್ಚು ಪೌರ ಕಾರ್ಮಿಕರಿಗೆ ಮೇಯರ್ ಜಯಮ್ಮ ಗೋಪಿನಾಯ್ಕ, ಲೀಲಾಜಿ ಸೇರಿದಂತೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಪದಾಧಿಕಾರಿಗಳು ಸಿಂಧೂರ ತಿಲಕವಿಟ್ಟು ರಾಖಿಕಟ್ಟಿ ಸಿಹಿ ನೀಡಿ ರಕ್ಷಾ ಬಂಧನವನ್ನು ಸಂಭ್ರಮದಿಂದ ಆಚರಿಸಿದರು.

ಕಾರ್ಯಕ್ರಮದಲ್ಲಿ ಪ್ರಜಾಪಿತ ಬ್ರಹ್ಮಾ ಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ವಿದ್ಯಾ ನಗರ ಶಾಖೆ ಸಂಚಾಲಕರಾದ ಬ್ರಹ್ಮಾಕುಮಾರಿ ಗೀತಾ, ಪೌರ ನೌಕರರ ಸಂಘದ ಸಂಘಟನಾ ಕಾರ್ಯದರ್ಶಿ ಎಸ್.ಕೆ. ಪಾಂಡುರಾಜ್, ಕಾರ್ಯದರ್ಶಿ ಪಿ. ವೆಂಕಟೇಶ್, ನಾಗರಾಜ, ಟಿ.ಸಿ. ಬಸವರಾಜಯ್ಯ ಸೇರಿದಂತೆ ಇತರರು ಇದ್ದರು.

# ಸಮಾಜ ಬದಲಾವಣೆಗೆ ನುಲಿಯ ಚಂದಯ್ಯನವರ ವಚನಗಳು ಪ್ರೇರಣೆ

ಹರಪನಹಳ್ಳಿ, ಆ.17- ಬಸವಣ್ಣನವರ ಸಮಕಾಲೀನರಾದ ನುಲಿಯ ಚಂದಯ್ಯನವರ ವಚನಗಳು ಸಮಾಜದ ಬದಲಾವಣೆಗೆ ಪ್ರೇರಣೆ ನೀಡಿದ್ದು, ಅವರ ವಚನಗಳನ್ನು ಎಲ್ಲರೂ ಅಳವಡಿಸಿಕೊಳ್ಳುವ ಮೂಲಕ ಮುಖ್ಯವಾಹಿನಿಗೆ ಬರಬೇಕು ಎಂದು ತಹಶೀಲ್ದಾರ್ ಡಾ.ಶಿವಕುಮಾರ ಬಿರಾದಾರ ಹೇಳಿದರು.

ಪಟ್ಟಣದ ನಟರಾಜ ಕಲಾಭವನದಲ್ಲಿ ತಾಲ್ಲೂಕು ಆಡಳಿತ ಹಾಗೂ ಕೊರಮ, ಕೊರಚ, ಕೊರವ ಸಮುದಾಯದಿಂದ ಆಯೋಜಿಸಲಾಗಿದ್ದ ಕಾಯಕಯೋಗಿ ಶ್ರೀ ಶಿವಶರಣ ನುಲಿಯ ಚಂದಯ್ಯನವರ 915ನೇ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಕೇವಲ ಕೊರಚ, ಕೊರಮ, ಕೊರವ ಸಮಾಜಕ್ಕೆ ಮಾತ್ರ ಸೀಮಿತರಾಗದೇ ಅವರು ಎಲ್ಲಾ ಸಮುದಾಯದವರಿಗೆ ಅನುಕೂಲಕರವಾಗಿರುವಂತಹ ಕಾಯಕವನ್ನು ಮಾಡಿದಂತಹ ಮಹಾಶಿವಶರಣರಾಗಿದ್ದಾರೆ. ಹಾಗಾಗಿ ರಾಜ್ಯ ಸರ್ಕಾರದಿಂದ ನುಲಿಯ ಚಂದಯ್ಯನವರ ಜಯಂತಿಯನ್ನು ಪ್ರಥಮವಾಗಿ ಆಚರಿಸಲು ಆದೇಶಿಸಿದ್ದು, ಅತ್ಯಂತ ತಳಸಮುದಾಯಗಳ ಪೋಷಕರು ತಮ್ಮ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸಲು ಮುಂದಾಗಬೇಕು. ರಾಜಕೀಯವಾಗಿ, ಆರ್ಥಿಕವಾಗಿ, ಸಮಾಜಮುಖಿಯಾಗಿ ಬೆಳಕಿಗೆ ಬರಬೇಕು ಎಂದರು.



ಹರಪನಹಳ್ಳಿ: ಶ್ರೀ ನುಲಿಯ ಚಂದಯ್ಯನವರ 915ನೇ ಜಯಂತಿ ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಡಾ.ಶಿವಕುಮಾರ ಬಿರಾದಾರ

ಮುಖ್ಯಾಧಿಕಾರಿ ಎರಗುಡಿ ಶಿವಕುಮಾರ್ ಮಾತನಾಡಿ, ಈ ಸಮಾಜ ಶಿಕ್ಷಣ, ಹೋರಾಟದಿಂದ ಮಾತ್ರ ಅಭಿವೃದ್ಧಿ ಹೊಂದಲು ಸಾಧ್ಯ. ಧ್ವನಿ ಇಲ್ಲದ ಸಮಾಜಕ್ಕೆ ಧ್ವನಿಯಾಗಬೇಕು ಎಂದರು.

ಕೊರಚ ಸಮಾಜದ ತಾಲ್ಲೂಕು ಅಧ್ಯಕ್ಷ ಅಗ್ರಹಾರ ಕೆ.ಅಶೋಕ ಮಾತನಾಡಿ ಕೊರಚ, ಕೊರಮ, ಕೊರವ ಸಮಾಜ ತಾಲೂಕಿನಲ್ಲಿ ಅತ್ಯಂತ ಹಿಂದುಳಿದ ಸಮಾಜವಾಗಿದ್ದು, ಈ ಸಮಾಜಕ್ಕೆ ಯಾವುದೇ ಜನಪ್ರತಿನಿಧಿಗಳು ಕೊಡುಗೆ ನೀಡಿಲ್ಲ, ಹಿಂದಿನ ಸರ್ಕಾರದ ಅವಧಿಯಲ್ಲಿ ನೀಡಿದ ನಿವೇಶನದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಅನುದಾನ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮಕ್ಕೂ ಮೊದಲು ಪಟ್ಟಣದ ಪ್ರವಾಸಿ ಮಂದಿರದಿಂದ ನುಲಿಯ ಚಂದಯ್ಯನವರ ಭಾವಚಿತ್ರದೊಂದಿಗೆ ಕಲಾ ವಾದ್ಯ ಮೇಳದ ಮೆರವಣಿಗೆಗೆ ಶಾಸಕ ಜಿ.ಕರುಣಾಕರ ರೆಡ್ಡಿ ಚಾಲನೆ ನೀಡಿದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ.ಪಿ.ಲತಾ ಇಜಾರಿ ಶಿರಸಪ್ಪ ವೃತ್ತದಲ್ಲಿ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಿಸಿಎಂ ಅಧಿಕಾರಿ ಕೊಳಚಿ ಭೀಮಪ್ಪ, ಉಪನ್ಯಾಸಕ ನಾಗರಾಜ, ಕೊರವ ಸಮಾಜದ ಅಧ್ಯಕ್ಷ ಎಸ್.ದುರುಗಪ್ಪ, ನಿವೃತ್ತ ಶಿಕ್ಷಕ ರಾಮಮೂರ್ತಿ, ಬಿಜೆಪಿ ಎಸ್‌ಸಿ ಮೋರ್ಚಾ ಅಧ್ಯಕ್ಷ ಎಂ.ಮಲ್ಲೇಶ, ಎಸ್‌ಟಿ ಮೋರ್ಚಾ ಮುಖಂಡರಾದ ದಾದಾಪುರ ಶಿವಾನಂದ, ಕಲ್ಲೇರ ಬಸವರಾಜ, ವಿನಾಯಕ ಭಜಂತ್ರಿ, ಕಾಳೇಶಪ್ಪ, ರಾಜಕುಮಾರ, ಶಿಕ್ಷಕ ಬಸವರಾಜ, ಹಾಲೇಶಪ್ಪ, ಅಗ್ರಹಾರ ರವಿ, ಕೊರವರ ನಾಗಪ್ಪ, ಯಲ್ಲಾಪುರ ಕೆಂಚಪ್ಪ, ಬಾಳಪ್ಪ, ಮಾರುತಿ, ಮತ್ತೂರು ಅಶೋಕ ಸೇರಿದಂತೆ ಇತರರು ಇದ್ದರು.

# ಖಾತ್ರಿ ಯೋಜನೆ ಪ್ರಗತಿ ಕುಂಠಿತ



**(1ನೇ ಪುಟದಿಂದ)** ಇದೆಯಾ ? ಎಂದು ಪ್ರಶ್ನಿಸಿದರು. ರಾಜ್ಯದಿಂದ ಪ್ರತಿ ಗ್ರಾ.ಪಂ.ಗೆ 21,800 ಮಾನವ ದಿನಗಳ ಗುರಿ ನೀಡಲಾಗಿದೆ. ಕೂಲಿಕಾರರಿಗೆ ಕೆಲಸ ಕೊಡ್ತಿಲ್ಲ ಎಂಬ ದೂರುಗಳು ಬರುತ್ತಿವೆ. ಸರ್ಕಾರಕ್ಕೆ ನಾನು ಉತ್ತರ ಕೊಡಬೇಕಾಗಿದೆ. ಎಲ್ಲಾ ಗ್ರಾ.ಪಂ. ಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ನಿಗದಿತ ಗುರಿ ಸಾಧಿಸಬೇಕು ಎಂದು ಪ್ರಭಾರಿ ಇ.ಓ.ಚಂದ್ರಶೇಖರ್ ಅವರಿಗೆ ಸೂಚಿಸಿದರು.

ತಾಂತ್ರಿಕ ಸಿಬ್ಬಂದಿಗಳ ಮೂಲಕ ಪ್ರತಿ ಗ್ರಾ.ಪಂ.ನಲ್ಲಿ ಮನರೇಗಾದಡಿ ಕನಿಷ್ಠ 10 ಕಾಮಗಾರಿ ಅಂದಾಜು ಕ್ರಿಯಾ ಯೋಜನೆಯನ್ನು ಪಿಡಿಓ ಗಳು ಪೂರ್ವಯೋಜಿತವಾಗಿ ಅನುಮೋದನೆಗೊಳಿಸಿಕೊಂಡು ತಯಾರಿಸಿಕೊಂಡಿರಬೇಕು. ಒಂದು ಕಾಮಗಾರಿಗೆ 1000 ಜನ ಕೂಲಿಕಾರ್ಮಿಕರಿಗೆ ವಿಳಂಬವಾಗದೆ ಎನ್.ಎಂ.ಆರ್ ತೆಗೆದು ಕೆಲಸ ಕೊಡುವಂತಿರಬೇಕು. ಶೇ.99.10 ರಷ್ಟು ಜಾಬ್ ಕಾರ್ಡ್ ಆಧಾರ್ ಲಿಂಕ್ ಆಗಿದ್ದು, ವೈಯಕ್ತಿಕ ಕಾಮಗಾರಿ ಕೊಡಲು ಏನು ಸಮಸ್ಯೆ ಎಂದು ಎಂಐಎಸ್ ಹಾಗೂ ತಾಂತ್ರಿಕ ಸಿಬ್ಬಂದಿಗಳಿಗೆ ಪ್ರಶ್ನಿಸಿದರು.

ಜಿ.ಪಂ ಉಪಕಾರ್ಯದರ್ಶಿ ಗಿರೀಶ್ ಮಾತನಾಡಿ, ಜನರು ಆಯುಕ್ತರವರೆಗೆ ಮನರೇಗಾದಡಿ ಕೆಲಸ ಒದಗಿಸಿಲ್ಲ ಎಂಬ ದೂರು ಸಲ್ಲಿಸುತ್ತಾರೆ. ಪಿಡಿಓ ಗಳು ಗ್ರಾ.ಪಂ ಗಳಲ್ಲಿ ಜಾಗೃತಿಯಿಂದ ಕೆಲಸ ಮಾಡಬೇಕು. ಕೂಲಿ ಹಣ ಪಾವತಿಯಾಗುವ ಬಗ್ಗೆ ಮನವರಿಕೆ ಮಾಡಿ ಕೆಲಸಕ್ಕೆ ಕೂಲಿಕಾರ್ಮಿಕರನ್ನು ಕಳಿಸಿಕೊಡಿ ಎಂದು ಹೇಳಿದರು.

ಜಿ.ಪಂ ಸಿಪಿಓ ಮಲ್ಲಾನಾಯ್ಕ, ತಾ.ಪಂ ಪ್ರಭಾರಿ ಇಓ ಚಂದ್ರಶೇಖರ್, ಸಾಮಾಜಿಕ ವಲಯ ಅರಣ್ಯಾಧಿಕಾರಿ ಅಮೃತ ಸೇರಿದಂತೆ ಪಿಡಿಓಗಳು ಮತ್ತು ತಾಂತ್ರಿಕ ಸಿಬ್ಬಂದಿಗಳು ಇದ್ದರು.

# ಅನುದಾನ ಕೊಡಿಸಿ, ರೈತರ ಋಣ ತೀರಿಸಿ



**(1ನೇ ಪುಟದಿಂದ)** ಮಾಡಿ, ಭದ್ರಾ ಅಚ್ಚುಕಟ್ಟಿನಲ್ಲಿ ತುರ್ತಾಗಿ ಆಗಬೇಕಾಗಿರುವ ಕಾಮಗಾರಿಗಳ ಪಟ್ಟಿ ಸಮೇತ ಪತ್ರ ನೀಡಿ ಕೂಡಲೇ ಅನುದಾನ ನೀಡುವಂತೆ ಮನವಿ ಮಾಡಿ ಬಂದಿದ್ದೇನೆ.

ಈ ವಿಷಯವನ್ನು ಮಾಜಿ ಸಿಎಂ ಯಡಿಯೂರಪ್ಪ, ಸಂಸದ ಬಿ.ವೈ. ರಾಘವೇಂದ್ರ ಅವರ ಗಮನಕ್ಕೂ ತಂದಿದ್ದೇನೆ. ಈ ಸಂದರ್ಭದಲ್ಲಿ ಅಚ್ಚುಕಟ್ಟಿನ ಶಾಸಕರು, ಸಿಎಂ ಮೇಲೆ ಒತ್ತಡ ಹಾಕಿದರೆ ಖಂಡಿತವಾಗಿಯೂ ಅನುದಾನ ಬಿಡುಗಡೆಯಾಗಲಿದೆ ಎಂಬ ವಿಶ್ವಾಸ ನನಗಿದೆ. ಈ ನಿಟ್ಟಿನಲ್ಲಿ ದಾವಣಗೆರೆ ಜಿಲ್ಲೆಯ ಸಂಸದರು, ಶಾಸಕರು ಸಿಎಂ ಭೇಟಿ ಮಾಡಿ ಚರ್ಚಿಸಲಿ ಎಂದು ಪವಿತ್ರ ರಾಮಯ್ಯ ಹೇಳಿದರು.

**ಸೌಡಿಗಳಿಗೆ ಸಂಬಳ ಇಲ್ಲ:** ಭದ್ರಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿರುವ ಸೌಡಿಗಳಿಗೆ ಕಳೆದ ಏಪ್ರಿಲ್ ತಿಂಗಳಿನಿಂದ ಸಂಬಳ ನೀಡಿಲ್ಲ. ಅವರು ಸೋಮವಾರದಿಂದ ಕೆಲಸಕ್ಕೆ ಬರುವುದಿಲ್ಲ ಎಂಬ ಎಚ್ಚರಿಕೆ ನೀಡಿದ್ದಾರೆ. ಸೌಡಿಗಳು ಕೆಲಸಕ್ಕೆ ಬಾರದಿದ್ದರೆ ನೀರಿನ ನಿರ್ವಹಣೆ ಇಲ್ಲದಂತಾಗಿ ರೈತರಿಗೆ ತೊಂದರೆಯಾಗಲಿದೆ. ಈ ಬಗ್ಗೆಯೂ ಶಾಸಕರು, ಸಂಸದರು ಗಮನ ಹರಿಸಲಿ ಎಂದು ಒತ್ತಾಯಿಸಿದರು.

ನಂತರ ಕಾಡಾ ಅಧ್ಯಕ್ಷರು ರೈತರ ಮನವಿ ಮೇರೆಗೆ ಹರಳಹಳ್ಳಿ ರಸ್ತೆಯಲ್ಲಿರುವ ಬಸವಾಪಟ್ಟಣ ಉಪ ವಿಭಾಗ ವ್ಯಾಪ್ತಿಯ 9ನೇ ಬಿ ಉಪ ಕಾಲುವೆಗೆ ಭೇಟಿ ನೀಡಿ, ನೀರು ಸರಿಯಾಗಿ ರೈತರ ಹೊಲಗಳಿಗೆ ಹೋಗದಿರುವುದನ್ನು ನೋಡಿ ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಭದ್ರಾ ಕಾಡಾ ಎಇಇ ಅವರಿಗೆ ಸೂಚಿಸಿದರು.

ಈ ಭಾಗದಲ್ಲಿ ಹದಗೆಟ್ಟ ಚಾನಲ್ ರಸ್ತೆಗಳನ್ನು ಕಣ್ಣಾರೆ ಕಂಡ ಅವರು, ಸ್ಥಳೀಯ ಜನಪ್ರತಿನಿಧಿಗಳು ಏನು ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ಆಗ ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಕಾಮಗಾರಿಗಳ ಪಟ್ಟಿ ಮಾಡಿಕೊಡಿ ಸಂಸದರಿಗೆ ಹೇಳಿ ಕೆಲಸ ಮಾಡಿಸುತ್ತೇವೆ ಎಂದು ರೈತರಿಗೆ ಭರವಸೆ ನೀಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಕೆ.ಜಿ. ಪರಮೇಶ್ವರಪ್ಪ, ಸುರೇಶ್ ಶಾಸ್ತ್ರಿ, ಬೆಣ್ಣೆಹಳ್ಳಿ ಸಿದ್ದೇಶ್, ಬಿ.ಮಂಜುನಾಥ್, ಓ.ಜಿ. ಕುಮಾರ್, ಉಡೇದರ ಸಿದ್ದೇಶ್, ಉಳ್ಳಳ್ಳಿ ಸಿದ್ದೇಶ್, ಓ. ಜಿ. ಕಿರಣ್, ಅಜ್ಜಯ್ಯ, ಭರ್ಮಳ್ಳಿ ಮಂಜುನಾಥ್, ಜಿ.ಪಿ. ಹನುಮನಗೌಡ, ರೇವಣಸಿದ್ದಪ್ಪ, ಎಇಇ ಧನಂಜಯ ಮತ್ತಿತರರು ಉಪಸ್ಥಿತರಿದ್ದರು.

**ಕೊನೆ ಭಾಗಕ್ಕೆ ಭೇಟಿ:** ಅಚ್ಚುಕಟ್ಟಿನ ಕೊನೆ ಭಾಗವಾದ ಭಾನುವಳ್ಳಿಗೆ ತೆರಳಿದ ಪವಿತ್ರ ರಾಮಯ್ಯ ಅವರಿಗೆ ರೈತ ಹೆಚ್.ಕೆ. ನಾರಾಯಣಪ್ಪ ಇತರರು ನಾಟಿ ಮಾಡಲು ನೀರಿನ ಸಮಸ್ಯೆ ಆಗಿರುವುದನ್ನು ತೋರಿಸಿದರು. ಆಗ ಎಇಇ ಧನಂಜಯ ಅವರು, ಗುರುವಾರದಿಂದ ಈ ಭಾಗದ ನೀರಿನ ರೊಟೇಷನ್ ಬರಲಿದೆ ಎಂದಾಗ ರೈತರು ಸುಮ್ಮನಾದರು.

ಈಗ ಮಳೆಗಾಲ ಇದ್ದು, ಈಗಲೇ ನೀರಿನ ಸಮಸ್ಯೆಯ ದೂರು ಬಂದರೆ ಮುಂದೆ ಬೇಸಿಗೆಯಲ್ಲಿ ಯಾವ ರೀತಿ ಕೆಲಸ ಮಾಡುತ್ತೀರಿ ಎಂದು ಅವರನ್ನು ಪ್ರಶ್ನಿಸಿದರು.

ನಾನು ಅಧ್ಯಕ್ಷರಾಗಿರುವ ತನಕ ಅಚ್ಚುಕಟ್ಟಿನಲ್ಲಿ ನೀರಿನ ತೊಂದರೆ ಆಗದಂತೆ ನೋಡಿಕೊಳ್ಳುತ್ತೇನೆ. ಏನೇ ಸಮಸ್ಯೆ ಇದ್ದರೂ ಫೋನ್ ಮಾಡಿ ಎಂದು ರೈತರಿಗೆ ಹೇಳಿದರು.

# ಮಗುವಿಗೆ ಎದೆ ಹಾಲುಣಿಸುವುದು ಮುಖ್ಯ : ಪ್ರಭಾ ಮಲ್ಲಿಕಾರ್ಜುನ್



ದಾವಂಗೆರೆ, ಆ. 17- ಹುಟ್ಟಿದ ಮಗುವಿಗೆ ತಾಯಿಯ ಎದೆ ಹಾಲುಣಿಸುವುದು ಮುಖ್ಯ. ತಾಯಂದಿರು ಈ ಬಗ್ಗೆ ಜಾಗೃತಿ ವಹಿಸಬೇಕು ಎಂದು ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಎಸ್.ಎಸ್. ನರ್ಸಿಂಗ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಗುವಿಗೆ ಹಾಲು ನೀಡುವ ಮೂಲಕ ರಕ್ಷಣೆ ಮಾಡುವುದು ತಾಯಿಯ ಕರ್ತವ್ಯವಾಗಿದೆ. ನರ್ಸ್‌ಗಳು ಸಹ ತಾಯಂದಿರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಎಸ್.ಎಸ್ ವೈದ್ಯಕೀಯ ಮಹಾವಿದ್ಯಾಲಯದ ಮಕ್ಕಳ ವಿಭಾಗದ ಪ್ರಾಧ್ಯಾಪಕರಾದ ಡಾ.ಜಿ.ಎಸ್. ಲತಾ ಅವರು, ಗರ್ಭಿಣಿಯರಿಗೆ ಎದೆ ಹಾಲಿನ ಮಹತ್ವ ಕುರಿತು ಅರಿವು ಮೂಡಿಸುವುದು ಬಹುಮುಖ್ಯ ಎಂದು ತಿಳಿಸಿದರು.

ನರ್ಸಿಂಗ್ ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನ ಹಾಗೂ ವೈಯಕ್ತಿಕ ಜೀವನದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಹೇಗೆ ಬದ್ಧರಾಗಿರಬೇಕೆಂದು ಉಪನ್ಯಾಸಕರಾದ ಶ್ರೀಮತಿ ಲತಿಕಾ ದಿನೇಶ್ ಶೆಟ್ಟಿ ತಿಳಿಸಿಕೊಟ್ಟರು.

ತಾಯಿ ಮತ್ತು ಮಗುವಿನ ಹಾರೈಕೆಯಲ್ಲಿ ಸೇವೆ ಮಾಡುವ ನರ್ಸ್‌ಗಳ ಪಾತ್ರ ಬಹಳ ಮುಖ್ಯವಾದದ್ದು. ಆದುದರಿಂದ ನರ್ಸ್‌ಗಳು ಇದರ ಬಗ್ಗೆ ಹೆಚ್ಚಿನ ಮಟ್ಟದಲ್ಲಿ ತಿಳಿದುಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಎಸ್.ಎಸ್. ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲ ವಿ.ಬಿ. ವೀರೇಶ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಪ್ರಥಮ ವರ್ಷದ ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿನಿ ವರ್ಷಿಣಿ ಎಚ್.ಎಂ. ಪ್ರಾರ್ಥಿಸಿದರು, ಉಪನ್ಯಾಸಕರಾದ ಸವಿತಾ ಸ್ವಾಗತಿಸಿದರು, ಸಹಾಯಕ ಪ್ರಾಧ್ಯಾಪಕರಾದ ಪ್ರವೀಣ್ ಕಡೂರ್ ವಂದನಾರ್ಪಣೆ ಮಾಡಿದರು, ಉಪನ್ಯಾಸಕರಾದ ಮಂಜುನಾಥ್.ಎಸ್.ಎಂ. ನಿರೂಪಿಸಿದರು.

# ಮೀನು ಉತ್ಪಾದನೆಗೆ ನಿರ್ಧಾರ

**(1ನೇ ಪುಟದಿಂದ)** ರಾಜ್ಯದಲ್ಲಿ ಮತ್ಸ್ಯ ಕ್ರಾಂತಿ ನಡೆಯಲಿದ್ದು ಇದಕ್ಕೆ ಬೇಕಾದ ಪೂರ್ವ ತಯಾರಿಗಳನ್ನು ಮಾಡಿಕೊಂಡಿರುವುದಾಗಿ ವಿವರ ನೀಡಿದರು.

ಮೀನುಗಾರಿಕಾ ಇಲಾಖೆಯ ವತಿಯಿಂದ ಬೆಂಗಳೂರು ಸೇರಿದಂತೆ ಕೆಲವು ಕಡೆ ಮೀನಿನ ಊಟದ ಹೋಟೆಲ್ ಗಳನ್ನು ಈ ಹಿಂದೆ ಸ್ಥಾಪಿಸಲಾಗಿದೆಯಾದರೂ ಹಣಕಾಸಿನ ಕೊರತೆಯ ಹಿನ್ನಲೆಯಲ್ಲಿ ವಿಸ್ತರಿಸಲು ಸಾಧ್ಯವಾಗಿರಲಿಲ್ಲ. ಆದರೆ, ಈಗ ಖಾಸಗಿ ಸಹಭಾಗಿತ್ವದಡಿ ಮೀನುಗಾರಿಕೆ ಇಲಾಖೆ ರಾಜ್ಯದ ಎಲ್ಲೆಡೆ ಮೀನು ಊಟದ ಮನೆಗಳನ್ನು ಪ್ರಾರಂಭಿಸಲಿದೆ ಎಂದರು.

ರಾಜ್ಯದಲ್ಲಿ ಮೀನನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಿಸಲು ನಿರ್ಧರಿಸಲಾಗಿದ್ದು ಇದಕ್ಕಾಗಿ ಎಲ್ಲ ಜಿಲ್ಲೆಗಳಲ್ಲಿ ಮೀನು ಮರಿ ಸಾಕಾಣಿಕೆ ಕೇಂದ್ರಗಳನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದ ಅವರು, ಇಂತಹ ಸಾಕಾಣಿಕೆ ಕೇಂದ್ರವನ್ನು ಆಲಮಟ್ಟಿ ಜಲಾಶಯದಲ್ಲೂ ಸ್ಥಾಪಿಸಲು ತೀರ್ಮಾನಿಸಲಾಗಿದೆ ಎಂದರು.

ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯನ್ನು ದೊಡ್ಡ ಮಟ್ಟದಲ್ಲಿ ಬೆಳೆಸುವುದಾಗಿ ನುಡಿದ ಅವರು, ಹೊರರಾಜ್ಯಗಳಿಂದ ಮೀನು ಮರಿಗಳನ್ನು ಆಮದು ಮಾಡಿಕೊಳ್ಳುವ ಅನಿವಾರ್ಯತೆಯಿಂದ ಇದುವರೆಗೆ ಇದು ನಮಗೆ ಸಾಧ್ಯವಾಗಿರಲಿಲ್ಲ. ಗುಜರಾತ್, ಆಂಧ್ರಪ್ರದೇಶ, ತಮಿಳುನಾಡು ರಾಜ್ಯಗಳ ಮೇಲಿದ್ದ ಇಂತಹ ಅವಲಂಬನೆಯನ್ನು ತಪ್ಪಿಸಲು ನಮ್ಮಲ್ಲೇ ಹೆಚ್ಚು ಮೀನು ಸಾಕಾಣಿಕಾ ಕೇಂದ್ರಗಳನ್ನು ಸ್ಥಾಪನೆ ಮಾಡುತ್ತಿರುವುದರಿಂದ ಅನುಕೂಲವಾಗಲಿದೆ ಎಂದರು.

# 20ರಲ್ಲಿ 18 ನಗರಗಳು ಭಾರತದಲ್ಲಿ

**(1ನೇ ಪುಟದಿಂದ)** ಕಣಗಳಿಂದಾಗಿ 2019ರಲ್ಲಿ 17 ಲಕ್ಷ ಜನ ಸಾವನ್ನಪ್ಪಿದ್ದರು ಎಂದು ವರದಿ ತಿಳಿಸಿದೆ.

ಭಾರತ, ನೈಜೀರಿಯ, ಪೆರು ಹಾಗೂ ಬಾಂಗ್ಲಾದೇಶಗಳ ನಗರಗಳಲ್ಲಿ ಅತಿ ಹೆಚ್ಚು ಪಿಎಂ2.5 ಮಾಲಿನ್ಯ ಇದೆ. ಭಾರತ ಹಾಗೂ ಇಂಡೋನೇಷಿಯಾಗಳಲ್ಲಿ ಪಿಎಂ2.5 ಮಾಲಿನ್ಯ ತೀವ್ರವಾಗಿ ಹೆಚ್ಚಾಗಿದೆ. ಮತ್ತೊಂದೆಡೆ ಚೀನಾದಲ್ಲಿ ಪಿಎಂ2.5 ಮಾಲಿನ್ಯ ಗಣನೀಯವಾಗಿ ಕಡಿಮೆಯಾಗಿದೆ.

7,239 ನಗರಗಳ ಪೈಕಿ ಅತಿ ಹೆಚ್ಚು ಮಾಲಿನ್ಯ ಇರುವ 20 ನಗರಗಳಲ್ಲಿ 18 ಭಾರತದಲ್ಲಿವೆ. ಇನ್ನೆರಡು ಇಂಡೋನೇಷಿಯಾಗಳಲ್ಲಿವೆ ಎಂದು ವರದಿ ತಿಳಿಸಿದೆ.

ಅತಿ ಹೆಚ್ಚು ಮಾಲಿನ್ಯದ 50 ನಗರಗಳಲ್ಲಿ 41 ಭಾರತದಲ್ಲಿ ಹಾಗೂ 9 ಇಂಡೋನೇಷಿಯಾದಲ್ಲಿವೆ. ಮಾಲಿನ್ಯ ಅತಿ ಕಡಿಮೆಯಾದ ಎಲ್ಲಾ 20 ನಗರಗಳು ಚೀನಾದಲ್ಲಿವೆ ಎಂದು ವರದಿಯಲ್ಲಿ ಹೇಳಲಾಗಿದೆ.

# ನಿಂಚನ ಶಾಲೆಯಲ್ಲಿ ಮಂತ್ರಿ ಮಂಡಲ ರಚನೆ



ದಾವಣಗೆರೆ, ಆ. 17- ನಗರದ ನಿಂಚನ ಪಬ್ಲಿಕ್ ಶಾಲೆಯಲ್ಲಿ 2022-23ನೇ ಸಾಲಿನ ವಿದ್ಯಾರ್ಥಿಗಳಿಗೆ ಶಾಲಾ ಮಂತ್ರಿ ಮಂಡಲ ರಚನೆಗೆ ನಡೆಸಿದ ಚುನಾವಣೆಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪದಗ್ರಹಣ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕ್ರಮದಲ್ಲಿ ರೈಲ್ವೆ ಇಲಾಖೆ ಪೊಲೀಸ್ ಇನ್‌ಸ್ಪೆಕ್ಟರ್ ಮುಸ್ತಾಕ್ ಅಹ್ಮದ್ ಶೇಕ್, ಶಾಲೆಯ ಸಂಸ್ಥಾಪಕ ಅಧ್ಯಕ್ಷ ಎಸ್. ನಿಂಗಪ್ಪ, ಪ್ರಾಂಶುಪಾಲರಾದ ನಸ್ರೀನ್ ಖಾನ್, ಎಂ. ಎಸ್. ರೂಪ, ಆಸೀಫ್ ಖಾನ್ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಭಾವನಾ ಪ್ರಥಮ, ಶ್ರೀದೇವಿ ಅಂಬಿಗೇರ ದ್ವಿತೀಯ



ರಾಣೇಬೆನ್ನೂರು, ಆ. 17- ಇಲ್ಲಿನ ಶ್ರೀ ತರಳಬಾಳು ಜಗದ್ಗುರು ತಾಂತ್ರಿಕ ಮಹಾ ವಿದ್ಯಾಲಯದ ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್ ವಿಭಾಗದ ಅಂತಿಮ ವರ್ಷದ ಫಲಿತಾಂಶ ಶೇ. 100 ಆಗಿದ್ದು, ಡಿ.ಬಿ. ಭಾವನಾ ಪ್ರಥಮ ಹಾಗೂ ಶ್ರೀದೇವಿ ಅಂಬಿಗೇರ ದ್ವಿತೀಯ ಟಾಪರ್ ಆಗಿರುತ್ತಾರೆ ಎಂದು ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಬಿ.ಶಿವಕುಮಾರ್ ಹಾಗೂ ವಿಭಾಗದ ಮುಖ್ಯಸ್ಥ ಪ್ರೊ. ಟಿ. ಚಂದ್ರಪ್ಪ ತಿಳಿಸಿದ್ದಾರೆ.

# 2021-22ರಲ್ಲಿ ದಾಖಲೆಯ 315.72 ದಶಲಕ್ಷ ಟನ್ ಆಹಾರ ಧಾನ್ಯ ಇಳುವರಿ

ನವದೆಹಲಿ, ಆ. 17 – 2021-22ರಲ್ಲಿ ಗೋಧಿ ಇಳುವರಿ ಶೇ.3ರಷ್ಟು ಇಳಿಕೆಯಾದರೂ ಸಹ, ಭಾರತದಲ್ಲಿ ದಾಖಲೆಯ 315.72 ದಶಲಕ್ಷ ಟನ್ ಆಹಾರ ಧಾನ್ಯ ಉತ್ಪಾದನೆಯಾಗಲಿದೆ ಎಂದು ಕೇಂದ್ರ ಸರ್ಕಾರದ ವರದಿ ತಿಳಿಸಿದೆ. ಬಿಸಿಗಾಳಿಯ ಕಾರಣದಿಂದಾಗಿ ಪಂಜಾಬ್, ಹರಿಯಾಣಗಳಲ್ಲಿ ಗೋಧಿ ಇಳುವರಿ ಕುಂಠಿತವಾಗಿತ್ತು. ಹೀಗಾಗಿ ಇಳುವರಿ 106.81 ದಶಲಕ್ಷ ಟನ್ ಆಗಿರ ಲಿದೆ ಎಂದು ಕೇಂದ್ರ ಕೃಷಿ ಸಚಿವಾಲಯದ ನಾಲ್ಕನೇ ಅಂದಾಜಿನಲ್ಲಿ ತಿಳಿಸಲಾಗಿದೆ.

ಅಕ್ಕಿ, ಮೆಕ್ಕೆಜೋಳ, ಬೇಳೆ, ಕಬ್ಬು, ಖಾದ್ಯ ತೈಲಗಳ ಉತ್ಪಾದನೆ ಹೆಚ್ಚಾಗಲಿದೆ ಎಂದು ಅಂದಾಜಿಸಲಾಗಿದೆ. ಜುಲೈ 2021ರಿಂದ ಜೂನ್ 2022ರ ಅವಧಿಗೆ ಈ ಅಂದಾಜು ರೂಪಿಸಲಾಗಿದೆ.

ಈ ಅವಧಿಯಲ್ಲಿ ಆಹಾರ ಧಾನ್ಯದ ಉತ್ಪಾದನೆ 315.72 ದಶಲಕ್ಷ ಟನ್ ಆಗಿರ ಲಿದೆ ಎಂದು ಅಂದಾಜಿಸಲಾಗಿದೆ. ಇದು ದಾಖಲೆಯ ಮಟ್ಟವಾಗಿದೆ. 2020-21 ರಲ್ಲಿ ದೇಶದಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 310.74 ದಶಲಕ್ಷ ಟನ್ ಆಗಿತ್ತು.

## ಸಾಲ ಗ್ಯಾರಂಟಿಗೆ 50 ಸಾವಿರ ಕೋಟಿ

**(1ನೇ ಪುಟದಿಂದ)** ರೂ.ಗಳ ಸಾಲ ಗ್ಯಾರಂಟಿ ಯೋಜನೆ ಜಾರಿಗೆ ತಂದಿತ್ತು. ಇದನ್ನು 50 ಸಾವಿರ ಕೋಟಿ ರೂ.ಗಳಷ್ಟು ಹೆಚ್ಚಿಸಿ ಐದು ಲಕ್ಷ ಕೋಟಿ ರೂ.ಗಳಿಗೆ ನಿಗದಿ ಪಡಿಸಲಾಗಿದೆ.

# ಲೈಂಗಿಕ ಪ್ರಚೋದನಕಾರಿ ಉಡುಗೆ ಧರಿಸಿದ್ದರೆ ಪೀಡನೆ ಸೆಕ್ಷನ್ ಅನ್ವಯವಾಗದು

ತಿರುವನಂತಪುರಂ, ಆ. 17 - ಮಹಿಳೆ ಲೈಂಗಿಕವಾಗಿ ಪ್ರಚೋದನಕಾರಿಯಾಗಿ ಉಡುಗೆ ಧರಿಸಿದಾಗ ಐ.ಪಿ.ಸಿ.ಯ ಸೆಕ್ಷನ್ 354ಎ ಅನ್ನು ಮೇಲ್ನೋಟಕ್ಕೆ ಕಂಡುಬರುವಂತೆ ಅನ್ವಯಿಸಲಾಗದು ಎಂದು ಕೇರಳದ ನ್ಯಾಯಾಲಯವೊಂದು ಟಿಪ್ಪಣಿ ಮಾಡಿದೆ.

74 ವರ್ಷದ ವಿಕಲಚೇತನ ಸಾಮಾಜಿಕ ಕಾರ್ಯಕರ್ತ ಸಿವಿಕ್ ಚಂದ್ರನ್ ಅವರ ವಿರುದ್ಧದ ಲೈಂಗಿಕ ಪೀಡನೆ ಪ್ರಕರಣದ ವಿಚಾರಣೆ ನಡೆಸುವಾಗ ಈ ಟಿಪ್ಪಣಿ ಮಾಡಿರುವ ನ್ಯಾಯಾಲಯ, ಚಂದ್ರನ್‌ಗೆ ಜಾಮೀನು ನೀಡಿದೆ.

ಚಂದ್ರನ್ ಅವರು ಮಹಿಳೆಯ ಚಿತ್ರಗಳನ್ನು ಜಾಮೀನು ಅರ್ಜಿಯ ಜೊತೆ ಲಗತ್ತಿಸಿ, ಜಾಮೀನು ನೀಡುವಂತೆ ಕೇಳಿದ್ದರು. ಜಾಮೀನು ಅರ್ಜಿಯೊಂದಿಗೆ ಸಲ್ಲಿಸಿರುವ ಚಿತ್ರಗಳನ್ನು ನೋಡಿದಾಗ ಮಹಿಳೆ ಲೈಂಗಿಕವಾಗಿ ಪ್ರಚೋದನಕಾರಿ ಉಡುಗೆ ಧರಿಸಿರುವುದು ಸ್ಪಷ್ಟವಾಗಿದೆ. ಮೇಲ್ನೋಟಕ್ಕೆ ಕಂಡು ಬರುವಂತೆ 354ಎ ಸೆಕ್ಷನ್ ಅನ್ನು ಆರೋಪಿ ವಿರುದ್ಧ ಅನ್ವಯಿಸಲು ಆಗದು ಎಂದು ಕೋಳಿಕೋಡ್ ಸೆಷನ್ಸ್ ನ್ಯಾಯಾಲಯ ಹೇಳಿದೆ.

74 ವರ್ಷದ ವಿಕಲಚೇತನ ವೃದ್ಧ ಬಲವಂತವಾಗಿ ಮಹಿಳೆಯನ್ನು ತೊಡೆಯ ಮೇಲೆ ಕೂರಿಸಿಕೊಂಡು ಲೈಂಗಿಕ ಹಲ್ಲೆ ನಡೆಸಿದ್ದರು ಎಂಬ ಆರೋಪದ ಬಗ್ಗೆ ನ್ಯಾಯಾಲಯ ಅಪನಂಬಿಕೆಯನ್ನೂ ವ್ಯಕ್ತಪಡಿಸಿದೆ.

> **74 ವರ್ಷದ ವಿಕಲಚೇತನ ವೃದ್ಧ ಯುವತಿಯನ್ನು ಲೈಂಗಿಕವಾಗಿ ಪೀಡಿಸಿದ್ದ ಎಂದು ಎರಡು ವರ್ಷ ವಿಳಂಬವಾಗಿ ಸಲ್ಲಿಸಿದ ದೂರಿನ ಬಗ್ಗೆ ಕೇರಳ ನ್ಯಾಯಾಲಯಕ್ಕೆ ಶಂಕೆ**

ಮಹಿಳೆಯ ಮಾನಕ್ಕೆ ಧಕ್ಕೆ ತರುವ ಕೃತ್ಯ ನಡೆದಾಗ ಸೆಕ್ಷನ್ 354 ಅನ್ವಯಿಸಬೇಕಾಗುತ್ತದೆ. ಸೆಕ್ಷನ್ 354ಎ ಲೈಂಗಿಕ ಪೀಡನೆಗೆ ಸಂಬಂಧಿಸಿದ್ದಾಗಿದೆ. ದೈಹಿಕ ಸಂಪರ್ಕ, ಸಮ್ಮತವಲ್ಲದ ರೀತಿ ಬರುವುದು, ಸ್ಪಷ್ಟವಾದ ಲೈಂಗಿಕ ವರ್ತನೆ ಹಾಗೂ ಲೈಂಗಿಕ ಛಾಯೆಯ ಮಾತುಗಳನ್ನು ಆಡಿದಾಗ ಸೆಕ್ಷನ್ 354ಎ ಅನ್ವಯವಾಗುತ್ತದೆ ಎಂದು ನ್ಯಾಯಾಲಯ ಹೇಳಿದೆ.

ಎಫ್.ಐ.ಆರ್. ದಾಖಲಿಸುವಲ್ಲಿ ದೀರ್ಘ ಕಾಲ ವಿಳಂಬವಾದಾಗ, ಅದಕ್ಕೆ ಕಾರಣವನ್ನು ತಿಳಿಸುವುದು ಸ್ಥಾಪಿತ ಸಿದ್ಧಾಂತ. ಈ ಪ್ರಕರಣದಲ್ಲಿ ಘಟನೆ ನಡೆದಿದೆ ಎಂದು ಆರೋಪಿಸಲಾದ ದಿನದ ಎರಡು ವರ್ಷಗಳ ನಂತರ ಎಫ್.ಐ.ಆರ್. ದಾಖಲಿಸಲಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಫೆಬ್ರವರಿ 2020ರಂದು ನಂದಿ ಬೀಚ್‌ನಲ್ಲಿ ಆಯೋಜಿಸಲಾಗಿದ್ದ ಶಿಬಿರದಲ್ಲಿ ಯುವ ಬರಹಗಾರ್ತಿಯೊಬ್ಬರ ಮೇಲೆ ಆರೋಪಿ ಲೈಂಗಿಕ ದೌರ್ಜನ್ಯ ನಡೆಸಿದ್ದರು ಎಂದು ದೂರಲಾಗಿತ್ತು. ಈ ಬಗ್ಗೆ ಕೊಯಿಲಂದಿ ಪೊಲೀಸರು ಐ.ಪಿ.ಸಿ. ಸೆಕ್ಷನ್‌ಗಳಾದ 354 ಎ(2), 341 ಹಾಗೂ 354 ಅಡಿ ಪ್ರಕರಣ ದಾಖಲಿಸಿಕೊಂಡಿದ್ದರು.

ದೂರು ನೀಡಿದ ಮಹಿಳೆಯ ಸಾಮಾಜಿಕ ಜಾಲತಾಣಗಳಲ್ಲಿ ಅಂದಿನ ಫೋಟೋಗಳನ್ನು ಪ್ರಕಟಿಸಲಾಗಿದೆ. ಮಹಿಳೆ ತನ್ನ ಗೆಳೆಯನ ಜೊತೆ ಅಲ್ಲಿಗೆ ಬಂದಿದ್ದರು. ಘಟನೆ ನಡೆದಿದೆ ಎನ್ನಲಾದ ಸಮಯದಲ್ಲಿ ಹಲವಾರು ಜನರು ಉಪಸ್ಥಿತರಿದ್ದರು. ಯಾರೂ ಘಟನೆ ನಡೆದ ಬಗ್ಗೆ ಆರೋಪಿ ವಿರುದ್ಧ ದನಿ ಎತ್ತಿಲ್ಲ ಎಂದು ಆರೋಪಿ ಪರ ವಕೀಲರು ವಾದ ಮಂಡಿಸಿದ್ದರು. ಆದರೆ, ಆರೋಪಿ ವಿರುದ್ಧ ಈ ಹಿಂದೆಯೂ ಇದೇ ರೀತಿಯ ಲೈಂಗಿಕ ಪೀಡನೆಯ ಪ್ರಕರಣಗಳು ದಾಖಲಾಗಿದ್ದವು. ಹೀಗಾಗಿ ಜಾಮೀನು ನೀಡಬಾರದು ಎಂದು ಪ್ರಾಸಿಕ್ಯೂಷನ್ ಪರ ವಾದ ಮಂಡಿಸಲಾಗಿತ್ತು.

# ಸಮಯ ಪಾಲಿಸದಿದ್ದರೆ ಕ್ರಮ

**(1ನೇ ಪುಟದಿಂದ)** ಅಧಿಕಾರಿಗಳಿಗೆ ಆದೇಶ ಮಾಡಿದ್ದಾರೆ ಎಂದು ತಿಳಿಸಿದರು. ರಾಜ್ಯದಲ್ಲಿ ಬಹುತೇಕ ಶಿಕ್ಷಕರು ಸಮಯಕ್ಕೆ ಸರಿಯಾಗಿ ಶಾಲೆಗೆ ಹಾಜರಾಗುವುದರ ಜೊತೆ ಶ್ರದ್ಧೆಯಿಂದ ಪರಿಣಾಮಕಾರಿಯಾಗಿ ಪಾಠ ಬೊಧನೆಯಲ್ಲಿ ತೊಡಗಿಸಿಕೊಂಡಿರುವುದನ್ನು ನಾನು ಅಧಿಕಾರಿಗಳಿಂದ ತರಿಸಿಕೊಂಡ ವರದಿಯಲ್ಲಿ ನೋಡಿದ್ದೇನೆ. ಆದರೆ, ಕೆಲವೆಡೆ ಶಿಕ್ಷಕರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇಂತಹದ್ದಕ್ಕೆ ಇನ್ನು ಮುಂದೆ ಅವಕಾಶ ನೀಡುವುದಿಲ್ಲ ಎಂದರು.


ಕರ್ನಾಟಕ ಸರ್ಕಾರ ತೋಟಗಾರಿಕೆ ಇಲಾಖೆ

**ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಕಛೇರಿ, (ಜಿಲ್ಲಾ ಪಂಚಾಯತ್), ದಾವಣಗೆರೆ**

Email ID :-sadhdvg@gmail.com Phone no. 08192-297091

ಸಂಖ್ಯೆ: ಹಿಸತೋನಿ/ಜಿಪಂ/ದಾ/2022–23 ದಿನಾಂಕ : 12.08.2022

**ಅಲ್ಪಾವಧಿ ಟೆಂಡರ್ ಪ್ರಕಟಣೆ**

2022–23 ನೇ ಸಾಲಿನ ವಿವಿಧ ಯೋಜನೆಗಳಡಿ ಫಲಪುಷ್ಪ ಪ್ರದರ್ಶನ ಆಯೋಜಿಸಲು ಅವಶ್ಯವಿರುವ Ornamental/ Floweing Plants (Annuals) ಮತ್ತು ಕಲಾಕೃತಿಗಳನ್ನು ಸರಬರಾಜು ಮಾಡಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಕೊನೆಯ ದಿನಾಂಕಗಳು ಕ್ರಮವಾಗಿ 26.08.2022 ಮತ್ತು 30.08.2022 ಆಗಿರುತ್ತವೆ. ಟೆಂಡರ್‌ನಲ್ಲಿ ಭಾಗವಹಿಸುವವರ ಅರ್ಹತೆಗಳು, EMD ಮತ್ತು ಟೆಂಡರ್ ಷರತ್ತುಗಳು ಹಾಗೂ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಕಛೇರಿ ವೇಳೆಯಲ್ಲಿ ಈ ಕೆಳಸಹಿದಾರರನ್ನು ಸಂಪರ್ಕಿಸಬಹುದಾಗಿದೆ.

ವಾಸಾಇ/ಡಿವಿಜಿ/384/ ಎಂಸಿಎ/2022–23

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ.) ದಾವಣಗೆರೆ



इंडियन बैंक Indian Bank इलाहाबाद ALLAHABAD

**ದಾವಣಗೆರೆ ಶಾಖೆ**
ನಂ.63. ಎ.ಎಮ್. ರಸ್ತೆ, ಪಿ. ಜೆ. ಎಕ್ಸ್‌ಟೆನ್ಶನ್
ದಾವಣಗೆರೆ-577 002. ಫೋ: 08192 - 233030
ಇಮೇಲ್ : davanagere@indianbank.co.in www.indianbank.in

**ಸ್ಥಿರಾಸ್ತಿ ಹರಾಜು ಮಾರಾಟ ಪ್ರಕಟಣೆ**

ಹಣಕಾಸು ಸ್ವತ್ತುಗಳ ಭದ್ರತೆ ಮತ್ತು ಪುನರ್ರಚನೆ ಹಾಗೂ ಹಿತಾಸಕ್ತಿ ಜಾರಿ ನಿಯಮ 2002 ರನ್ವಯ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002 ರ ನಿಯಮ 8(6) ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ–ಹರಾಜು ಮಾರಾಟ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ / ಜಾಮೀನುದಾರರಿಗೆ / ಅಡಮಾನದಾರರಿಗೆ ತಿಳಿಯಪಡಿಸುವುದೇನೆಂದರೆ **ಇಂಡಿಯನ್ ಬ್ಯಾಂಕ್ ದಾವಣಗೆರೆ ಶಾಖೆಯ 1) ಮೆ|| ಶ್ರೀ ಶಕ್ತಿ ಟ್ರೇಡಿಂಗ್ ಕಾರ್ಪೋರೇಶನ್, ಶ್ರೀ ಆರ್.ಟಿ.ವೀರೇಶ್** (ಸಾಲಗಾರರು & ಮಾಲಿಕರು), ಮತ್ತು **ಶ್ರೀಮತಿ ಆರ್. ವಿ. ಶಿಲ್ಪಶ್ರೀ ಗಂಡ: ಶ್ರೀ ಆರ್.ಟಿ.ವೀರೇಶ್** (ಜಾಮೀನುದಾರರು), ಇವರಿಬ್ಬರ **ವಿಳಾಸ : ಡೋರ್ ನಂ.38/1, ಬಕ್ಕೇಶ್ವರ ದೇವಸ್ಥಾನದ ಹತ್ತಿರ, ಚೌಕಿಪೇಟೆ, ದಾವಣಗೆರೆ** ಇವರಿಂದ ಬ್ಯಾಂಕಿಗೆ ಬರಬೇಕಾದ ಬಾಕಿ ದಿನಾಂಕ: 31.03.2022ಕ್ಕೆ ಇದ್ದಂತೆ **ರೂ.1,73,29,984/-** (ರೂಪಾಯಿ ಒಂದು ಕೋಟಿ ಎಪ್ಪತ್ತಮೂರು ಲಕ್ಷದ ಇಪ್ಪತ್ತೊಂಬತ್ತು ಸಾವಿರದ ಒಂಬೈನೂರಾ ಎಂಬತ್ತನಾಲ್ಕು ಮಾತ್ರ) + ಬಡ್ಡಿ ಮತ್ತು ಇತರೆ ಖರ್ಚುಗಳಿಗಾಗಿ ಅಡಮಾನ ಮಾಡಲಾದ ಕೆಳಕಾಣಿಸಿದ ಸ್ಥಿರಾಸ್ತಿಯನ್ನು **ಇಂಡಿಯನ್ ಬ್ಯಾಂಕ್ ದಾವಣಗೆರೆ ಶಾಖೆಯ** ಅಧಿಕೃತ ಅಧಿಕಾರಿಯವರು ಸ್ವಾಧೀನ ಪಡಿಸಿಕೊಂಡಿದ್ದು 09.09.2022 ದಿನಾಂಕದಂದು **'ಎಲ್ಲಿ ಹೇಗಿದೆಯೋ ಹಾಗೆ', "ಇದ್ದ ಹಾಗೆ"** ಮತ್ತು **'ಎಲ್ಲಿ ಏನಿದಿಯೋ ಹಾಗೆ'** ಆಧಾರದಲ್ಲಿ ಮಾರಾಟ ಮಾಡಲಿದ್ದಾರೆ.

**ಇ–ಹರಾಜು ದಿನಾಂಕ ಮತ್ತು ಸಮಯ:** ದಿನಾಂಕ 09-09-2022 ರಂದು ಬೆಳಗ್ಗೆ 11.00 ಗಂಟೆಯಿಂದ ಸಂಜೆ 04.00ರವರೆಗೆ । ಪ್ರಾಪರ್ಟಿ ಐಡಿ ಸಂಖ್ಯೆ: IDIB000D01
ಇ–ಹರಾಜು ವೆಬ್‌ಸೈಟ್: https://ibapi.in, www.mstcecommerce.com

**ಮೀಸಲು ಬೆಲೆ:** ರೂ.1,44,00,000/- | **ಇಎಂಡಿ:** ರೂ.14,40,000/- | **ಬಿಡ್ ಗುಣಾಂಕ:** ರೂ.10,000/-

**ಸ್ಥಿರಾಸ್ತಿಗಳ ವಿವರ :** (1) ದಾವಣಗೆರೆ ನಗರ ಚೌಕಿಪೇಟೆ, ಬಕ್ಕೇಶ್ವರ ದೇವಸ್ಥಾನದ ಹತ್ತಿರ, ಡೋರ್ ನಂ.38/1 ವಿಸ್ತೀರ್ಣ 13'x42 1/2' ಹೊಂದಿರುವ ಸಂಪೂರ್ಣ ಸ್ಥಿರಾಸ್ತಿ (ವಸತಿ ಕಂ ವಾಣಿಜ್ಯ ಸಂಕೀರ್ಣ). ಚಕ್ಕುಬಂದಿ **ಪೂರ್ವಕ್ಕೆ :** ಈ ಆಸ್ತಿ & ಕಕ್ಕರಗೊಲ್ಲದ ಷಡಾಕ್ಷರಪ್ಪನವರ ಆಸ್ತಿಯ ನಡುವಿನ ಸಾಮಾನ್ಯ ಗೋಡೆ. **ಪಶ್ಚಿಮಕ್ಕೆ :** ಈ ಆಸ್ತಿ & ತೌಡಿನ ಸಿದ್ದಪ್ಪನವರ ಆಸ್ತಿಯ ನಡುವಿನ ಸಾಮಾನ್ಯ ಗೋಡೆ. **ಉತ್ತರಕ್ಕೆ :** ರಸ್ತೆ. **ದಕ್ಷಿಣಕ್ಕೆ :** ಈ ಆಸ್ತಿ & ಆರ್.ಟಿ.ವೀರೇಶ್‌ರವರಿಗೆ ಹಂಚಿಕೆಯಾದ ಆಸ್ತಿಯ ನಡುವಿನ ಸಾಮಾನ್ಯ ಗೋಡೆ. (2) ದಾವಣಗೆರೆ ನಗರ ಚೌಕಿಪೇಟೆ, ಬಕ್ಕೇಶ್ವರ ದೇವಸ್ಥಾನದ ಹತ್ತಿರ, ಡೋರ್ ನಂ.38/2 ಪ್ರಸ್ತುತ ಡೋರ್ ನಂ.38/2ಎ ವಿಸ್ತೀರ್ಣ 13'x22 1/2' ಹೊಂದಿರುವ ಸಂಪೂರ್ಣ ಸ್ಥಿರಾಸ್ತಿ (ವಸತಿ ಕಂ ವಾಣಿಜ್ಯ ಸಂಕೀರ್ಣ). ಚಕ್ಕುಬಂದಿ **ಪೂರ್ವಕ್ಕೆ :** ಈ ಆಸ್ತಿ & ಷಡಾಕ್ಷರಪ್ಪನವರ ಆಸ್ತಿಯ ನಡುವಿನ ಸಾಮಾನ್ಯ ಗೋಡೆ, **ಪಶ್ಚಿಮಕ್ಕೆ :** ಈ ಆಸ್ತಿ & ತಿಪ್ಪಯ್ಯನವರ ಆಸ್ತಿಯ ನಡುವಿನ ಸಾಮಾನ್ಯ ಗೋಡೆ, **ಉತ್ತರಕ್ಕೆ :** ಈ ಆಸ್ತಿ & ಆರ್. ಟಿ. ವೀರೇಶ್‌ರವರಿಗೆ ಹಂಚಿಕೆಯಾದ ಆಸ್ತಿಯ ನಡುವಿನ ಸಾಮಾನ್ಯ ಗೋಡೆ, **ದಕ್ಷಿಣಕ್ಕೆ :** ಈ ಆಸ್ತಿ & ಆರ್. ಟಿ. ಚನ್ನಬಸಪ್ಪನವರವರಿಗೆ ಹಂಚಿಕೆಯಾದ ಆಸ್ತಿಯ ನಡುವಿನ ಸಾಮಾನ್ಯ ಗೋಡೆ.

ಬಿಡ್ಡರ್‌ಗಳು ಆನ್‌ಲೈನ್ ಬಿಡ್‌ನಲ್ಲಿ ಪಾಲ್ಗೊಳ್ಳಲು ಇ–ಹರಾಜು ಸೇವಾ ಪೂರೈಕೆದಾರರಾದ ಎಮ್‌ಎಸ್‌ಟಿಸಿ ಲಿಮಿಟೆಡ್ ಇವರ ವೆಬ್‌ಸೈಟ್ (www.mstcecommerce.com) ಗೆ ಭೇಟಿ ನೀಡಲು ಸಲಹೆ ನೀಡಲಾಗಿದೆ. ತಾಂತ್ರಿಕ ಸಹಾಯಕ್ಕಾಗಿ ಎಮ್‌ಎಸ್‌ಟಿಸಿ ಹೆಲ್ಪ್‌ಡೆಸ್ಕ್ ಸಂಖ್ಯೆ 033-22901004 ಕರೆ ಮಾಡಿ ಮತ್ತು ಇತರೆ ಹೆಲ್ಪ್‌ಲೈನ್ ಸಂಖ್ಯೆಗಳು ಸೇವಾ ಪೂರೈಕೆದಾರರ ಹೆಲ್ಪ್‌ಡೆಸ್ಕ್‌ನಲ್ಲಿ ಲಭ್ಯವಿರುತ್ತವೆ. ನೋಂದಣಿ ಸ್ಥಿತಿಗಾಗಿ ibapiop@mstcecommerce.com ಹಾಗೂ ಇಎಂಡಿ ಸ್ಥಿತಿಗಾಗಿ ibapifin@mstcecommerce.com ಗೆ ಸಂಪರ್ಕಿಸಿ. ಆಸ್ತಿಯ ವಿವರ ಮತ್ತು ಛಾಯಾಚಿತ್ರ ಹಾಗೂ ಹರಾಜಿನ ನಿಯಮ ನಿಬಂಧನೆಗಳಿಗೆ https://ibapi.in ಭೇಟಿ ನೀಡಿ ಮತ್ತು ಪೋರ್ಟಲ್‌ಗೆ ಸಂಬಂಧಪಟ್ಟ ವಿವರಗಳಿಗೆ ಹೆಲ್ಪ್‌ಲೈನ್ ಸಂಖ್ಯೆ '18001025026' ಮತ್ತು '011-41106131' ಸಂಪರ್ಕಿಸಿ.
https://ibapi.in ಮತ್ತು www.mstcecommerce.com ವೆಬ್‌ಸೈಟ್ ನಲ್ಲಿ ಆಸ್ತಿಯನ್ನು ಹುಡುಕುವಾಗ ಮೇಲ್ಕಾಣಿಸಿದ ಪ್ರಾಪರ್ಟಿ ಐಡಿಯನ್ನು ಬಳಸಲು ಸಲಹೆ ನೀಡಲಾಗಿದೆ.

**ದಿನಾಂಕ :** 17.08.2022 **ಸ್ಥಳ :** ದಾವಣಗೆರೆ

ಸಹಿ /- ಅಧಿಕೃತ ಅಧಿಕಾರಿ ಇಂಡಿಯನ್ ಬ್ಯಾಂಕ್

# ಮಲೇಬೆನ್ನೂರಿನಲ್ಲಿ ಹಿಂದೂ ಗಣಪತಿ ಪ್ರತಿಷ್ಠಾಪನೆ : 21ಕ್ಕೆ ಹಂದರಗಂಬ ಪೂಜೆ



ಮಲೇಬೆನ್ನೂರು, ಆ.17- ಪಟ್ಟಣದ ನೀರಾವರಿ ಇಲಾಖೆ ಆವರಣದಲ್ಲಿ ಹಿಂದೂ ಮಹಾ ಗಣಪತಿ ಪ್ರತಿಷ್ಠಾಪನೆ ಅಂಗವಾಗಿ ಇದೇ ದಿನಾಂಕ 21ರ ಭಾನುವಾರ ಬೆಳಿಗ್ಗೆ 10.30ಕ್ಕೆ ಹಂದರಗಂಬ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಹಿಂದೂ ಮಹಾಗಣಪತಿ ಸಮಿತಿ ಅಧ್ಯಕ್ಷ ಯರೇಚಿಕ್ಕನಹಳ್ಳಿ ಚಂದ್ರಶೇಖರ್ ತಿಳಿಸಿದರು.

ಬುಧವಾರ ಪಟ್ಟಣದಲ್ಲಿ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಇದೇ ದಿನಾಂಕ 31 ರಂದು ಮಹಾಗಣಪತಿ ಪ್ರತಿಷ್ಠಾಪನೆಗೊಳ್ಳಲಿದ್ದು, ಸೆ.14 ರಂದು ವಿಸರ್ಜನೆ ಮಾಡಲಾಗುವುದು. ಸೆ.13 ಮತ್ತು ಸೆ.14 ರಂದು ಸುಮಾರು 10 ಸಾವಿರ ಜನರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಗಣಪತಿ 8 ಅಡಿ ಎತ್ತರ ಇರಲಿದೆ ಎಂದು ಚಂದ್ರಶೇಖರ್ ತಿಳಿಸಿದರು.

ಮುಖಂಡ ಮುದೇಗೌಡ್ರ ತಿಪ್ಪೇಶ್ ಮಾತನಾಡಿ, ಎಲ್ಲಾ ಪಕ್ಷದವರು ಸೇರಿ ಪಕ್ಷಾತೀತವಾಗಿ ಈ ಹಿಂದೂ ಮಹಾಗಣಪತಿಯನ್ನು ಪ್ರತಿಷ್ಠಾಪಿಸಲಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡ ಕೆ.ಜಿ. ರಂಗನಾಥ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶ್, ಬಿ.ಮಂಜುನಾಥ್, ಭೋವಿ ಶಿವು, ಭೋವಿ ಕುಮಾರ್, ಓ.ಜಿ.ಕುಮಾರ್, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣಪ್ಪ, ಪಾಳೇಗಾರ್ ನಾಗರಾಜ್, ಕುಂಬಳೂರು ವಾಸು, ಭೋವಿ ಮಂಜಣ್ಣ, ಎ.ಕೆ. ಲೋಕೇಶ್, ಪಿ.ಆರ್.ರಾಜು, ಹಾಲಿವಾಣದ ಮೋಹನ್, ಜಿಗಳಿ ಹನುಮಗೌಡ, ದಿನೇಶ್‌ಚಾರ್, ನ್ಯಾಯಬೆಲೆ ಅಂಗಡಿ ಮಂಜಣ್ಣ, ಹರಳಹಳ್ಳಿ ರಂಗನಾಥ್, ಇಟಗಿ ಸುರೇಶ್, ಉಡೇದರ ಸಿದ್ದೇಶ್, ಜಿಗಳೇರ ಹಾಲೇಶಪ್ಪ, ಕೊಕ್ಕನೂರಿನ ಹೆಚ್.ರಂಗಪ್ಪ, ಕೊಮಾರನಹಳ್ಳಿ ಸುನೀಲ್ ಹಾಜರಿದ್ದರು.

## ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಕೌನ್ಸಿಲಿಂಗ್

ದಾವಣಗೆರೆ, ಆ.17- ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಸಲ್ಲಿಸಿರುವ ಪದವಿ ಹಾಗೂ ಸಮಾನಾಂತರ ಕೋರ್ಸಿನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕಾಗಿ ಇದೇ ದಿನಾಂಕ 22 ರಂದು ಬೆಳಗ್ಗೆ 11 ಗಂಟೆಗೆ ನಗರದ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಕೌನ್ಸಿಲಿಂಗ್ ನಿಗದಿಪಡಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ರಾಣೇಬೆನ್ನೂರಿನಲ್ಲಿ ಸಂಭ್ರಮದ ಸ್ವಾತಂತ್ರ್ಯ ಅಮೃತೋತ್ಸವ



ರಾಣೇಬೆನ್ನೂರು, ಆ.17- ವಯೋಮಾನದ ಅಂತರ, ಬಡವ- ಬಲ್ಲಿದರೆಂಬ ಭೇದ, ಅಂತಸ್ತಿನ ಅಸಮಾನತೆ ಮರೆತು, ಎಲ್ಲರೊಂದಾಗಿ ಆಚರಿಸಿದ ಇಂದಿನ ಸ್ವಾತಂತ್ರ್ಯದ ಅಮೃತೋತ್ಸವದ ಸಡಗರ- ಸಂಭ್ರಮ ನಗರದೇವತೆ ಜಾತ್ರೆಯನ್ನು ನೆನೆಪಿಸುವಂತಿತ್ತು.

ನಗರದ ಪ್ರಥಮ ಪ್ರಜೆ ರೂಪಾ ಚಿನ್ನಿಕಟ್ಟಿ ಅಶೋಕ ವೃತ್ತದಲ್ಲಿ ಧ್ವಜವಂದನೆ ಮಾಡಿ ಸ್ವಾತಂತ್ರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದವರನ್ನು ಸ್ಮರಿಸಿದರು. ತಾಲ್ಲೂಕಿನ ದಂಡಾಧಿಕಾರಿ ಶಂಕರ್ ಅವರು ನಗರಸಭೆ ಕ್ರೀಡಾಂಗಣದಲ್ಲಿ ಧ್ವಜವಂದನೆ ನೆರವೇರಿಸಿದ ನಂತರ ಶಾಸಕ ಅರುಣಕುಮಾರ ಜೊತೆಗೂಡಿ ಆರಕ್ಷಕರು, ಗೃಹರಕ್ಷಕರು ಹಾಗೂ ಶಾಲಾ ಮಕ್ಕಳ ವಿವಿಧ ದಳಗಳಿಂದ ವಂದನೆ ಸ್ವೀಕರಿಸಿದರು.

ವರ್ತಕರ ಸಂಘದ ಅಧ್ಯಕ್ಷ ಸದಾನಂದ ಉಪ್ಪಿನ, ಗಂಗಾ ಸಹಕಾರಿ ಬ್ಯಾಂಕ್‌ನಲ್ಲಿ ಅಧ್ಯಕ್ಷ ರತ್ನಾಕರ ಕುಂದಾಪೂರ, ಚನ್ನೇಶ ಸೌಹಾರ್ದದಲ್ಲಿ ಅಧ್ಯಕ್ಷ ಕೆ. ಶಿವಲಿಂಗಪ್ಪ, ವಾಸವಿ ಬ್ಯಾಂಕ್‌ನಲ್ಲಿ ಅಧ್ಯಕ್ಷ ಕೆ.ವಿ. ಶ್ರೀನಿವಾಸ, ನಗರಸಭೆಯಲ್ಲಿ ಪೌರಾಯುಕ್ತ ಉದಯಕುಮಾರ, ತಾ.ಪಂ.ನಲ್ಲಿ ಕಾರ್ಯನಿರ್ವಾಹಕ ಅಧಿಕಾರಿ ಮಲ್ಲಾಡದ, ಕೃಷಿ ಇಲಾಖೆಯಲ್ಲಿ ಉಪನಿರ್ದೇಶಕ ಹಿತೇಂದ್ರ ಗೌಡಪ್ಪವರ, ಶಿಕ್ಷಣ ಇಲಾಖೆಯಲ್ಲಿ ಗುರುಪ್ರಸಾದ ಧ್ವಜವಂದನೆ ನೆರವೇರಿಸಿದರು.

**ಸಿಹಿ ಹಂಚಿದ ಭಾರತಿ ಜಂಬಗಿ :** ಬ್ರಿಟಿಷರು ನಮ್ಮ ದೇಶಬಿಟ್ಟು ತೊಲಗಿದ ನಡುರಾತ್ರಿ 12 ಗಂಟೆ 5 ನಿಮಿಷಕ್ಕೆ ಸರಿಯಾಗಿ ನಗರದ ಮಧ್ಯವರ್ತಿ ಸ್ಥಳ ಅಂಚೆ ಕಚೇರಿ ಎದುರಿನ ವೃತ್ತದಲ್ಲಿ ಸಮಾಜ ಸೇವಕಿ, ಅರಣ್ಯ ಅಭಿವೃದ್ಧಿ ನಿಗಮದ ನಿರ್ದೇಶಕಿ ಭಾರತಿ ಜಂಬಗಿ, ತಮ್ಮ ಅಭಿಮಾನಿಗಳು ಹಾಗೂ ಸಹಚರರೊಂದಿಗೆ ಧ್ವಜವಂದನೆ ನಡೆಸಿ ಶುಭ ಕೋರಿ ಸಿಹಿ ಹಂಚಿದರು.

**75 ಅಡಿ ಧ್ವಜ :** ಕೆಇಬಿ ಗಣೇಶ ದೇವಸ್ಥಾನದಿಂದ ಹೊರಟು ಪ್ರಮುಖ ಬೀದಿಗಳಲ್ಲಿ ಹಾಯ್ದು ಮತ್ತೆ ಗಣೇಶ ದೇವಸ್ಥಾನಕ್ಕೆ ಆಗಮಿಸಿದ, ಜಿಪಂ ಮಾಜಿ ಸದಸ್ಯ ಸಂತೋಷ ಪಾಟೀಲ ಸಂಘಟಿಸಿದ ಭಾರತಾಂಬೆಯ ಮೆರವಣಿಗೆಯೊಂದಿಗೆ ನಡೆದ ಸ್ವಾತಂತ್ರ್ಯದ ಅಮೃತೋತ್ಸವದಲ್ಲಿ 75 ಅಡಿ ಉದ್ದದ ರಾಷ್ಟ್ರಧ್ವಜವನ್ನು ಹೊತ್ತು ನಡೆದ ಅಪ್ಪಟ ಯುವಶಕ್ತಿಯ ನಡಿಗೆ ದೇಶದ ಜವಾಬ್ದಾರಿಯನ್ನು ಹೊರುವ ಚಿಂತನೆಯಲ್ಲಿದ್ದಂತಿತ್ತು.

**ಹೋರಾಟಗಾರರ ವಂಶಸ್ಥರಿಗೆ ಗೌರವ:** ತಮ್ಮ ಮನೆಗಳನ್ನು, ಬಂಧು ಬಾಂಧವರನ್ನು ತೊರೆದು ದೇಶವನ್ನು ಬ್ರಿಟಿಷರಿಂದ ಬಂಧ ಮುಕ್ತಗೊಳಿಸಲು ಹೋರಾಡಿ ದವರ, ಪ್ರಾಣ ತೆತ್ತವರ ವಂಶಸ್ಥರನ್ನು ಗುರುತಿಸಿ, ಅವರನ್ನು ಗೌರವಿಸಿದ ನಗರಸಭೆ ಮಾಜಿ ಸದಸ್ಯ ಮಂಜುನಾಥ ಗೌಡಶಿವಣ್ಣನವರ ಅವರು, ಸ್ವಾತಂತ್ರ್ಯ ಸೇನಾನಿ ಮೆಣಸಿನಹಾಳ ತಿಮ್ಮನಗೌಡ್ರ ಪ್ರತಿಮೆ ಬಳಿ ಗಂಗಾಪೂರ ಸಿದ್ಧಾರೂಢ ಮಠದ ಶ್ರೀ ಮರುಳಶಂಕರ ಸ್ವಾಮೀಜಿ ಸಾನ್ನಿಧ್ಯ ಹಾಗೂ ವರ್ತಕ ಬಸವರಾಜ ಪಟ್ಟಣಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆಸಿದ ಕಾರ್ಯಕ್ರಮ ವಿಶೇಷವಾಗಿತ್ತು.

**ಹೀಗೊಂದು ಕರಪತ್ರ :** 'ತ್ರಿವರ್ಣ ಧ್ವಜಕ್ಕೆ ಎಂದಿಗೂ ರಾಷ್ಟ್ರಧ್ವಜದ ಮಾನ್ಯತೆ ನೀಡಬಾರದು' - ವಿ.ಡಿ. ಸಾವರ್ಕರ್

'ತ್ರಿವರ್ಣ ಧ್ವಜವನ್ನು ಯಾವತ್ತಿಗೂ ಗೌರವಿಸಬಾರದು. ಅದರಲ್ಲಿರುವ ಮೂರು ವರ್ಣಗಳು ದೇಶಕ್ಕೆ ಅನಿಷ್ಟವಾಗಿವೆ'- ಆರ್ಗನೈಸರ್ (ಆರ್‌ಎಸ್‌ಎಸ್ ಮುಖಪತ್ರಿಕೆ) ಮುಂತಾದ ವಿಷಯ ಒಳಗೊಂಡ ಎಸ್. ಶಿವಲಿಂಗಯ್ಯ (ಶಿವಲಿಂಗಂ) ರಾಜ್ಯಾಧ್ಯಕ್ಷರು, ಸ್ವಾಭಿಮಾನಿ ದಲಿತ ಶಕ್ತಿ, ಕರ್ನಾಟಕ ಇವರ ಹೆಸರಿರುವ ಮತ್ತು ಮರಿದೇವ ಮೈಲಪ್ಪ ನಡುವಿನಕೇರಿ ಹರಳಯ್ಯ ನಗರ, ರಾಣೇಬೆನ್ನೂರು ಎನ್ನುವ ವಿಳಾಸವಿರುವ ಕರಪತ್ರವನ್ನು ಹಂಚುತ್ತಿದ್ದ ಯುವಕನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ನಡೆಯಿತು.

# 150 ಪುರಾತತ್ವ ತಾಣಗಳಲ್ಲಿ ನಿರಂತರ ರಾಷ್ಟ್ರಧ್ವಜ

ನವದೆಹಲಿ, ಆ. 17 – ಭಾರತೀಯ ಪುರಾತತ್ವ ಇಲಾಖೆಯ 150 ಸ್ಮಾರಕಗಳಲ್ಲಿ ನಿರಂತರವಾಗಿ ರಾಷ್ಟ್ರಧ್ವಜ ಹಾರಿಸಲು ನಿರ್ಧರಿಸಲಾಗಿದೆ. ಆದರೆ, ರಾತ್ರಿ ಬೆಳಕಿನ ವ್ಯವಸ್ಥೆ ಇರದ ಕಡೆಗಳಲ್ಲಿ ರಾಷ್ಟ್ರಧ್ವಜ ನಿರಂತರವಾಗಿ ಹಾರಿಸುವುದಿಲ್ಲ.

ದೀಪಕಂಬಗಳು ಹಾಗೂ ರಾತ್ರಿ ಬೆಳಕಿರದ ಕಡೆಗಳಲ್ಲಿ ರಾಷ್ಟ್ರಧ್ವಜವನ್ನು ಬೆಳಿಗ್ಗೆ ಹಾರಿಸಿ, ಸಂಜೆ ಕೆಳಗಿಳಿಸಲಾಗುವುದು ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ದೇಶದ 75ನೇ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ ಎ.ಎಸ್.ಐ.ನ 150 ತಾಣಗಳಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಲಾಗಿತ್ತು. ಇಲ್ಲಿ ನಿರಂತರವಾಗಿ ಧ್ವಜ ಹಾರಿಸಲು ನಿರ್ಧರಿಸಲಾಗಿದೆ. ಧ್ವಜ ನೀತಿಯ ಪ್ರಕಾರ ಕತ್ತಲಿರುವ ಸ್ಥಳದಲ್ಲಿ ರಾಷ್ಟ್ರಧ್ವಜ ಹಾರಿಸುವಂತಿಲ್ಲ.

ಕಳೆದ ಸ್ವಾತಂತ್ರ್ಯ ದಿನಾಚರಣೆ ಸಂದರ್ಭದಲ್ಲಿ 150 ಪುರಾತತ್ವ ತಾಣಗಳಲ್ಲಿ ರಾಷ್ಟ್ರಧ್ವಜ ಹಾರಿಸಲಾಗಿತ್ತು. ಅಲ್ಲದೇ, 150 ತಾಣಗಳಲ್ಲಿ ತ್ರಿವರ್ಣದ ಬೆಳಕಿನ ಛಾಯೆ ಹರಡಲಾಗಿತ್ತು.

ಪುರಾತತ್ವ ಇಲಾಖೆಯು 3,693 ತಾಣಗಳನ್ನು ನಿರ್ವಹಿಸುತ್ತಿದೆ. ಸ್ವಾತಂತ್ರ್ಯ ಮಹೋತ್ಸವದ ಹಿನ್ನೆಲೆಯಲ್ಲಿ ಆಗಸ್ಟ್ 5ರಿಂದ 15ರವರೆಗೆ ಈ ತಾಣಗಳಿಗೆ ಪ್ರವೇಶವನ್ನು ಉಚಿತಗೊಳಿಸಲಾಗಿತ್ತು.

# 'ಮಿಲೇ ಸುರ್ ಮೇರಾ ತುಮ್ಹಾರ' ಗೀತೆ ನವೀನ ರೂಪದಲ್ಲಿ ರಿಮೇಕ್




ದಾವಣಗೆರೆ, ಆ.17- 1988ರ ಆಗಸ್ಟ್ 15ರಂದು, ಪಂಡಿತ್ ಭೀಮ್ ಸೇನ್ ಜೋಶಿಯವರ ಸಿರಿಕಂಠದಲ್ಲಿ ಮೂಡಿರುವ 'ಮಿಲೇ ಸುರ್ ಮೇರಾ ತುಮಾರ' ಸುಪ್ರಸಿದ್ಧ ಗೀತೆಯು ನವೀನ ರೂಪದಲ್ಲಿ ವಿನ್ಯಾಸಗೊಂಡು ದಾವಣಗೆರೆಯ shahblue-heart You Tube ಚಾನೆಲ್ ನವರು 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ Remake ಮಾಡಿ ಮತ್ತೆ ತಂದಿದ್ದಾರೆ.

# ಕೈಗಾರಿಕೆ ಹೆಸರಲ್ಲಿ ರೈತರನ್ನು ಒಕ್ಕಲೆಬ್ಬಿಸುತ್ತಿರುವುದು ಖಂಡನೀಯ



**ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಪಾದಯಾತ್ರೆಯಲ್ಲಿ ಕೆ.ಎಸ್.ಬಸವಂತಪ್ಪ**

ದಾವಣಗೆರೆ,ಆ.17 - ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಿಸುತ್ತಿರುವ ಈ ಸಂದರ್ಭದಲ್ಲಿ ಕೈಗಾರಿಕಾ ಕಾರಿಡಾರ್ ಹೆಸರಲ್ಲಿ ರೈತರನ್ನು ಒಕ್ಕಲೆಬ್ಬಿಸುತ್ತಿರುವುದು ಖಂಡನೀಯ ಎಂದು ಜಿ.ಪಂ. ಮಾಜಿ ಸದಸ್ಯ ಕೆ.ಎಸ್. ಬಸವಂತಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಮೃತ್ ಮಹೋತ್ಸವ ಅಂಗವಾಗಿ ಮಾಯಕೊಂಡ ಕ್ಷೇತ್ರದ ಅಣಜಿ ಜಿ.ಪಂ. ಕ್ಷೇತ್ರದಿಂದ ಆನಗೋಡು ಜಿ. ಪಂ. ಕ್ಷೇತ್ರದವರೆಗೆ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ಅಣಜಿ ಜಿ.ಪಂ. ಕ್ಷೇತ್ರದ ಫಲವತ್ತಾದ ಭೂಮಿಯಲ್ಲಿ ಯಾವುದೇ ಮೂಲಸೌಕರ್ಯಗಳಿಲ್ಲದ ಪ್ರದೇಶದಲ್ಲಿ ಕೈಗಾರಿಕಾ ಕಾರಿಡಾರ್ ನಿರ್ಮಿಸಲು ಬಿ.ಜೆ.ಪಿ. ಸರ್ಕಾರ ಹೊರಟದೆ. ಕೃಷಿ ಜಮೀನುಗಳಿಂದ ಬದುಕು ಕಟ್ಟಿಕೊಂಡಿರುವ ಈ ಭಾಗದ ರೈತರ ಮೇಲೆ ಸರ್ಕಾರ ದಬ್ಬಾಳಿಕೆ ನಡೆಸುತ್ತಿದೆ ಎಂದರು.

ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕೂಡಾ ಈ ಭಾಗದ ರೈತರ ಬೆನ್ನ ಹಿಂದೆ ಇದ್ದು, ಈ ಭಾಗದಲ್ಲಿ ನೀರು ಮತ್ತು ವಿದ್ಯುತ್ ಸೌಕರ್ಯಗಳು ಇಲ್ಲದಿದ್ದರೂ ಯಾವ ಪುರುಷಾರ್ಥಕ್ಕಾಗಿ ಕೈಗಾರಿಕಾ ಕಾರಿಡಾರ್ ನಿರ್ಮಿಸುತ್ತಿದ್ದಾರೆ ಎಂದು ಪ್ರಶ್ನಿಸಿದ್ದಾರೆ ಎಂದರು.

ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿ ಬಲಿದಾನಗೈದವರನ್ನು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಟಿ. ಹನುಮಂತಪ್ಪ, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಡಾ. ವೈ. ರಾಮಪ್ಪ, ಎಸ್.ಕೆ. ಚಂದ್ರಶೇಖರ್, ಮಲ್ಲಪ್ಪಗೌಡ್ರು, ಆನಂದಪ್ಪ, ಡಿ. ಬಸವರಾಜ್, ಮೆಳ್ಳೇಕಟ್ಟೆ ಹನುಮಂತಪ್ಪ, ಅಣಜಿ ರಾಜಪ್ಪ ಮತ್ತಿತರರುಗಳು ಸ್ಮರಿಸಿಕೊಂಡರು.

ಅಣಜಿ ಗ್ರಾಮದ ಸ್ವಾತಂತ್ರ್ಯ ಯೋಧರಾದ ಎಂ.ಸಿ. ವಿರೂಪಾಕ್ಷಪ್ಪ ಮತ್ತು ಎ.ಎಂ. ಸಿದ್ದಯ್ಯನವರ ಭಾವಚಿತ್ರಗಳಿಗೆ ಮಾಲಾರ್ಪಣೆ ಮಾಡುವುದರ ಮೂಲಕ ಪಾದಯಾತ್ರೆ ಪ್ರಾರಂಭಿಸಲಾಯಿತು.

ಪಾದಯಾತ್ರೆಯಲ್ಲಿ ಕಾಂಗ್ರೆಸ್ ಮುಖಂಡರುಗಳಾದ ಆನಗೋಡು ಕರಿಬಸಪ್ಪ, ಬಸವರಾಜ್, ಪ್ರಕಾಶ್ ಪಾಟೀಲ್, ಕೊಟ್ರೇಶ್‌ನಾಯ್ಕ, ತಾ.ಪಂ. ಮಾಜಿ ಸದಸ್ಯ ಚಂದ್ರಪ್ಪ, ಮುರುಗೇಶಪ್ಪ, ಸುಭಾಷ್‌ಗೌಡ್ರು, ಮಾಯಕೊಂಡ ಯುವ ಕಾಂಗ್ರೆಸ್ ಅಧ್ಯಕ್ಷ ಸಿದ್ದೇಶ್, ಬಸವಾಪಟ್ಟಣ ಯುವ ಕಾಂಗ್ರೆಸ್ ಅಧ್ಯಕ್ಷ ಕಿರಣ್, ಕಿಸಾನ್ ಅಧ್ಯಕ್ಷರಾದ ಹಾಲೇಶಿ, ಅಸಂಘಟಿತ ಕಾರ್ಮಿಕರ ಅಧ್ಯಕ್ಷ ಹನುಮಂತಪ್ಪ, ಕಂದನಕೋವಿ ಕೆಂಚವೀರಪ್ಪ, ದೇವೇಂದ್ರಪ್ಪ, ರಾಮಗೊಂಡನಹಳ್ಳಿ ಶರಣಪ್ಪ, ಹುಣಸೇಕಟ್ಟೆ ಬಸವರಾಜಪ್ಪ, ನೀರ್ಥಡಿ ಸುರೇಶ್‌ಗೌಡ್ರು ಮತ್ತು ಇತರರು ಪಾಲ್ಗೊಂಡಿದ್ದರು.

# ಹರಪನಹಳ್ಳಿ : ನಾವೆಲ್ಲರೂ ಒಂದೇ ಎಂದಾಗ ಮಾತ್ರ ದೇಶ ಬಲಿಷ್ಠ

**ಬಾಗಳಿ ಭರಮಪ್ಪ ಕಾಲೇಜಿನ ಎನ್‌ಎಸ್‌ಎಸ್ ಶಿಬಿರದಲ್ಲಿ ಶ್ರೀ ಚಿನ್ಮಯಿ ಸ್ವಾಮೀಜಿ**



ಹರಪನಹಳ್ಳಿ, ಆ.17 - ಧರ್ಮ, ಆಚಾರ, ಸಂಸ್ಕಾರ ಉಳಿಸುವಂತಹ ಕೆಲಸವನ್ನು ಇಂದಿನ ಯುವಕರು ಮೈಗೂಡಿಸಿಕೊಳ್ಳಬೇಕು ಎಂದು ಕೂಲಹಳ್ಳಿ ಸಂಸ್ಥಾನಮಠದ ಶ್ರೀ ಚಿನ್ಮಯಿ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಬಾಗಳಿ ಗ್ರಾಮದ ಅಂಬ್ಲಿದೊಡ್ಡ ಭರಮಪ್ಪ ಪ್ರಥಮ ದರ್ಜೆ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಯಾವುದೇ ಸಮಾಜವೇ ಆಗಿರಲಿ, ನಾವೆಲ್ಲರೂ ಒಂದೇ ಎಂದಾಗ ಮಾತ್ರ ದೇಶ ಬಲಿಷ್ಠವಾಗುತ್ತದೆ. ಗುರು- ಹಿರಿಯರನ್ನು ಗೌರವಿಸಬೇಕು. ಯುವಕರು ದುಶ್ಚಟಗಳ ದಾಸರಾಗದೇ ಆರೋಗ್ಯದ ಕಡೆ ಗಮನ ಹರಿಸಬೇಕು, ಆರೋಗ್ಯ ಉತ್ತಮವಾಗಿದ್ದರೆ ಏನಾದರೂ ಸಾಧನೆ ಮಾಡಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬಾಗಳಿ ಗ್ರಾಪಂ ಅಧ್ಯಕ್ಷ ಬಿ.ಬಿ.ನಾಗರಾಜ್ ಮಾತನಾಡಿ, ವಿದ್ಯಾರ್ಥಿಗಳು ಎನ್‌ಎಸ್‌ಎಸ್ ಶಿಬಿರದ ಮೂಲಕ ಉತ್ತಮ ವ್ಯಕ್ತಿಗಳಾಗಿ ಹೊರಹೊಮ್ಮಿ, ಪಠ್ಯದ ಜತೆಗೆ ಸಮಾಜ ಸೇವಾ ಕಾರ್ಯಗಳಲ್ಲಿ ಪಾಲ್ಗೊಂಡು ಜನರ ಕಷ್ಟ, ಸುಖಗಳಲ್ಲಿ ಭಾಗಿಯಾಗಬೇಕು ಎಂದು ಹೇಳಿದರು.

ನಾಟಿವೈದ್ಯ ಪಂಡಿತ ಡಾ.ಬಿ.ಬಿ. ಹೊಸೂರಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಪ್ರಾಚಾರ್ಯ ಡಾ.ಎಸ್.ಎಂ.ಸಿದ್ದಲಿಂಗಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರೊ.ಜಿ.ಬಿ.ನಾಗನಗೌಡ ಉಪನ್ಯಾಸ ನೀಡಿದರು. ಪತ್ರಕರ್ತ ಪಿ.ಕರಿಬಸಪ್ಪ, ಚಿರಸ್ತಹಳ್ಳಿ ಶಿಲ್ಪ ಬಸವರಾಜ ಮಾತನಾಡಿದರು.

ಆಡಳಿತ ಮಂಡಳಿ ನಿರ್ದೇಶಕ ಕೆ.ಎಂ. ಬಸರಾಜಯ್ಯ, ಗ್ರಾಪಂ ಸದಸ್ಯ ಎನ್.ಮಂಜುನಾಥ, ವಿಎಸ್‌ಎಸ್‌ಎನ್ ಉಪಾಧ್ಯಕ್ಷ ಬೇವಿನಹಳ್ಳಿ ಹಾಲೇಶ್, ಪುಷ್ಪ ಮುದೇಗೌಡ, ಸಿ.ಶೋಭ, ಡಿ.ವನಜಾಕ್ಷಿ, ಅಡುಗೆ ಶೃತಿ ವೀರೇಶ್, ಅರಸಿಕೇರಿ ಮಂಜುನಾಥ, ಕುರಿ ನಾಗಮ್ಮ, ಮುದ್ದಜ್ಜಿ ಮಂಜುಳಾ, ಎಸ್.ಆನಂದ, ಸಿ. ಸುಷ್ಮಾ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಕಾಡಜ್ಜಿಯಲ್ಲಿ ಇಂದು ಗುರು ನಮನ ಕಾರ್ಯಕ್ರಮ

ದಾವಣಗೆರೆ ತಾಲ್ಲೂಕಿನ ಕಾಡಜ್ಜಿ ಗ್ರಾಮದ ಗೆಳೆಯರ ಬಳಗದ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಶಾಲಾವರಣದಲ್ಲಿ 'ಗುರು ನಮನ ಹಾಗೂ ಸ್ನೇಹ ಮಿಲನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಬಿ.ಇ.ಓ ಟಿ. ಅಂಬಣ್ಣ ಉದ್ಘಾಟನೆ ನೆರವೇರಿಸುವರು. ಅಧ್ಯಕ್ಷತೆಯನ್ನು ಗ್ರಾ.ಪಂ.ಅಧ್ಯಕ್ಷರಾದ ಗೀತಮ್ಮ ವಹಿಸುವರು. ಮುಖ್ಯ ಅತಿಥಿಗಳಾಗಿ ಎಸ್‌ಡಿಎಂಸಿ ಅಧ್ಯಕ್ಷ ಡಿ. ತಿರುಪತಿ, ಮುಖ್ಯೋಪಾಧ್ಯಾಯ ಕೆ.ಎಸ್. ನಾಗರಾಜಪ್ಪ ಪಾಲ್ಗೊಳ್ಳುವರು.

ನಿವೃತ್ತ ಶಿಕ್ಷಕರಾದ ಗಾಳೆಪ್ಪ, ಎಂ.ಆರ್. ಚನ್ನಬಸವಯ್ಯ, ಶ್ರೀಮತಿ ಗೌರಮ್ಮ, ಆರ್. ಬಿ.ತಿಮ್ಮಪ್ಪ, ಹೆಚ್. ಬಸಪ್ಪ, ಕೆ.ಹೆಚ್. ಪರಶುನಾಯ್ಕ, ಎಂ ರಾಜಶೇಖರಯ್ಯ, ಕೆ.ಬಿ. ಹನುಮಂತಪ್ಪ, ಎ.ಕೆ.ರಾಮಪ್ಪ, ಎ.ಡಿ. ರೇವಣಸಿದ್ದಪ್ಪ, ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎಂ.ಬಿ. ಜಯದೇವಪ್ಪ, ದೈಹಿಕ ಶಿಕ್ಷಕ ಕೆ.ಬಿ.ಶೇಖರಪ್ಪ ಅವರಿಗೆ ಗುರು ನಮನ ಸಲ್ಲಿಸಲಾಗುವುದು.

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ ಪೂರ್ವ 40x60, 30x54 ಪಶ್ಚಿಮ, 40x30, 38x40 ಬನಶಂಕರಿ ಬಡಾವಣೆ ಪೂರ್ವ (60 ಅಡಿ ರಸ್ತೆ) 50x80, ಪೂರ್ವ-ದಕ್ಷಿಣ ಕಾರ್ನರ್ 30x50
ಐಗೂರು ವಿಜಯಕುಮಾರ
99457 02495

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದವಾಡ ಹತ್ತಿರ ಸರ್ಕಾರಿ ನೌಕರರ ಬಡಾವಣೆಯಲ್ಲಿ 1ನೇ ಹಂತದಲ್ಲಿ 30x40 ಪೂರ್ವ 2ನೇ ಹಂತದಲ್ಲಿ 30x40 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಮನೆಗಳು ಬಾಡಿಗೆಗೆ ಲೀಸ್‌ಗೆ ದೊರೆಯುತ್ತವೆ**
ಆಂಜನೇಯ ಬಡಾವಣೆಯಲ್ಲಿ ಸಿದ್ದವೀರಪ್ಪ ಬಡಾವಣೆಯಲ್ಲಿ ನಿಜಲಿಂಗಪ್ಪ ಬಡಾವಣೆಯಲ್ಲಿ
ದಕ್ಷಿತ್ ಐನಳ್ಳಿ ಏಜೆಂಟ್
77955 06795

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬಾಡಿಗೆಗೆ**
ಪಿಜೆ ಎಕ್ಸ್‌ಟೆನ್ಷನ್‌ನಲ್ಲಿ 6000 Sqft
PB Roadನಲ್ಲಿ 3400x4 = 13600 Sqft B+G+2 floors
ಬಿಲ್ಡಿಂಗ್‌ಗಳು ಬಾಡಿಗೆಗಿವೆ.
94480 28103
Suitable for Hospitals, Offices

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ ನರ್ಸ್ ಬೇಕಾಗಿದ್ದಾರೆ. ವಸತಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ : ಪಿ.ಜೆ.ಬಡಾವಣೆ, ಸಿ.ಜಿ.ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ದಾವಣಗೆರೆ.
ಮೊ: 98450-35710
7760739990

**INTRODUCING MENTAL MATHS**
(2nd to 7th STD)
Bruit Abacus and Vedic Maths
Near Amrith Vidyalaya School
97390 66956

**ಮನೆ, ಕಾಂಪ್ಲೆಕ್ಸ್ ಮಾರಾಟಕ್ಕೆ ಇದೆ**
ಬಾಲಾಜಿ ಬಡಾವಣೆಯಲ್ಲಿ 30x50 ಕಾರ್ನರ್ ಸೈಟ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ ಶಾಪಿಂಗ್ ಕಾಂಪ್ಲೆಕ್ಸ್, ಫಸ್ಟ್ ಫ್ಲೋರ್‌ನಲ್ಲಿ 2 ಬೆಡ್ ರೂಂ ಮನೆ ಮಾರಾಟಕ್ಕೆ ಇದೆ.
98448 82366

**TO LET**
Commercial Building
Opp : LIC Office, K.R. Road,Davangere
94483 76399

**ಟೀಚರ್ಸ್ ಕಾಲೋನಿಯಲ್ಲಿ ಸೈಟುಗಳು ಮಾರಾಟಕ್ಕಿವೆ**
ಸರ್ಕಾರಿ ನೌಕರರ ಬಡಾವಣೆ ಪೂರ್ವ 30x40, 40x60 ಉತ್ತರ-ಪಶ್ಚಿಮ ಕಾರ್ನರ್ 30x40 ಕೆ.ಹೆಚ್ ಎದುರು ಮೋತಿ ಲೇಔಟ್ ಪಕ್ಕ ಪೂರ್ವ 30x45 ಅಕ್ಕ ಪಕ್ಕ 3 ಸೈಟ್‌ಗಳು ಪಶ್ಚಿಮ ಅಕ್ಕ ಪಕ್ಕ 3 ಸೈಟ್‌ಗಳು
ಐಗೂರು ವಿಜಯಕುಮಾರ
99457 02495

**ಬೇಕಾಗಿದ್ದಾರೆ**
'ಜನತಾವಾಣಿ' ದಿನಪತ್ರಿಕೆಯಲ್ಲಿ ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ಕನ್ನಡ ಭಾಷಾ ಜ್ಞಾನವಿರುವ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ.
ಭೇಟಿ ಸಮಯ : ಬೆಳಿಗ್ಗೆ 11 ರಿಂದ ಸಂಜೆ 5
ಫೋ. 08192 254736

**ಮನೆ ಬಾಡಿಗೆಗೆ ಇದೆ**
ವಿನೋಬ ನಗರ 1ನೇ ಮೇನ್ 2ನೇ ಕ್ರಾಸ್‌ನಲ್ಲಿ ಸಿಂಗಲ್ ಬೆಡ್ ರೂಂ ಇರುವ ಹಂಚಿನ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ:
97312 75402

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್
ಫೋ.: 95135 03000

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**ಬೇಕಾಗಿದ್ದಾರೆ**
ರೆಡಿಮೇಡ್ ಗಾರ್ಮೆಂಟ್ಸ್ ಶಾಪ್‌ನಲ್ಲಿ ಅನುಭವವಿರುವ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ವೀರ್ ಕ್ರಿಯೇಷನ್ಸ್
ವಿಜಯಲಕ್ಷ್ಮೀ ರೋಡ್, ಗುಪ್ತ ಗೋಲ್ಡ್‌ಪ್ಯಾಲೇಸ್ ಎದುರು, ದಾವಣಗೆರೆ.
98447 36261, 96630 08996

**HAIRPOINT SALON**
Beauty & hair Lounge
Designation : Receptionist (only females) qualificatin : SSLC/PUC, Salary : 8,000 to 12,000 and also wanted house keeper salary 6000 to 7000,
MCC B block, 7th main, 3rd cross
97386 64400, 91483 19342

**ಬಾಡಿಗೆಗೆ ಇದೆ**
ಗ್ರೌಂಡ್‌ಫ್ಲೋರ್‌ವುಳ್ಳ 2 BHK ಮನೆ ಹಾಗೂ 1ನೇ ಫ್ಲೋರ್, (25x30) 750 Sqft ವುಳ್ಳ ಆಫೀಸ್ ಬಾಡಿಗೆಗೆ ಇದೆ.
ತರಳಬಾಳು ಬಡಾವಣೆ, 1ನೇ ಮೇನ್, ಶಿಲ್ಪ ಮಾರ್ಬಲ್ ಎದುರು, ದಾವಣಗೆರೆ.
98860 20266

**ಬೇಕಾಗಿದ್ದಾರೆ**
ಬೆಂಗಳೂರಿನ ಮನೆಯಲ್ಲಿ ವೆಜ್ ಅಡುಗೆ ಮಾಡಲು ಬೇಕಾಗಿದ್ದಾರೆ.
ಜೆ.ಪಿ. ನಗರ, ಬೆಂಗಳೂರು.
ಮೊ. : 91486 79995

**WANTED**
Office ಕೆಲಸಕ್ಕೆ ಯುವತಿಯರು ಬೇಕಾಗಿದ್ದಾರೆ. ವಯಸ್ಸು 18 ರಿಂದ 25 (ಫುಲ್ ಟೈಮ್/ಪಾರ್ಟ್ ಟೈಮ್)
ವಿಳಾಸ: ಸಿ.ಪಿ ಫಾರ್ಮಾ
BIET ಕಾಲೇಜ್ ರೋಡ್ ದಾವಣಗೆರೆ.
84310 22744

**ಮನೆ ಮಾರಾಟಕ್ಕೆ ಇದೆ**
ನಂ. 731, ನಂ. 732 (1000 SQFT Each) ಎಸ್.ಪಿ.ಎಸ್. ನಗರ, 1ನೇ ಹಂತ, ಎ ಬ್ಲಾಕ್, ರಿಂಗ್ ರೋಡ್ ಪಕ್ಕ ದಾವಣಗೆರೆ.
(For Commercial Purpose)
99801 34792,
78924 05893

**ಕಂಪ್ಲೀಟ್ ವಾಟರ್ ಪ್ರೂಫಿಂಗ್ ಸಲ್ಯೂಷನ್**
ನಿಮ್ಮ ಮನೆಯ ಮೇಲ್ಛಾವಣಿ ಮತ್ತು ಹೊರ ಗೋಡೆಗಳನ್ನು ವಾಟರ್ ಪ್ರೂಫಿಂಗ್ ಮಾಡಿಕೊಡಲಾಗುವುದು. 5 ವರ್ಷದ ವಾರಂಟಿಯೊಂದಿಗೆ ಸಂಪರ್ಕಿಸಿ
63604 66916, 80734-56426

**ರಕ್ತ ದಾನ ಶ್ರೇಷ್ಠ ದಾನ**

**MBBS**
Aspirants Looking For MBBS Admission in Russia With Minimum Criteria and Low Budget, Call or Visit
+91 7022 321 123
Doctors Query Pvt Ltd.,
www.doctorsquery.com

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**ಉಚಿತ ಥೆರಪಿ**
15 ದಿನಗಳಲ್ಲಿ ನೇರ ಪರಿಹಾರ
ಬಿ.ಪಿ. ಶುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್ ವೇನ್, ನರಗಳ ದೌರ್ಬಲ್ಯ, ಬೆನ್ನು ಸೊಂಟ, ಮಂಡಿನೋವು, ಪಾದದಲ್ಲಿ ಉರಿಗಳಿಗೆ ಪರಿಹಾರ, ಹೋಂ ಡೆಮೋ ಸೌಲಭ್ಯವಿದೆ. (T&C), ದಾವಣಗೆರೆ.
86602 35013

**ಪ್ರವೇಶ ಪ್ರಕಟಣೆ**
ಡಿಪ್ಲೊಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**ರೂಮ್ ಮತ್ತು ಮಳಿಗೆಗಳು ಬಾಡಿಗೆಗೆ**
ಜಯನಗರ ಎ ಬ್ಲಾಕ್ ನಲ್ಲಿ ಫರ್ನಿಚರ್ ಸೌಲಭ್ಯ ವುಳ್ಳ ರೂಮ್ ಮತ್ತು ಮಳಿಗೆಗಳು ಬಾಡಿಗೆಗೆ ದೊರೆಯುತ್ತವೆ.
ಮೊ: 94484 39639

**ಮನೆ ಬಾಡಿಗೆಗೆ/ಭೋಗ್ಯಕ್ಕೆ ಇದೆ**
ಎರಡು ಬೆಡ್ ರೂಂ ಹೊಂದಿರುವ ಮೊದಲ ಮಹಡಿಯ ಮನೆ ಬಾಡಿಗೆಗೆ/ ಭೋಗ್ಯಕ್ಕೆ ಇರುತ್ತದೆ. (ಸಸ್ಯಾಹಾರಿಗಳಿಗೆ ಮಾತ್ರ) ಪೂಜಾ ಇಂಟರ್‌ನ್ಯಾಷನಲ್ ಹೋಟೆಲ್ ಹಿಂಭಾಗ ವಿಳಾಸ: ಮನೆ ನಂ.164, 10ನೇ ತಿರುವು 'ಎ' ಬ್ಲಾಕ್, ದೇವರಾಜ ಅರಸು ಬಡಾವಣೆ, ದಾವಣಗೆರೆ.
90351 09371

**FOR RENT/SALE**
POLYCLINIC/HEALTH CARE CENTER
Individual rooms for 2-3 Doctors with space available for pharmacy, Laboratory
7th Main, P.J. Extension, Near Sandeep Nursing Home
98866 18889, 98864 49966

**ನಿಜಲಿಂಗಪ್ಪ ಬಡಾವಣೆ ಸೈಟು ಮಾರಾಟಕ್ಕಿದೆ**
30x50 ಅಳತೆಯ ಉತ್ತರ ದಿಕ್ಕಿನ, ಡಿಸಿ ಮನೆ ಹಿಂಭಾಗ ಹಾಗೂ ಅಮೃತಾನಂದಮಯಿ ಶಾಲೆ ಹಿಂಭಾಗ ಎರಡೂ ಕಡೆ ಕಾಂಪೌಂಡ್ ಇರುವ ವಾಸ್ತು ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ
98440 15114, 83100 73553

**ADMISSION OPEN 2022**
**MBBS**
India & Abroad - NEET Required
MCC Screening test must be practice in India
Pharma. D, BSc. Nursing
P.B. BSc (N) D. Pharma
BPT, B.Pharm
B.Sc., MLT, Cardiac, Perfusion, Agri, Radiology
Conditions Apply
99160 67627, 80501 08120

**ಮಾರಾಟಕ್ಕಿದೆ**
ದಾವಣಗೆರೆಯಿಂದ 20 ರಿಂದ 25 ಕಿ.ಮೀ ವ್ಯಾಪ್ತಿಯಲ್ಲಿ ಅಡಿಕೆ ತೋಟ, ನೀರಾವರಿ ಹಾಗೂ ಒಣ ಭೂಮಿ ಮತ್ತು ದಾವಣಗೆರೆ ನಗರದಲ್ಲಿ ಯಾವುದೇ ಅಳತೆಯ ನಿವೇಶನ ಮತ್ತು ಇತ್ತೀಚಿಗೆ ನಿರ್ಮಿಸಿದ ಹೊಸ ಮನೆ ಖರೀದಿ ಮತ್ತು ಮಾರಾಟಕ್ಕಾಗಿ ಸಂಪರ್ಕಿಸಿ.
99727 00107

**ಸೇಲ್ಸ್ ಮ್ಯಾನ್ ಬೇಕಾಗಿದ್ದಾರೆ**
ಆಕರ್ಷಕ ಕಮೀಷನ್
ಆಕರ್ಷಕ ಬೋನಸ್
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
88619 39467, 97401 53513

**ಬೇಕಾಗಿದ್ದಾರೆ**
ಹೊಳಲ್ಕೆರೆ ತಾಲ್ಲೂಕು ಹೆಚ್.ಡಿ ಪುರದ ಅಡಿಕೆ ತೋಟದಲ್ಲಿ ಕೆಲಸ ಮಾಡಲು ಒಂದು ಕುಟುಂಬದವರು ಬೇಕಾಗಿದ್ದಾರೆ.
94484 39639

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಸೇಲ್ಸ್‌ಮನ್ ಮತ್ತು ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
ಸಜ್ಜನ್ ಎಂಟರ್‌ಪ್ರೈಸಸ್,
ಎಂಸಿಸಿ 'ಎ' ಬ್ಲಾಕ್, ಚರ್ಚ್ ರಸ್ತೆ, ದಾವಣಗೆರೆ.
99009 71888

# ಅಮೃತ ಮಹೋತ್ಸವದಲ್ಲಿ ಸಿದ್ಧಗಂಗಾ ಶಾಲಾ - ಕಾಲೇಜಿನ ಮಕ್ಕಳ ಸಂಭ್ರಮ



ದಾವಣಗೆರೆ, ಆ. 17 - ಎತ್ತ ನೋಡಿದರೂ ತ್ರಿವರ್ಣ ಧ್ವಜಗಳು, ಸಾಗರದಂತೆ ಹರಿದು ಬಂದ ವಿದ್ಯಾರ್ಥಿ ಸಮೂಹ. ಸೂರ್ಯ ರಶ್ಮಿಗೆ ಮಿರಮಿರನೆ ಮಿಂಚುತ್ತಿದ್ದ ಬಾವುಟಗಳು. ಮುಗಿಲು ಮುಟ್ಟಿದ ಉತ್ಸಾಹ. 'ಜೈ ಭಾರತ್ ಮಾತಾಕೀ', 'ವಂದೇ ಮಾತರಂ' ಘೋಷಣೆಗಳು ರಸ್ತೆಗಳಲ್ಲಿ ಅನುರಣಿಸಿತಿದ್ದವು. ನಾಗರಿಕರು ಬೆಕ್ಕಸ ಬೆರಗಾಗಿ ನೋಡುತ್ತಿದ್ದರು. ಶಿಸ್ತಿನಿಂದ ಹೆಜ್ಜೆ ಹಾಕಿದ ಸಾವಿರಾರು ಮಕ್ಕಳು ರಾಷ್ಟ್ರಭಕ್ತಿಯನ್ನು ಆವಾಹಿಸಿಕೊಂಡಿದ್ದರು. ಬಿಸಿಲು-ಮಳೆ ಲೆಕ್ಕಿಸದೆ ಡಾಂಗೆ ಪಾರ್ಕ್ ರಸ್ತೆಯಿಂದ - ಶಿವಪ್ಪಯ್ಯ ಸರ್ಕಲ್ – ಜಯದೇವ ಸರ್ಕಲ್ – ಅಂಬೇಡ್ಕರ್ ಸರ್ಕಲ್ – ವಿದ್ಯಾರ್ಥಿಭವನ ಸರ್ಕಲ್ ದಾಟಿ ಸಂಸ್ಥೆಯತ್ತ ಹೆಜ್ಜೆ ಹಾಕಿದ ಮಕ್ಕಳು ರಸ್ತೆ ಯುದ್ದಕ್ಕೂ ಸಂಚಲನ ಮೂಡಿಸಿದರು.

ಈ ಬೃಹತ್ ಮೆರವಣಿಗೆಗೆ ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಪಿ ಮುದ್ದಜ್ಜಿ ಚಾಲನೆ ನೀಡಿದರು. ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ. ಆರ್. ತಿಪ್ಪೇಶಪ್ಪ, ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ನಿರಂಜನಮೂರ್ತಿ, ಮಹಾನಗರ ಪಾಲಿಕೆ ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್, ಯುವ ಕಾಂಗ್ರೆಸ್ ನಾಯಕ ಎ. ಶಿವಕುಮಾರ್ ಮತ್ತು ಇತರರು ಹಾಜರಿದ್ದರು.

ಬ್ಯಾಂಡ್ ಸೆಟ್ಟಿನ ಸುಮಧುರ ನಾದಕ್ಕೆ ಮಕ್ಕಳು ಶಿಸ್ತಿನಿಂದ ಹೆಜ್ಜೆ ಹಾಕಿದರು. ರಾಷ್ಟ್ರಗೀತೆ ಹಾಡುವುದರ ಮೂಲಕ ಪ್ರಾರಂಭವಾದ ಮೆರವಣಿಗೆ ರಾಷ್ಟ್ರ ಗೀತೆಯೊಂದಿಗೆ ಮುಕ್ತಾಯಗೊಂಡಿತು. 'ಆಜಾದಿ ಕೀ ಅಮೃತ್ ಮಹೋತ್ಸವ'ವನ್ನು ಸಿದ್ಧಗಂಗಾ ವಿದ್ಯಾಸಂಸ್ಥೆ ಅರ್ಥಪೂರ್ಣವಾಗಿ ಆಚರಿಸಿತು. ಸಂಸ್ಥೆಯ ಕಾರ್ಯದರ್ಶಿ ಹೇಮಂತ್ ಮತ್ತು ನಿರ್ದೇಶಕ ಡಾ|| ಜಯಂತ್‌ರವರ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಹಕರಿಸಿದ ಪ್ರತಿಯೊಬ್ಬರಿಗೂ ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿ'ಸೌಜ ವಂದಿಸಿದರು.

# ಪವರ್ ಲಿಫ್ಟಿಂಗ್‌ನಲ್ಲಿ ಸಾನಿಯಾ ಪ್ರಥಮ



ದಾವಣಗೆರೆ, ಆ. 17- ಕರ್ನಾಟಕ ಸ್ಟೇಟ್ ಪವರ್ ಲಿಫ್ಟಿಂಗ್ ಅಸೋಸಿಯೇಷನ್ ಮತ್ತು ಶ್ರೀ ಸಾಯಿ ಫಿಟ್ನೆಸ್ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ನಡೆದ ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಕಾಂಪಿಟೇಶನ್ 53 ಕೆಜಿ ವಿಭಾಗದಲ್ಲಿ ತಾಲ್ಲೂಕಿನ ಅತ್ತಿಗೆರೆ ಪಟೇಲ್ ನಂದ್ಯಪ್ಪ ಹೊರಟ್ಟಿ ಗೌಡ್ರ ಕಲ್ಲಪ್ಪ ಪ್ರೌಢಶಾಲೆಯ ವಿದ್ಯಾರ್ಥಿನಿ ಎಸ್.ಪಿ. ಸಾನಿಯಾ ಪ್ರಥಮ ಸ್ಥಾನ ಪಡೆದಿದ್ದಾರೆ.

ಇವರ ಸಾಧನೆಗೆ ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಎ.ಜಿ. ನಾಗಪ್ಪ, ಮುಖ್ಯೋಪಾಧ್ಯಾಯ ಷಣ್ಮುಖಯ್ಯ ಅಭಿನಂದಿಸಿದ್ದಾರೆ.

# ಮೌನೇಶ್ವರ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿಯ ಉದ್ಘಾಟನೆ




ದಾವಣಗೆರೆ, ಆ. 17- 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ದಿನದಂದು ಮೌನೇಶ್ವರ ಬಡಾವಣೆ ನಾಮಫಲಕ ಮತ್ತು ಮೌನೇಶ್ವರ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ ಉದ್ಘಾಟನೆ, ಧ್ವಜಾರೋಹಣ ಮೂಲಕ ಸಮಿತಿಯ ಗೌರವ ಅಧ್ಯಕ್ಷರೂ ಆದ ಮಹಾನಗರ ಪಾಲಿಕೆ ಮಾಜಿ ಉಪ ಮಹಾಪೌರ ಲೋಕೇಶ್ ನೆರವೇರಿಸಿದರು.

ಸಮಿತಿ ಅಧ್ಯಕ್ಷ ಬಿ.ಎಸ್. ನಾಯಕ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.ಸಮಿತಿ ಸಹ ಕಾರ್ಯದರ್ಶಿ ಬಿ.ಕೆ. ಬಸಪ್ಪ ಸ್ವಾಗತಿಸಿದರು. ಸಂಘಟನಾ ಕಾರ್ಯದರ್ಶಿ ಚಂದ್ರಶೇಖರ್ ಎಸ್. ನೂಲಾ ವಂದಿಸಿದರು.

# ನಗರದಲ್ಲಿ ಇಂದು ಶ್ರೀಕೃಷ್ಣ ಜನ್ಮಾಷ್ಟಮಿ

ನಾಮದೇವ ಸಿಂಪಿ ಸಮಾಜದಿಂದ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮವು ಎಸ್‌ಕೆಪಿ ರಸ್ತೆಯಲ್ಲಿರುವ ಶ್ರೀ ವಿಠ್ಠಲ ರುಕ್ಮಾಯಿ ಹರಿ ಮಂದಿರದಲ್ಲಿ ಇಂದು ನಡೆಯಲಿದೆ. ಇಂದು ರಾತ್ರಿ 10 ಗಂಟೆಯಿಂದ ಹರಿಭಕ್ತ ಪಾರಾಯಣ ನಡೆಯಲಿದ್ದು, ರಾತ್ರಿ 12 ಕ್ಕೆ ಶ್ರೀಕೃಷ್ಣ ಜನ್ಮಾಷ್ಟಮಿಯ ತೊಟ್ಟಿಲು ಕಾರ್ಯಕ್ರಮ ನಡೆಯಲಿದೆ ಎಂದು ಸಮಾಜದ ಅಧ್ಯಕ್ಷ ಎಂ.ಎಸ್. ವಿಠ್ಠಲ್ ತಿಳಿಸಿದ್ದಾರೆ.

# ನಗರದ ಪದ್ಮಸಾಲಿ ಯುವಕರ ಸಂಘದ ಅಧ್ಯಕ್ಷರಾಗಿ ಪಿ.ಜಿ. ಶ್ರೀನಿವಾಸ್ ಆಯ್ಕೆ

ದಾವಣಗೆರೆ, ಆ. 17- ಶ್ರೀ ಮಾರ್ಕಂಡೇಶ್ವರ ಪದ್ಮಶಾಲಿ (ನೇಕಾರ) ಯುವಕರ ಸಂಘದ ಅಧ್ಯಕ್ಷರಾಗಿ ಪಿ.ಜಿ. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿಯಾಗಿ ಸೇಪೂರ್ ಆನಂದ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈಚೆಗೆ ಶ್ರೀ ಮಾಕಂಡೇಶ್ವರ ಪದ್ಮಶಾಲಿ ಸಮಾಜ ಸೇವಾ ಸಂಘದ ಅಧ್ಯಕ್ಷರಾದ ಪಿ. ಜೆ. ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಆಯ್ಕೆ ಮಾಡಲಾಗಿದೆ ಎಂದು ಅಧ್ಯಕ್ಷ ಶ್ರೀನಿವಾಸ್ ತಿಳಿಸಿದ್ದಾರೆ.

## ಓದುಗರ ಪತ್ರ

### ಸಂಚಾರಿ ಪೊಲೀಸರ 'ಲಯನ್ಸ್' ವಾಹನ ರದ್ದು ಮಾಡಿ..!

**ಮಾನ್ಯರೇ,**

ಸಾರ್ವಜನಿಕರ ವಾಹನಗಳನ್ನು ಲಯನ್ಸ್ ವಾಹನದಲ್ಲಿ ತೆಗೆದುಕೊಂಡು ಹೋಗಿ, ಠಾಣೆಗೆ ವಾಹನ ಮಾಲೀಕರನ್ನು ಕರೆಸಿ ಬೈಯ್ಯುವುದು, ಹೆದರಿಸುವುದು, ರಶೀದಿ ಇಲ್ಲದ ಹಾಗೇ ದಂಡವನ್ನು ಕಟ್ಟಿಸಿಕೊಂಡು ಹಣ ಸುಲಿಗೆ ಮಾಡಲಾಗುತ್ತಿದೆ. ವಯಸ್ಸಾದವರು, ಬಡವರು ಮತ್ತು ಮಹಿಳೆಯರೂ ಅಂತಾ ನೋಡದೆ ಈ ಸಂಚಾರಿ ಪೊಲೀಸ್ ಠಾಣೆಯವರ ಟ್ರೋಯಿಂಗ್ ವಾಹನದಿಂದ ದಾವಣಗೆರೆ ನಗರದ ನಾಗರಿಕರಿಗೆ ತುಂಬಾ ತೊಂದರೆ ಆಗಿದೆ. ಬೆಂಗಳೂರಿನಲ್ಲಿ ಸಂಚಾರಿ ಟ್ರೋಯಿಂಗ್ ವಾಹನವನ್ನು ಸರ್ಕಾರ ರದ್ದು ಪಡಿಸಿದೆ, ಅದೇ ರೀತಿ ನಮ್ಮ ದಾವಣಗೆರೆಯಲ್ಲಿಯೂ ಸಹ 'ಲಯನ್ಸ್' ವಾಹನವನ್ನು ರದ್ದುಪಡಿಸಬೇಕು ಎಂದು ಕೇಳಿಕೊಳ್ಳುತ್ತೇವೆ.

**- ಸುನಿಲ್**, ಸಮಾಜ ಸೇವಕರು, ದಾವಣಗೆರೆ.

# ಇಷ್ಟಲಿಂಗ ಪೂಜೆಯಿಂದ ಶಾಂತಿ - ನೆಮ್ಮದಿ - ಸಂತೃಪ್ತಿ : ಬೇಲಿಮಠದ ಶ್ರೀ



ದಾವಣಗೆರೆ, ಆ. 17- ವೈಚಾರಿಕತೆಯ ತಳಹದಿಯ ಮೇಲೆ ಬಸವಣ್ಣನವರು ರೂಪಿಸಿಕೊಟ್ಟ ಲಿಂಗವಂತ ಧರ್ಮದ ಆಚಾರ, ವಿಚಾರ, ತತ್ವ-ಸಿದ್ಧಾಂತಗಳನ್ನು ಜೀವನ ಪರ್ಯಂತರ ಮೈಗೂಡಿಸಿಕೊಂಡಿದ್ದ ನಿಜ ಶರಣ ಹೆಚ್.ಎಂ. ಸ್ವಾಮಿ ಅವರು ನಡೆ-ನುಡಿಗಳಲ್ಲಿ ಆಚರಣೆಗೆ ತಂದವರು ಎಂದು ಬೆಂಗಳೂರಿನ ಬೇಲಿಮಠದ ಶ್ರೀ ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರ ಮಹಾಸ್ವಾಮಿಗಳು ನುಡಿದರು.

ನಗರದ ಸರಸ್ವತಿ ಬಡಾವಣೆಯಲ್ಲಿರುವ ಬಸವ ಬಳಗದ ಬಸವ ಮಹಾಮನೆಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಲಿಂ. ಹೆಚ್. ಎಂ. ಸ್ವಾಮಿ ಅವರ ಪ್ರಥಮ ವರ್ಷದ ಸ್ಮರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಅನೇಕರು ಅನೇಕ ಸಂದರ್ಭದಲ್ಲಿ ಹೆಚ್. ಎಂ. ಸ್ವಾಮಿಯವರ ಸ್ಫೂರ್ತಿಯನ್ನು ಪಡೆದವರು. ಅವರು ಪ್ರಾತಃಸ್ಮರಣೀಯರು. ನಮ್ಮೆಲ್ಲರ ಹೃದಯದಲ್ಲಿ ಬಸವ ಪ್ರಜ್ಞೆಯನ್ನು ಬಿತ್ತಿದ ಮತ್ತು ನುಡಿದಂತೆ ನಡೆದ ನಿಜ ಶರಣರು ಎಂದು ಕೊಂಡಾಡಿದರು. ಶರಣ ತತ್ವ ಕೇವಲ ಭಾಷಣಕ್ಕೆ ಸೀಮಿತವಾಗದೇ ನುಡಿದಂತೆ ನಡೆಯುವುದು ಬಹಳ ಮುಖ್ಯ. ಇದನ್ನು ಚಾಚೂ ತಪ್ಪದೇ ಪಾಲಿಸಿದವರು ಹೆಚ್.ಎಂ. ಸ್ವಾಮಿಯವರು ಎಂದು ಸ್ವಾಮಿಯವರ ಸೇವಾ ಕಾರ್ಯವನ್ನು ಶ್ಲಾಘಿಸಿದರು.

ಕಾಯಕ ಪ್ರಜ್ಞೆ ಮತ್ತು ಬಸವ ಪ್ರಜ್ಞೆಯನ್ನು ಜಾಗೃತಗೊಳಿಸುವುದು ಅವಶ್ಯ ವಾಗಿದೆ. ಪ್ರತಿಯೊಬ್ಬರೂ ಶರಣ ಚಿಂತನೆಗಳನ್ನು ಮೈಗೂಡಿಸಿಕೊಳ್ಳುವಂತೆ ಕರೆ ನೀಡಿದರು.

ಪಾ ೦ ಡೋ ಮ ಟ್ಟಿ - ಕ ಮ್ಮತ್ತ ಹ ಳ್ಳಿ ವಿರಕ್ತಮಠದ ಡಾ. ಗುರು ಬಸವ ಮಹಾಸ್ವಾಮಿಗಳು ಮಾತನಾಡಿ, ಬಸವಣ್ಣ ಆಕರ್ಷಕ, ಚುಂಬಕ ಶಕ್ತಿ. ಶರಣ ತತ್ವ, ವಚನ ಚಿಂತನೆಗಳು ಪ್ರತಿಯೊಬ್ಬರ ಬಾಳಿಗೆ ಬೆಳಕು ನೀಡುವಂತಹವು ಎಂದರು.

ನಿತ್ಯ ಇಷ್ಟಲಿಂಗ ಪೂಜೆ ಮಾಡುತ್ತಾ ಬಂದರೆ ಜೀವನದಲ್ಲಿ ಶಾಂತಿ, ನೆಮ್ಮದಿ, ಸಂತೃಪ್ತಿ, ಆನಂದ ಕಾಣಲು ಸಾಧ್ಯವಿದೆ. ಮಹಿಳೆಯರಿಗೆ ವಿಶ್ವ ಮಾನ್ಯತೆ ನೀಡಿ, ಸಮಾನತೆ ನೀಡಿದ ಜಗತ್ತಿನ ಏಕೈಕ ಸಂತ ಬಸವಣ್ಣ ಎಂದು ಹೇಳಿದರು.

ವಿರಕ್ತಮಠದ ಶ್ರೀ ಬಸವ ಪ್ರಭು ಸ್ವಾಮೀಜಿ ಮಾತನಾಡಿ, ಬಸವ ತತ್ವ ಪಾಲಿಸಿ, ಆಚರಿಸಿದ ನಿಜ ಹೆಚ್.ಎಂ. ಸ್ವಾಮಿಯವರ ಜೀವನ ಅನುಕರಣೀಯ. ಕಾಯಕ-ದಾಸೋಹ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡವರು ಎಂದರು.

ಬೆಂಗಳೂರು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಮಾತನಾಡಿ, ಪುರಾಣ ಸಂಸ್ಕೃತಿ ಮತ್ತು ಶರಣ ಸಂಸ್ಕೃತಿಯನ್ನು ಅರಿಯಬೇಕಾಗಿದೆ. ಶರಣ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ, ಸಂರಕ್ಷಣೆ ಮಾಡುವ ಹೊಣೆ ನಮ್ಮದು ಎಂದು ಹೇಳಿದರು.

ಪುರಾಣ ಸಂಸ್ಕೃತಿಯಿಂದ ಹೊರ ಬರಬೇಕಾಗಿದೆ. ಮೂಢನಂಬಿಕೆಗಳನ್ನು ತೊಡೆದು ಹಾಕಿ ಬಸವಣ್ಣನವರ ತತ್ವಗಳನ್ನು ಪಾಲಿಸಬೇಕಾಗಿದೆ ಎಂದು ಹಿತ ನುಡಿದರು.

ಸಿದ್ಧಯ್ಯನಕೋಟೆ ಶ್ರೀ ಬಸವಲಿಂಗ ಸ್ವಾಮೀಜಿ, ಬಸವ ಬಳಗದ ವಿ. ಸಿದ್ಧರಾಮ ಶರಣರು ಮಾತನಾಡಿದರು. ಅಧ್ಯಕ್ಷ ಹುಚ್ಚಪ್ಪ ಮಾಸ್ತರ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹೆಚ್.ಎಂ. ಮಂದಾಕಿನಿ, ಹೆಚ್.ಎಂ. ವಿನೀತ್, ಹೆಚ್.ಎಂ. ವಿಜಯ್, ಹೆಚ್.ಎಂ. ಈಶ್ವರ್ ಚಂದ್ರ ಮತ್ತಿತರರು ಉಪಸ್ಥಿತರಿದ್ದರು. ಕುಶಲ್ ಪ್ರಾರ್ಥಿಸಿದರು. ಶಿಲ್ಪ ಈಶ್ವರ್ ಚಂದ್ರ ಸ್ವಾಗತಿಸಿದರು.

# ವಿಶ್ವಚೇತನ ವಿದ್ಯಾಸಂಸ್ಥೆಯಲ್ಲಿ ಸಂಭ್ರಮದ ಅಮೃತ ಮಹೋತ್ಸವ




ದಾವಣಗೆರೆ, ಆ. 17- ನಗರದ ವಿಶ್ವಚೇತನ ವಿದ್ಯಾನಿಕೇತನ ಶಾಲೆ, ಒಲಂಪಿಯಾಡ್ ಶಾಲೆ ಹಾಗೂ ಕಾಲೇಜಿನಲ್ಲಿ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ವೈಭವದಿಂದ ಆಚರಿಸಲಾಯಿತು.

ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ವಿಜಯಲಕ್ಷ್ಮಿ ವೀರಮಾಚನೇನಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ವಿವಿಧತೆಯಲ್ಲಿ ಏಕತೆಯನ್ನು ಬಿಂಬಿಸುವ ರಾಷ್ಟ್ರ ಭಾರತ. ಇಂದು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪ್ರಗತಿಯತ್ತ ಸಾಗುತ್ತಿರುವ ರಾಷ್ಟ್ರವಾಗಿದೆ. ಇಂತಹ ಭವ್ಯ ಭಾರತ ಕಟ್ಟುವುದಕ್ಕಾಗಿ, ಸ್ವಾತಂತ್ರ್ಯಕ್ಕಾಗಿ ಸಾವಿರಾರು ಭಾರತೀರು ಹೋರಾಡಿ ವೀರ ಮರಣ ಅಪ್ಪಿದ್ದಾರೆ. ಅವರ ತ್ಯಾಗ, ಬಲಿದಾನಗಳ ಪ್ರತೀಕವೇ ಇಂದಿನ ಅಮೃತ ಮಹೋತ್ಸವವಾಗಿದೆ ಎಂದು ಹೇಳಿದರು.

ರಾಜಕಾರಣಿಯೇ ಆಗು, ವಿಜ್ಞಾನಿಯಾಗು, ರಾಷ್ಟ್ರಭಕ್ತನೇ ಆಗು ಏನಾದರೂ ಆಗು ಮೊದಲು ಮಾನವನಾಗು, ಭವಿಷ್ಯದ ಸತ್ಪ್ರಜೆಯಾಗು ಎಂದು ಕಿವಿ ಮಾತು ಹೇಳಿದರು.

ಉದ್ಯಮಿ ರಾಘವೇಂದ್ರ ಪ್ರಸಾದ್ ಮಾತನಾಡಿ, ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲಾ ಭಾರತೀಯರಿಗೆ ನಮನಗಳನ್ನು ಸಲ್ಲಿಸಿ, ರೈತ ಪರ ಕಾಳಜಿಯನ್ನು ಹೊಂದಿದ ಇವರು ರೈತರಿಗೆ ಅನುಕೂಲವಾಗುವ ಎಲ್ಲಾ ಯಂತ್ರಗಳು ಮಾರಾಟ ಬೆಲೆಗೆ ಲಭ್ಯವಾಗುವಂತಾಗಬೇಕೆಂದರು.

ಅಮೇರಿಕಾದ ವೈದ್ಯ ಡಾ. ಅನ್ನೆ ವಿಜಯಕುಮಾರ್ ಅವರು ಮಾತನಾಡಿ, ಭಾರತೀಯರು ಜ್ಞಾನವಂತರು, ಸೃಜನಶೀಲರು, ಪ್ರಾಮಾಣಿಕರು ಹಾಗೂ ಶಿಕ್ಷಕರು ದೇಶದ ನಿರ್ಮಾಪಕರು ಎಂದು ಹೇಳಿದರು.

ಅಮೆರಿಕಾದ ವೈದ್ಯ ಡಾ. ಜ್ಯೋತಿ ಮಾತನಾಡಿ, ಭಾರತಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಸಂಸ್ಕೃತಿಗೆ ಹೆಸರಾದ ದೇಶ ಭಾರತ. ಅದನ್ನು ಉಳಿಸಿ, ಬೆಳೆಸಿದಾಗ ಮಾತ್ರ ಅಮೃತ ಮಹೋತ್ಸವಕ್ಕೆ ಸಾರ್ಥಕತೆ ಬರುತ್ತದೆ ಎಂದರು.

ಕಾಲೇಜಿನ ಪ್ರಾಂಶುಪಾಲರಾದ ವಿನೋದ್, ಶ್ರೀನಿವಾಸಮೂರ್ತಿ, ಬಸವರಾಜಯ್ಯ, ರೇವಣಸಿದ್ಧಪ್ಪ, ಶಾಲಾ ಸಿಬ್ಬಂದಿ, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಂದ ದೇಶಭಕ್ತಿ ಹಾಗೂ ರಾಷ್ಟ್ರೀಯ ಭಾವೈಕ್ಯತೆಯನ್ನು ಬಿಂಬಿಸುವಂತಹ ವಿಭಿನ್ನವಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

# 21ರಿಂದ ಕುಲಕಸುಬುಗಳ ವಸ್ತು ಪ್ರದರ್ಶನ

ದಾವಣಗೆರೆ, ಆ.17 - ಹಿಂದುಳಿದ ವರ್ಗಗಳ ನೇತಾರ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 107 ನೇ ಜಯಂತಿ ಯನ್ನು ಸರ್ಕಾರದ ನಿರ್ದೇಶನದಂತೆ 'ಕಾಯಕ ಸಮುದಾಯಗಳ ಕುಲಕಸುಬುಗಳ ವಸ್ತು ಪ್ರದರ್ಶನ' ಏರ್ಪಡಿಸುವ ಮೂಲಕ ಆಚರಿಸಲಾಗುವುದು ಎಂದು ಜಿಲ್ಲಾಧಿಕಾರಿ ಶಿವಾನಂದ ಕಪಾಸಿಶಿ ಹೇಳಿದರು.

ಜಿಲ್ಲಾಡಳಿತ ಭವನದಲ್ಲಿ ಮೊನ್ನೆ ನಡೆದ ದೇವರಾಜ ಅರಸು ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಇದೇ ದಿನಾಕ 21, 22 ಹಾಗೂ 23 ರಂದು 3 ದಿನಗಳ ಕಾಲ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು.

ದಿನಾಂಕ 21 ರಂದು ದೇವರಾಜ ಅರಸು ಬಡಾವಣೆಯಲ್ಲಿನ ಅರಸು ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ವಿವಿಧ ಕಲಾತಂಡಗಳ ಮೆರವಣಿಗೆಯೊಂದಿಗೆ ವಿವಿಧ ಸಮಾಜದ ಕುಲಕಸುಬುಗಳ ವೇಷಭೂಷಣಗಳ ಕಲಾವಿದರು ಹೆಜ್ಜೆ ಹಾಕಲಿದ್ದಾರೆ. ನಂತರ ಮೆರವಣಿಗೆ ಮಹಾನಗರ ಪಾಲಿಕೆ ಆವರಣ ತಲುಪಿ ವೇದಿಕೆ ಕಾರ್ಯಕ್ರಮ ಆರಂಭವಾಗಲಿದೆ.

ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ರಮೇಶ್ ಮಾತನಾಡಿ, ಮೂರೂ ದಿನ ವಿವಿಧ ಕಾರ್ಯಕ್ರಮಗಳು ಇದ್ದು, ವೇದಿಕೆ ಆವರಣದಲ್ಲಿ ವಿವಿಧ ಹಿಂದುಳಿದ ವರ್ಗಗಳ ಕುಲಕಸುಬುಗಳ ಮಳಿಗೆಗಳು ಇರಲಿವೆ. ಸ್ಥಳೀಯ ಕಲಾವಿದರುಗಳಿಗೆ ಅವಕಾಶವಿದ್ದು, ಕೋಲಾಟ, ಹಗಲು ವೇಷ, ಡೊಳ್ಳು ಕುಣಿತ, ನಾದಸ್ವರ ಮುಂತಾದ ಕಾರ್ಯಕ್ರಮಗಳು ಇರಲಿವೆ. ಶಾಲಾ ಮಕ್ಕಳಿಗೆ ಯೋಗ ಸ್ಪರ್ಧೆ ಆಯೋಜಿಸುವುದು ಮತ್ತು ಶಾಲಾ ಮಕ್ಕಳಿಗೆ ಗಿಡ ನೆಡುವ ಕಾರ್ಯಕ್ರಮ ಇರಲಿವೆ ಎಂದು ವಿವರಿಸಿದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಸದಸ್ಯರಾದ ಎ.ನಾಗರಾಜ್, ಜಿ.ಪಂ.ಅಧಿಕಾರಿ ಸೌಮ್ಯ, ಸಮಾಜ ಕಲ್ಯಾಣಾಧಿಕಾರಿ ರೇಷ್ಮಾ ಕೌಸರ್ ಮತ್ತು ಇತರರು ಭಾಗವಹಿಸಿದ್ದರು.

# ನಗರದ ಗುರುರಾಯರ ಮಠದಲ್ಲಿ ಅವಭೃತ ಪೂಜೆ




ದಾವಣಗೆರೆ, ಆ.17- ನಗರದ ಪಿ.ಜೆ. ಬಡಾವಣೆ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ 351 ಗುರುರಾಯರ ಆರಾಧನೆ ನಿಮಿತ್ತ ಮುಂಜಾನೆ ನಸುಕಿನಲ್ಲಿ ಕೆಎಸ್‌ಎಫ್‌ಸಿ ನಾಗರಾಜ್ ಮತ್ತು ರಾಜಣ್ಣನವರ ನೇತೃತ್ವದಲ್ಲಿ ಭಕ್ತರು ಚಾನೆಲ್‌ನಿಂದ ಮಡಿ ನೀರು ತರುವುದರೊಂದಿಗೆ ರಾಯರ ವೃಂದಾವನ 'ಅವಭೃತ' ಕೈಂಕರ್ಯವನ್ನು ಶ್ರದ್ಧಾ - ಭಕ್ತಿಯಿಂದ ಲೋಕ ಕಲ್ಯಾಣಕ್ಕಾಗಿ ಸಮರ್ಪಿಸಿದರು.

ಈ ಸೇವಾ ಕಾರ್ಯದಲ್ಲಿ ಕೆಎಸ್‌ಎಫ್‌ಸಿ ನಾಗರಾಜ್, ರಾಜಣ್ಣ, ಸುಶಿಲೇಂದ್ರ ದೇವಳೆ, ಪ್ರಕಾಶ್ ನಾಡಿಗೇರ್, ಬದರೀಶ್ ದೇವಳೆ, ಬದರಿಪ್ರಸಾದ್, ಸುನೀಲ್ ಎಚ್.ಜಿ., ವಿನೋದ್, ಜಿ.ಜೆ. ಸಮೀರ್ ದೇವಳೆ, ಸಮರ್ಥ್ ಆರ್ ಕುಲಕರ್ಣಿ, ಅಮೋಘ್ ದೇವಳೆ, ಸಚಿನ್ ಬಂಡಿವಾಡ್, ಸುಷಮೀಂದ್ರ ಎನ್ ರಾವ್, ಶ್ರೀಕಾಂತ್ ವೈದ್ಯ, ಪ್ರಕಾಶ್ ನಾಡಿಗೇರ್ ಬದರೀಶ್ ದೇವಳೆ, ಬದರಿಪ್ರಸಾದ್, ಸುನೀಲ್ ಎಚ್.ಜಿ. ವಿನೋದ್ ಜಿ.ಜೆ. ಸಮೀರ್ ದೇವಳೆ, ಶ್ರೀರಾಂ ನಾಡಿಗೇರ್, ಶ್ರೀನಿವಾಸ ನಾಡಿಗೇರ್, ಸಮರ್ಥ್ ಆರ್. ಕುಲಕರ್ಣಿ, ಅಮೋಘ್ ದೇವಳೆ, ಸಚಿನ್ ಬಂಡಿವಾಡ್, ಸುಷಮೀಂದ್ರ ಎನ್. ರಾವ್, ಶ್ರೀಕಾಂತ್ ವೈದ್ಯ, ಮೋಹನ್ ಉಪಸ್ಥಿತರಿದ್ದರು.

# ನಗರದಲ್ಲಿ ನಾಳೆ ಚೀಟಿ ನಿಧಿಗಳ ದಿನಾಚರಣೆ

ದಾವಣಗೆರೆ, ಆ. 17 - ಜಿಲ್ಲಾ ಚಿಟ್‌ಸ್ಪರ್ಸ್ ಸಂಘ ಹಾಗೂ ಸಹಕಾರ ಇಲಾಖೆ ಸಹಯೋಗದಲ್ಲಿ ನಾಡಿದ್ದು ದಿನಾಂಕ 19 ರ ಶುಕ್ರವಾರ ಬೆಳಿಗ್ಗೆ 11 ಕ್ಕೆ ನಗರದ ಕುವೆಂಪು ಕನ್ನಡ ಭವನದಲ್ಲಿ ಚೀಟಿ ನಿಧಿಗಳ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಚೀಟಿ ನಿಧಿಗಳ ಉಪನಿಬಂಧಕರಾದ ಹೆಚ್. ಅನ್ನಪೂರ್ಣ, ಸಹಾಯಕ ನಿಬಂಧಕ ಹೆಚ್.ಎಸ್. ಸತೀಶ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಲೆಕ್ಕಪರಿಶೋಧಕ ಜಂಬಗಿ ರಾಧೇಶ್ 'ಚೀಟಿ ನಿಧಿಗಳ ಲೆಕ್ಕಪತ್ರ ಮತ್ತು ಜಿಎಸ್‌ಟಿ ನಿರ್ವಹಣೆ' ಹಾಗೂ ವಕೀಲರಾದ ಎ.ಎಸ್. ಮಂಜುನಾಥ್ ' ಚೀಟಿ ನಿಧಿಗಳ ಬಾಕಿ ವಸೂಲಾತಿಗೆ ಬೇಕಾಗುವ ದಾಖಲಾತಿಗಳು' ಕುರಿತು ಉಪನ್ಯಾಸ ನೀಡಲಿದ್ದಾರೆ.

# ಜಗಳೂರು ಮಾರ್ಗದಲ್ಲಿ ವಿದ್ಯುತ್ ಇಲ್ಲ

ದಾವಣಗೆರೆ ಆ.17- 66 ಕೆ.ವಿ ಜಗಳೂರು, ವಿ.ವಿ ಕೇಂದ್ರ ಮತ್ತು ಬಿದರಕೆರೆ, ವಿ.ವಿ. ಕೇಂದ್ರಗಳಲ್ಲಿ ತ್ರೈಮಾಸಿಕ ನಿರ್ವಹಣೆ ಕೆಲಸ ಹಮ್ಮಿಕೊಂಡಿರುವುದರಿಂದ ಇಂದು ಬೆಳಿಗ್ಗೆ 10. ರಿಂದ ಸಂಜೆ 6 ಗಂಟೆಯವರೆಗೆ ಜಗಳೂರು ಮತ್ತು ಬಿದರಕೆರೆ ವಿ.ವಿ ಕೇಂದ್ರಗಳ ವ್ಯಾಪ್ತಿಯಲ್ಲಿ ಬರುವ ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ಹಾಗೂ ಎನ್.ಜೆ.ವೈ ಮಾರ್ಗಗಳಿಗೆ ವಿದ್ಯುತ್ ವ್ಯತ್ಯಯವಾಲಿದೆ.

# ಚಾಕು ಇರಿತ : ಯುವಕನಿಗೆ ಗಾಯ

ದಾವಣಗೆರೆ, ಆ. 17- ಟೀ ಕುಡಿಯುತ್ತಿದ್ದ ವೇಳೆ ಕ್ಷುಲ್ಲಕ ವಿಚಾರಕ್ಕೆ ಚಾಕುವಿನಿಂದ ಇರಿದ ಪರಿಣಾಮ ಯುವಕನೋರ್ವನ ಬಲಗೈ ಹೆಬ್ಬೆರಳಿಗೆ ರಕ್ತಗಾಯವಾದ ಘಟನೆ ನಗರದ ಕಾಯಿಪೇಟೆಯಲ್ಲಿ ಇಂದು ನಡೆದಿದೆ.

ಎಸ್ಎಂ ಕೃಷ್ಣ ನಗರದ ಹೊಸ ಕ್ಯಾಂಪ್‌ನ ಅಬ್ದುಲ್ ರಜಾಕ್ ಎಂಬ ಯುವಕ ಗಾಯಾಳು. ಆರೋಪಿ ಪರಾರಿಯಾಗಿದ್ದಾನೆ. ಗಾಯಾಳು ಯುವಕನನ್ನು ಬಸವನಗರ ಪೊಲೀಸ್ ಠಾಣೆಯಲ್ಲಿ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದು, ಅಸ್ಪಷ್ಟವಾಗಿ ಆತ ಉತ್ತರಿಸುತ್ತಿದ್ದಾನೆ ಎಂದು ಹೇಳಲಾಗಿದೆ.


**ಕಾಲ್ ಸೆಂಟರ್‌ಗೆ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ**

ಔಷಧಿ ಅಂಗಡಿಯಲ್ಲಿ 1ರಿಂದ 2 ವರ್ಷ ಕೆಲಸ ಮಾಡಿ, ಅನುಭವ ಇರುವ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.

ಸ್ಟೋರ್ ಹಾಗೂ ಗೋಡೌನ್‌ನಲ್ಲಿ ಸ್ಟಾಕ್ ತೆಗೆಯಲು
PUC / ITI / DIPLOMA
ಆದ ಹುಡುಗರು / ಹುಡುಗಿಯರು ಬೇಕಾಗಿದ್ದಾರೆ.

ಆಕರ್ಷಕ ಸಂಬಳ, ESI/PF, ಗ್ರಾಚ್ಯುಟಿ, ಬೋನಸ್ ಸೌಲಭ್ಯದೊಂದಿಗೆ ಮಧ್ಯಾಹ್ನ ಹಾಗೂ ರಾತ್ರಿಯ ಊಟದ ವ್ಯವಸ್ಥೆ ಇರುತ್ತದೆ.

ಎ.ಕೆ. ಫಾರ್ಮಾ ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ. M : 96117 26499, 88678 57260



**ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜು, ದಾವಣಗೆರೆ**

**ಬೇಕಾಗಿದ್ದಾರೆ**

* M.Sc., Nursing * M.Sc., Microbiology
* M.Sc., Pathology * M.Com
* Diploma/Engineering in CS
ಮತ್ತು ಕಂಪ್ಯೂಟರ್ ಜ್ಞಾನ ಹೊಂದಿರಬೇಕು

ವಿಳಾಸ : ಲುಂಬಿನಿ ಪ್ಯಾರಾ ಮೆಡಿಕಲ್ ಕಾಲೇಜು,
2ನೇ ಮುಖ್ಯ ರಸ್ತೆ, 9ನೇ ಅಡ್ಡ ರಸ್ತೆ, ಲತಾ ನರ್ಸಿಂಗ್ ಹೋಂ ಹತ್ತಿರ,
ಎವಿಕೆ ಕಾಲೇಜು ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ -02.
63604 91454, 99020 55335


# ಬುದ್ಧಿವಂತಿಕೆ, ಕಠಿಣ ಪರಿಶ್ರಮವಿದ್ದರೆ ಉನ್ನತ ಸ್ಥಾನಕ್ಕೆ

## ಅಕ್ಕಮಹಾದೇವಿ ಸಮಾಜದ ಕಾರ್ಯಕ್ರಮದಲ್ಲಿ ದೂಡಾ ಅಧ್ಯಕ್ಷ ಸುರೇಶ್ ಅಭಿಮತ



ದಾವಣಗೆರೆ, ಆ.17 - ಸರ್ಕಾರಿ ಶಾಲೆ ಎಂಬ ಕೀಳರಿಮೆ ಹೊಂದದೇ ನಿಮ್ಮ ಬುದ್ಧಿವಂತಿಕೆ, ಕಠಿಣ ಪರಿಶ್ರಮದಿಂದ ಶೈಕ್ಷಣಿಕ ಸಾಧನೆ ಮಾಡಿ, ಭವಿಷ್ಯದಲ್ಲಿ ಉನ್ನತ ಸ್ಥಾನ ಪಡೆಯುವಂತೆ ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅವರು, ಇತ್ತೀಚೆಗೆ ನಗರದ ಅಕ್ಕಮಹಾದೇವಿ ರಸ್ತೆಯಲ್ಲಿನ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಅಕ್ಕಮಹಾದೇವಿ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಅಕ್ಕಮಹಾದೇವಿ ಸಮಾಜದ ಸಹಾಯ ನಿಧಿಯಿಂದ ಸರ್ಕಾರಿ ಶಾಲೆ, ಗ್ರಾಮೀಣ ಭಾಗ, ಆರ್ಥಿಕವಾಗಿ ಹಿಂದುಳಿದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಕೊಡಲ್ಪಡುವ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಸರ್ಕಾರಿ ಶಾಲೆಯು ಕೂಡ ಕಡಿಮೆ ಇಲ್ಲ. ನಾನೂ ಸಹ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದು, ವಿದ್ಯಾರ್ಜನೆಗೆ ಗಮನ ಹರಿಸಿದೆ. ಬಂದಂತಹ ಕಷ್ಟಗಳನ್ನು ಸವಾಲಾಗಿ ಸ್ವೀಕರಿಸಿ ಜೀವನದ ಹಾದಿಯಲ್ಲಿ ಸಾಧನೆಯ ಗುರಿಯತ್ತ ಮುನ್ನುಗ್ಗಿದ್ದರಿಂದ ಪ್ರಸ್ತುತ ಸಾರ್ವಜನಿಕ ಕ್ಷೇತ್ರದಲ್ಲಿ ಉನ್ನತ ಹುದ್ದೆಯನ್ನು ಅಲಂಕರಿಸಿ ಸೇವೆ ಸಲ್ಲಿಸುತ್ತಿದ್ದೇನೆ ಎಂದು ಜೀವನದ ಅನುಭವವನ್ನು ಹಂಚಿಕೊಂಡರು.

ಅಬ್ದುಲ್ ಕಲಾಂ ಸೇರಿದಂತೆ ಅನೇಕ ಮಹನೀಯರು ಸಾಕಷ್ಟು ಕಷ್ಟ, ನೋವುಗಳನ್ನುಂಡು ಕಠಿಣ ಪರಿಶ್ರಮದಿಂದ ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಸಾಧನೆಗೈದು ಸಮಾಜಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಇಂದಿಗೂ ಅವು ಜನರ ಬದುಕಿಗೆ ಆಶಾದಾಯಕವಾಗಿವೆ.

ಕಷ್ಟಪಟ್ಟರೆ ಪ್ರತಿಫಲ ಉಂಟು ಎಂಬುದಕ್ಕೆ ಇವರ ಜೀವನ ಸಾಧನೆ ಸಾಕ್ಷಿಯಾಗಿದೆ. ವಿದ್ಯಾರ್ಜನೆಗೆ ಹಾಗೂ ಸಾಧನೆಗೆ ಬಡತನ ಅಡ್ಡಿ ಬಾರದು. ಹಾಗಾಗಿ ಇಂತಹ ಮಹನೀಯರನ್ನು ಸ್ಫೂರ್ತಿಯಾಗಿಸಿಕೊಂಡು ಭವಿಷ್ಯ ಕಟ್ಟಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಸುರೇಶ್ ಅವರು ಅಕ್ಕಮಹಾದೇವಿ ಸಮಾಜದ ಸಹಾಯ ನಿಧಿಗೆ ಹತ್ತು ಸಾವಿರ ರೂ. ದೇಣಿಗೆ ನೀಡಿದರು. ಅತೀ ಹೆಚ್ಚು ಅಂಕ ಪಡೆದ ಪ್ರತಿಭಾನ್ವಿತ 20 ಮಂದಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜದ ಅಧ್ಯಕ್ಷೆ ಕೆ.ಕೆ. ಸುಶೀಲಮ್ಮ ಅಧ್ಯಕ್ಷತೆ ವಹಿಸಿದ್ದರು. ನಗರ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್ ಅವರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿದರು. ಅಕ್ಕಮಹಾದೇವಿ ಸಮಾಜದ ಕಾರ್ಯದರ್ಶಿ ದೊಗ್ಗಳ್ಳಿ ಸುವರ್ಣಮ್ಮ, ಉಪಾಧ್ಯಕ್ಷೆ ನೀಲಗುಂದ ಜಯಮ್ಮ , ವಿಜಯ ಬಸವರಾಜ್, ಸುಧಾ ಅಜ್ಜಂಪುರ ಸೇರಿದಂತೆ, ಸಮಾಜದ ಪದಾಧಿಕಾರಿಗಳು, ಪೋಷಕರು ಇದ್ದರು.

ವೈ. ಸುಮ ಸ್ವಾಗತಿಸಿದರು. ಸುನೀತ ಇಂದೂಧರ ನಿರೂಪಿಸಿದರು. ದೊಗ್ಗಳ್ಳಿ ಸುವರ್ಣಮ್ಮ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಂಜುಳ ಕಾಯಿ ವಂದಿಸಿದರು.


**ಶಿವ ಸಹಕಾರಿ ಬ್ಯಾಂಕ್ ನಿಯಮಿತ**
ಆಡಳಿತ ಕಛೇರಿ, ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ -1.

**ಪ್ರತಿಭಾ ಪುರಸ್ಕಾರಕ್ಕೆ ಆಹ್ವಾನ**

ನಮ್ಮ ಬ್ಯಾಂಕಿನ ಸದಸ್ಯರು / ಸಹ ಸದಸ್ಯರು ಮತ್ತು ನೌಕರರ ಮಕ್ಕಳಿಗೆ 2021-22ನೇ ಸಾಲಿನಲ್ಲಿ 10ನೇ ತರಗತಿ (ಎಸ್.ಎಸ್.ಎಲ್.ಸಿ CBSE & State Syllabus) ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಬ್ಯಾಂಕಿನ ಪ್ರತಿಭಾ ಪುರಸ್ಕಾರ ಯೋಜನೆಯನ್ವಯ ನಗದು ಬಹುಮಾನ ಮತ್ತು ಪ್ರಶಸ್ತಿ ಪತ್ರ ನೀಡಿ ಗೌರವಿಸಲು ಬ್ಯಾಂಕಿನ ಆಡಳಿತ ಮಂಡಳಿಯು ತೀರ್ಮಾನಿಸಿದೆ. ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಈ ಸಮಾರಂಭದಲ್ಲಿ ಸನ್ಮಾನಿಸಲಾಗುವುದು.

ಆಯ್ಕೆಗೊಂಡ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು 18ನೇ ಸೆಪ್ಟೆಂಬರ್ 2022ರಂದು ನಡೆಯುವ 2021-22ನೇ ಸಾಲಿನ ಬ್ಯಾಂಕಿನ ವಾರ್ಷಿಕ ಮಹಾಸಭೆಯಲ್ಲಿ ಸರ್ವಸದಸ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಗುವುದು. ಬ್ಯಾಂಕಿನ ಸದಸ್ಯರು ಮತ್ತು ನೌಕರರು ತಮ್ಮ ಮಕ್ಕಳ ಅಂಕಪಟ್ಟಿಯ ಧೃಢೀಕರಿಸಿದ ಜೆರಾಕ್ಸ್ ಪ್ರತಿಯನ್ನು ಹಾಗೂ ತಾವು ಹೊಂದಿರುವ ಸದಸ್ಯರ ಗುರುತಿನ ಕಾರ್ಡ್ ಲಗತ್ತಿಸಿ ದಿ.2.9.2022ರೊಳಗೆ ಬ್ಯಾಂಕಿನ ಆಡಳಿತ ಕಛೇರಿಗೆ ನೀಡಲು ವಿನಂತಿಸಲಾಗಿದೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯಲು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಮತ್ತು ಶಾಖಾ ವ್ಯವಸ್ಥಾಪಕರು ಗಳನ್ನು ಸಂಪರ್ಕಿಸಬೇಕಾಗಿ ಕೋರಲಾಗಿದೆ ಹಾಗೂ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳು ಆಡಳಿತ ಕಛೇರಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ.

**ಆಡಳಿತ ಮಂಡಳಿ**, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ

# ಜಗತ್ತಿಗೇ ಮಾದರಿಯಾಗಿ ನಿಲ್ಲುವ ಶಕ್ತಿ ಶರಣರ ಆಶಯದಲ್ಲಿತ್ತು

## 'ಮತ್ತೆ ಕಲ್ಯಾಣ' ಕಾರ್ಯಕ್ರಮದಲ್ಲಿ ಕುವೆಂಪು ವಿವಿ ಪ್ರಾಧ್ಯಾಪಕ ಡಾ. ಪ್ರಶಾಂತ ನಾಯಕ ವ್ಯಾಖ್ಯಾನ



ಸಾರ್ಥವಳ್ಳಿ (ತಿಪಟೂರು ತಾಲ್ಲೂಕು), ಆ. 17- 12 ನೇ ಶತಮಾನದ ಶರಣರ ಆಶಯವನ್ನು ನಾವು ನನಸು ಮಾಡಿದ್ದರೆ, ಇಡೀ ಜಗತ್ತಿಗೇ ಮಾದರಿಯಾಗಿ ನಿಲ್ಲುವ ಶಕ್ತಿಯನ್ನು ಪಡೆಯಬಹುದಿತ್ತು ಎಂದು ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಪ್ರಾಧ್ಯಾಪಕ, ಲೇಖಕ, ಕವಿ, ಚಿಂತಕ ಡಾ. ಪ್ರಶಾಂತ ನಾಯಕ ವ್ಯಾಖ್ಯಾನಿಸಿದರು.

ಇಲ್ಲಿನ ಶ್ರೀ ಉಚ್ಚಮ್ಮದೇವಿ ದೇವಸ್ಥಾನದ ಆವರಣದಲ್ಲಿ ಸಾಣೇಹಳ್ಳಿ ಶ್ರೀ ತರಳಬಾಳು ಜಗದ್ಗುರು ಶಾಖಾ ಮಠ ಮತ್ತು ಮತ್ತೆ ಕಲ್ಯಾಣ ಸಮಿತಿ ಸಾರ್ಥವಳ್ಳಿ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮತ್ತೆ ಕಲ್ಯಾಣ' ಕಾರ್ಯಕ್ರಮದಲ್ಲಿ 'ವಚನ ಸಂವಿಧಾನ' ಕುರಿತಂತೆ ಉಪನ್ಯಾಸ ನೀಡಿ ದರು.

ಆದರೆ ದುರದೃಷ್ಟ ಅವರ ಕನಸು ಇಂದು ಕನಸಾಗಿಯೇ ಉಳಿದಿದೆ. ಈ ಕಾರಣಕ್ಕಾಗಿಯೇ ಮತ್ತೆ ಕಲ್ಯಾಣದ ಅವಶ್ಯಕತೆ ಇದೆ. ದೇಶ, ಜಗತ್ತು ಹಾಳಾಗಿದೆ ಎನ್ನುವುದಕ್ಕಿಂತ ಮೊದಲು ನಾನು ಮತ್ತು ನನ್ನ ಕುಟುಂಬ ಸರಿಯಿದೆಯಾ ಎನ್ನುವುದನ್ನು ಅರಿತರೆ ಒಳಿತು.

ನಾವಾಡುವ ಮಾತು ಕೇವಲ ಆಕರ್ಷಕವಾಗಿರಬೇಕು ಎಂದಲ್ಲ; ಪ್ರಾಮಾಣಿಕವಾಗಿ ರಬೇಕು, ಸತ್ಯವಾಗಿರಬೇಕು. ಮಾತನಾಡುವಾಗ ಎಚ್ಚರಿಕೆಯಿರಬೇಕು ಎನ್ನುವುದು. ಇದೇ ಆಶಯ ಸಂವಿಧಾನದಲ್ಲಿಯೂ ರೂಪುಗೊಂಡಿದೆ ಎಂದರು.

ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, 12 ನೇ ಶತಮಾನದ ಪೂರ್ವದಲ್ಲಿರುವುದಕ್ಕಿಂತ 21 ನೇ ಶತಮಾನ ಹೆಚ್ಚು ಕಲುಷಿತಗೊಂಡಿದೆ.

ಪ್ರತಿಯೊಬ್ಬರೂ ಕಾಯಕ ಮಾಡಬೇಕು, ದುಡಿಯುವವರೆಲ್ಲರೂ ಊಟ ಮಾಡಬೇಕು ಎನ್ನುವ ವಾತಾವರಣ 12 ನೆಯ ಶತಮಾನದಲ್ಲಿತ್ತು. ಇಂದು ದಾಸೋಹ ಪ್ರಜ್ಞೆ ಇಲ್ಲವಾಗಿದೆ. ದೇವರಿಗೆ ಪೂಜೆ, ಅರ್ಚನೆ ಮಾಡುವುದಕ್ಕಿಂತ ಮತ್ತೊಬ್ಬರ ನೋವಿಗೆ ಸ್ಪಂದಿಸುವುದು ನಿಜವಾದ ಭಕ್ತನ ಸದ್ಗುಣ. ಸಂವಿಧಾನ ಹೇಳುವುದಕ್ಕಿಂತ ಹೆಚ್ಚಿನದನ್ನು ವಚನಗಳು ಹೇಳುತ್ತವೆ.

ಈ ಹಿನ್ನೆಲೆಯಲ್ಲಿ ಮಕ್ಕಳಲ್ಲಿ ವಚನಗಳನ್ನು ಓದುವ ಅಭ್ಯಾಸ ಬೆಳೆಸಿದರೆ 'ಮತ್ತೆ ಕಲ್ಯಾಣ' ಸಾರ್ಥಕವಾಗುವುದು. ಸಣ್ಣ-ಸಣ್ಣ ಕಾರಣಕ್ಕಾಗಿ ಮುನಿಸಿಕೊಳ್ಳದೆ ಪ್ರೀತಿ, ವಿಶ್ವಾಸ, ಸಹೋದರತ್ವ ಬೆಳೆಸಿಕೊಳ್ಳದಿದ್ದರೆ ಮನುಷ್ಯ ಶ್ರೇಷ್ಠನೆನಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮಲ್ಲಿನ ಕ್ಷುಲ್ಲಕ ಭಾವನೆಗಳನ್ನು ಹೊರ ಹಾಕಿದರೆ ಎಲ್ಲರೂ ನಮ್ಮವರಾಗಿಯೇ ಕಾಣುವರು. ಇದೊಂದು ವಿಲಾಸಿ, ಅದ್ದೂರಿ ಕಾರ್ಯಕ್ರಮವಲ್ಲ; ಆಲೋಚನೆಗಳನ್ನು ವಿಸ್ತರಿಸುವ ಕಾರ್ಯಕ್ರಮ ಎಂದರು.

ಸಾನ್ನಿಧ್ಯ ವಹಿಸಿದ್ದ ಚಿತ್ರದುರ್ಗದ ಶ್ರೀ ಮಾಚಿದೇವ ಮಹಾ ಸಂಸ್ಥಾನದ ಶ್ರೀ ಮಡಿವಾಳ ಮಾಚಿದೇವ ಸ್ವಾಮೀಜಿ ಮಾತನಾಡಿ, 'ಮತ್ತೆ ಕಲ್ಯಾಣ' ಅಭಿಯಾನ ಮನುಷ್ಯರನ್ನು ಪರಿಷ್ಕರಿಸುವ ಕೆಲಸ ಮಾಡುತ್ತಿರುವುದು ಅತ್ಯಂತ ಸ್ತುತ್ಯಾರ್ಹವಾದ ಕಾರ್ಯ ಎಂದರು.

ಶಿವಸಂಚಾರದ ಕೆ.ದಾಕ್ಷಾಯಣಿ, ಹೆಚ್. ಎಸ್. ನಾಗರಾಜ್ ಮತ್ತು ತಬಲಾ ಸಾಥಿ ಶರಣ್ ವಚನ ಗೀತೆಗಳನ್ನು ಹಾಡಿದರು. ಕಲಾವಿದರು ವಚನ ನೃತ್ಯರೂಪಕ ನೀಡಿದರು.

ಜಯದೇವಪ್ಪ ಸ್ವಾಗತಿಸಿದರೆ, ಅಧ್ಯಾಪಕಿ ಕವಿತಾ ಕಾರ್ಯಕ್ರಮ ನಡೆಸಿಕೊಟ್ಟರು. ವಿಜಯಕುಮಾರ್ ವಂದಿಸಿದರು. ಸಭಾ ಕಾರ್ಯಕ್ರಮದ ನಂತರ ವೈ. ಡಿ. ಬದಾಮಿ ನಿರ್ದೇಶನದ 'ಮರಣವೇ ಮಹಾನವಮಿ' ನಾಟಕವನ್ನು ಪ್ರದರ್ಶಿಸಲಾಯಿತು.

# ಹಿರಿಯ ಪತ್ರಕರ್ತ ಜಿಗಳಿ ಪ್ರಕಾಶ್ ಅವರಿಗೆ ಸ್ವಾತಂತ್ರ್ಯೋತ್ಸವದ ಗೌರವ



ಹರಿಹರ, ಆ. 17- ಇಲ್ಲಿನ ಗಾಂಧಿ ಮೈದಾನದಲ್ಲಿ ಸೋಮವಾರ ಜರುಗಿದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ 75 ಸಾಧಕರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಈ ವೇಳೆ ಮಲೇಬೆನ್ನೂರಿನ 'ಜನತಾವಾಣಿ' ಹಿರಿಯ ವರದಿಗಾರ ಜಿಗಳಿ ಪ್ರಕಾಶ್ ಅವರನ್ನು ಶಾಸಕ ಎಸ್. ರಾಮಪ್ಪ, ತಹಶೀಲ್ದಾರ್ ಡಾ. ಬಿ.ಎಂ. ಅಶ್ವತ್ಥ್, ಸಿಪಿಐ ಸತೀಶ್ ಕುಮಾರ್, ತಾ.ಪಂ. ಇಓ ಗಂಗಾಧರನ್, ಬಿಇಓ ಸಿದ್ದಪ್ಪ, ಟಿಹೆಚ್‌ಓ ಡಾ. ಚಂದ್ರಮೋಹನ್, ನಗರಸಭೆ ಅಧ್ಯಕ್ಷರಾದ ಶ್ರೀಮತಿ ಶಾಹೀನಾಬಾನು ದಾದಾಪೀರ್, ನಿವೃತ್ತ ಪೊಲೀಸ್ ಅಧಿಕಾರಿ ಕುಣೆಬೆಳಕೆರೆ ದೇವೇಂದ್ರಪ್ಪ ಅವರುಗಳನ್ನು ಸನ್ಮಾನಿಸಿ, ಗೌರವಿಸಿದರು.

ಇದೇ ದಿನ ಮಲೇಬೆನ್ನೂರು ನಾಡ ಕಛೇರಿಯಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ನಿವೃತ್ತ ಸೈನಿಕರೊಂದಿಗೆ ಪತ್ರಕರ್ತ ಜಿಗಳಿ ಪ್ರಕಾಶ್ ಅವರನ್ನು ಉಪ ತಹಶೀಲ್ದಾರ್ ಆರ್. ರವಿ, ಕಂದಾಯ ನಿರೀಕ್ಷಕ ಆನಂದ ಸನ್ಮಾನಿಸಿದರು. ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

# ಬ್ರಾಹ್ಮಣ ಸಮಾಜದ ತಾಲ್ಲೂಕು ಅಧ್ಯಕ್ಷರಾಗಿ ಡಾ. ಶಶಿಕಾಂತ್



ದಾವಣಗೆರೆ, ಆ.17- ನಗರದ ದಂತ ವೈದ್ಯ ಡಾ. ಶಶಿಕಾಂತ್ ಅವರು ದಾವಣಗೆರೆ ತಾಲ್ಲೂಕು ಬ್ರಾಹ್ಮಣ ಸಮಾಜದ ಅಧ್ಯಕ್ಷರಾಗಿ ನಿನ್ನೆ ನಡೆದ ಸಂಸ್ಥೆಯ ಕಾರ್ಯಕಾರಿಣಿ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಡಾ. ಶಶಿಕಾಂತ್ ಅವರನ್ನು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯಿಂದ ಹಾಗೂ ತಾಲ್ಲೂಕು ಬ್ರಾಹ್ಮಣ ಯುವ ವೇದಿಕೆಯಿಂದ ಅಭಿನಂದಿಸಲಾಯಿತು.

ಜಿಲ್ಲಾ ಬ್ರಾಹ್ಮಣ ಸಮಾಜದ ಕಾರ್ಯದರ್ಶಿ ಮಾಧವ ಪ್ರಸಾದ್ ಪದಕಿ, ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಅಧ್ಯಕ್ಷ ರಾಮನಾಥ್ ಪಿ.ಸಿ., ಜಿಲ್ಲಾ ಕಾರ್ಯದರ್ಶಿ ಅನಿಲ್ ಬಾರೆಂಗಳ್, ಜಿಲ್ಲಾ ಖಜಾಂಚಿ ಶ್ರೀಕಾಂತ್ ಎಂ.ಜಿ, ಕರ್ನಾಟಕ ರಾಜ್ಯ ಬ್ರಾಹ್ಮಣ ನಿಗಮ ಮಂಡಳಿ ನಿರ್ದೇಶಕ ಶ್ರೀನಿವಾಸ್ ಪಿ.ಸಿ., ಸಮಾಜದ ತಾಲ್ಲೂಕು ಉಪಾಧ್ಯಕ್ಷ ಬದರಿಪ್ರಸಾದ್, ಸದಸ್ಯರುಗಳಾದ ರಜತ್, ಮಧ್ವಪ್ರಸಾದ್, ವಿನಯ್ ಪದಕಿ, ರಾಘವೇಂದ್ರ ಸತ್ಯವಾನ್ ಉಪಸ್ಥಿತರಿದ್ದು, ಶುಭ ಕೋರಿದರು.

# ಶೇ.7ರ ಕೃಷಿ ಸಾಲಕ್ಕಾಗಿ ಕೇಂದ್ರದಿಂದ 34 ಸಾವಿರ ಕೋಟಿ ರೂ.

ನವದೆಹಲಿ, ಆ. 17 – ರಿಸರ್ವ್ ಬ್ಯಾಂಕ್ ಬಡ್ಡಿ ದರಗಳನ್ನು ಹೆಚ್ಚಿಸಿರುವ ಹಿನ್ನೆಲೆಯಲ್ಲಿ, 3 ಲಕ್ಷ ರೂ.ಗಳವರೆಗಿನ ಅಲ್ಪಾವಧಿ ಕೃಷಿ ಸಾಲದ ಬಡ್ಡಿ ದರವನ್ನು ಶೇ.7ರ ಹಂತದಲ್ಲೇ ಉಳಿಸಿಕೊಳ್ಳಲು ಕೇಂದ್ರ ಸಂಪುಟ 34,856 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದೆ.

ಸಂಪುಟ ಸಭೆಯ ನಂತರ ಈ ವಿಷಯ ತಿಳಿಸಿರುವ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಸಿಂಗ್ ಠಾಕೂರ್, 2022-23ರಿಂದ 2024-25ರವರೆಗೆ ನೀಡಲಾಗುವ ಅಲ್ಪಾವಧಿ ಸಾಲದ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲಾಗುವುದು ಎಂದಿದ್ದಾರೆ.

ಈ ಹಿಂದೆ, ಬ್ಯಾಂಕುಗಳು ತಾವೇ ಶೇ.7ರ ಬಡ್ಡಿ ದರದಲ್ಲಿ ಕೃಷಿ ಸಾಲ ಒದಗಿಸಲು ಸಾಧ್ಯವಾಗುತ್ತಿತ್ತು. ಹೀಗಾಗಿ ಮೇ 2020ರಂದು ಕಡಿಮೆ ಬಡ್ಡಿ ದರದ ಸಾಲ ನೀಡಲು ಸರ್ಕಾರ ಹಣ ನೀಡುವುದನ್ನು ಸರ್ಕಾರ ನಿಲ್ಲಿಸಿತ್ತು.

ಆದರೆ, ರಿಸರ್ವ್ ಬ್ಯಾಂಕ್ ರೆಪೋ ದರವನ್ನು 140 ಮೂಲ ಅಂಕಗಳಷ್ಟು ಹೆಚ್ಚಿಸಿದ ನಂತರ, ಬ್ಯಾಂಕುಗಳು ಶೇ.7ರ ಬಡ್ಡಿ ದರದಲ್ಲಿ ಸಾಲ ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಬ್ಯಾಂಕುಗಳಿಗೆ ಸರ್ಕಾರ ಹಣ ನೀಡಬೇಕಾಗಿ ಬಂದಿದೆ.

# ಕುಂದೂರು ಮಾರ್ಗದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಕುಂದೂರು ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಹಳ್ಳಿಗಳಿಗೆ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಹೊನ್ನಾಳಿ ಉಪವಿಭಾಗದ ರವಿಕಿರಣ ತಿಳಿಸಿದ್ದಾರೆ.

# ಗ್ರಾಮಾಂತರದಲ್ಲಿ ವಿದ್ಯುತ್ ವ್ಯತ್ಯಯ

ಶ್ಯಾಗಲೆ -ಕುಕ್ಕುವಾಡ ಮಾರ್ಗದ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಇರುವ ಕಾರಣ ಇಂದು ಬೆಳಿಗ್ಗೆ 10.30 ರಿಂದ ಸಂಜೆ 5.30 ರವರೆಗೆ ಈ ಕೇಂದ್ರದಿಂದ ಸರಬ ರಾಜಾಗುವ ಗ್ರಾಮಗಳಲ್ಲಿ ವಿದ್ಯುತ್ ಇರುವುದಿಲ್ಲ.

ಶ್ಯಾಗಲೆ, ಕಂದಗಲ್ಲು, ಕೋಡಿಹಳ್ಳಿ, ಗೋಣಿವಾಡ, ತ್ಯಾವಣಗಿ, ನಲ್ಕುದುರೆ, ದೊಡ್ಡ ಘಟ್ಟ, ಕತ್ತಲ ಗೆರೆ, ಕಾರಿಗನೂರು, ಬೆಳಲಗೆರೆ, ಅರೇಹಳ್ಳಿ, ನವಿಲೇ ಹಾಳು, ಕಬ್ಬಳ ಸುತ್ತಮುತ್ತ ವಿದ್ಯುತ್ ಇರುವುದಿಲ್ಲ.


## ಮನೆ ಕೆಲಸಕ್ಕೆ ಬೇಕಾಗಿದ್ದಾರೆ

ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.
ವಾಸಕ್ಕೆ ಸರ್ವೀಸ್ ಕ್ವಾಟ್ರರ್ಸ್ ಕೊಡಲಾಗುವುದು.
ಚಿಕ್ಕ ಕುಟುಂಬವಿರಬೇಕು.
ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :
96861 95326,
96861 95327, 96861 95323


# ವಿಕಲಚೇತನ ವ್ಯಕ್ತಿಗೆ ಆಧಾರ್ ಕಾರ್ಡ್ ನೀಡಿದ ಜಿಲ್ಲಾಧಿಕಾರಿ



ದಾವಣಗೆರೆ, ಆ. 17- ಜಗಳೂರು ತಾಲ್ಲೂಕು ಜ್ಯೋತಿ ಪುರ ಗ್ರಾಮದ ಸತೀಶ್ ನಾಯ್ಕ್ 30 ವರ್ಷ ವಿಕಲಚೇತನ ವ್ಯಕ್ತಿ ಇವರಿಗೆ ಜಿಲ್ಲಾಧಿಕಾರಿ ಶಿವಾನಂದ ಕಪಾಸಿ, ವ್ಯಕ್ತಿಯ ಸ್ವಗೃಹಕ್ಕೆ ತೆರಳಿ ಆಧಾರ್ ಕಾರ್ಡ್ ಮತ್ತು ಮಾಸಾಶನದ ಆದೇಶ ಪತ್ರ ವಿತರಿಸಿದರು.

## ನಿವೃತ್ತ ASI ಅಮಾನುಲ್ಲಾ ಸಾಬ್ ನಿಧನ



ದಾವಣಗೆರೆ ಕೆ.ಟಿ.ಜೆ ನಗರ 3ನೇ ಕ್ರಾಸ್ ವಾಸಿ ನಿವೃತ್ತ ASI

**ಅಮಾನುಲ್ಲಾ ಸಾಬ್**

ಇವರು, ದಿನಾಂಕ 17.8.2022ರ ಬುಧವಾರ ಸಂಜೆ 6.50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 67 ವರ್ಷ ವಯಸ್ಸಾಗಿತ್ತು.

ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತಿಮಕ್ರಿಯೆಯು ದಿನಾಂಕ 18.8.2022ರ ಗುರುವಾರ ಮಧ್ಯಾಹ್ನ 12 ಗಂಟೆಗೆ ನಗರದ ಪಿ.ಬಿ ರಸ್ತೆಯ ಹಳೇ ಖಬರಸ್ಥಾನದಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ

78921-03737, 90663-45346
88928-23441, 90083-96282

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ವಾಸಿ

**ದಿ|| ಹದಡಿ ಹನುಮಂತಪ್ಪ ಮತ್ತು ಮಕ್ಕಳು**

ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 11.08.2022ನೇ ಗುರುವಾರ ಸಾಯಂಕಾಲ 6.35ಕ್ಕೆ ನಮ್ಮ ಪೂಜ್ಯ ತಂದೆಯವರಾದ

**ಹದಡಿ ಹನುಮಂತಪ್ಪ ಹೆಚ್.**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಶಿವಗಣಾರಾಧನೆ'ಯನ್ನು**

ದಿನಾಂಕ : 19.08.2022ನೇ ಶುಕ್ರವಾರ ಬೆಳಿಗ್ಗೆ 09.30ಕ್ಕೆ ಶ್ರೀ ಗಡಿಚೌಡೇಶ್ವರಿ ಸಮುದಾಯ ಭವನ, ಕುಂದುವಾಡ ರೋಡ್, ಚಿಗಟೇರಿ ಲೇಔಟ್‌ನಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತ ಕುಟುಂಬ ವರ್ಗ :

ಮಕ್ಕಳು, ಸೊಸೆಯಂದಿರು, ಅಣ್ಣ-ತಮ್ಮಂದಿರು ಮತ್ತು ಮೊಮ್ಮಕ್ಕಳು ಹಾಗೂ ಹದಡಿ ವಂಶಸ್ಥರು, ದಾವಣಗೆರೆ.

ಫೋನ್ : 97421 12887

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ







# ದಾವಣಗೆರೆ ಕ್ಲಬ್‌ನ ಹಿರಿಯ ಸದಸ್ಯರುಗಳಿಗೆ ಆತ್ಮೀಯ ಸನ್ಮಾನ



75ನೇ ಸ್ವಾತಂತ್ರ್ಯ 'ಅಮೃತ ಮಹೋತ್ಸವ'ದ ಅಂಗವಾಗಿ ದಾವಣಗೆರೆ ಕ್ಲಬ್ ಆವರಣದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ **ದಾವಣಗೆರೆ ಕ್ಲಬ್‌ನ** ಹಿರಿಯ ಸದಸ್ಯರುಗಳನ್ನು ಆತ್ಮೀಯವಾಗಿ ಸನ್ಮಾನಿಸಿ, ಗೌರವಿಸಲಾಯಿತು.



ಶ್ರೀ ಜಯ್ಯಪ್ಪ ಎ. ಶ್ರೀ ರುದ್ರಮುನಿಸ್ವಾಮಿ ಶ್ರೀ ಎಸ್.ಜಿ. ಶಿವಾನಂದಪ್ಪ ಶ್ರೀ ಎ. ಸಿದ್ದವೀರಪ್ಪ ಶ್ರೀ ಎಸ್.ಎನ್. ಬಸವರಾಜ್ ಶ್ರೀ ಬಿ.ಹೆಚ್. ಪರಶುರಾಮಪ್ಪ ಶ್ರೀ ಟಿ. ಶಂಕರಪ್ಪ ಶ್ರೀ ಆರ್.ವಿ. ಬಕ್ಕಪ್ಪ ಶ್ರೀ ಸದಾನಂದ್ ಅಂಗಡಿ ಶ್ರೀ ಅಥಣಿ ವೀರಣ್ಣ



ಶ್ರೀ ಡಿ.ಎನ್. ರೇವಣಸಿದ್ದಪ್ಪ ಶ್ರೀ ಎಸ್.ಎಂ. ವೀರಪ್ಪ ಡಾ|| ಎಸ್.ಎಂ. ಬ್ಯಾಡಗಿ ಶ್ರೀ ಆರ್. ಗೋಪಾಲ್ ಶೆಟ್ಟಿ ಶ್ರೀ ಕೆ.ಜಿ. ರೇವಣಸಿದ್ದಪ್ಪ ಶ್ರೀ ಸಿ. ಮುರುಗೆಪ್ಪ ಶ್ರೀ ಎಸ್.ಟಿ. ಕುಸುಮಶೆಟ್ಟಿ ಶ್ರೀ ಎಸ್.ಕೆ. ವೀರಣ್ಣ ಶ್ರೀ ಹೆಚ್. ನಂಜುಂಡಪ್ಪ ಶ್ರೀ ಆರ್.ಎಲ್. ರಮಾನಂದ್

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte